# ಯುಗರಶ್ಮಿ

★ ಪ್ರಪಂಚ ಸ್ವಯಂಭು?

★ ಕ್ರೈಸ್ತಮತ ಮತ್ತು ಉಪವಾಸ

★ ಇಸ್ಲಾಂ ನವೀನ ಪಾಶ್ಚಿಮಾತ್ಯರ ನೋಟದಲ್ಲಿ

★ ಪ್ರವಾದಿಗಳು ಮತ್ತು ಅವರ ಶತ್ರುಗಳು

★ ಪ್ರೊ| ಅಬ್ದುಸ್ಸಲಾಮರ ಭಾರತ ಸಂಚಾರ

★ ಖುರ್‌ಆನ್ ಭಾಷಾಂತರಕ್ಕೆ ಮುಟ್ಟುಗೋಲು— ಅನುಚಿತ ಕ್ರಮ

★ ಇಸ್ಲಾಂ ಮತ ತತ್ತ್ವಜ್ಞಾನ

ತ್ರೈಮಾಸಿಕ

ಆಗಸ್ಟ್ 1981

ಬೆಲೆ: ರೂ. 1-00

ದೇವನು ನಿಮ್ಮ ಸಹಾಯಕ್ಕೆ ಇದ್ದರೆ ನಿಮ್ಮನ್ನು ಸೋಲಿಸಲು ಯಾರಿಂದಲೂ ಸಾಧ್ಯವಾಗದು. ಆದರೆ ಅವನು ನಿಮ್ಮ ಕೈಬಿಟ್ಟರೆ ಮತ್ತೆ ನಿಮ್ಮ ಸಹಾಯಕ್ಕೆ ಯಾರಿದ್ದಾರೆ? ಆದುದರಿಂದ ಸತ್ಯವಿಶ್ವಾಸಿಗಳು ದೇವನ ಮೇಲೆ ಪೂರ್ಣ ಭರವಸೆಯನ್ನಿಡಲಿ.

—ಪವಿತ್ರ ಖುರ್‌ಆನ್ (3 : 161)

# ಯುಗರಶ್ಮಿ ತ್ರೈಮಾಸಿಕ

10-23-1008, ಅನ್ಸಾರಿ ರೋಡ್, ಬಂದರ್, ಮಂಗಳೂರು-575 001.

ಸಂಪುಟ: 7 ಜೂನ್-ಆಗಸ್ಟ್ 1981 / ಇಹ್‌ಸಾನ್-ಜುಹೂರ್ 1360 ಸಂಚಿಕೆ: 1

ಬಿಡಿಪ್ರತಿ: ರೂ. 1-00 ವಾರ್ಷಿಕ ಚಂದಾ: ರೂ. 4-00


ವಿಷಯ ಸೂಚಿಕೆ:


| | ಪುಟ |
|---|---|
| * ಯುಗರಶ್ಮಿಯ ಏಳನೆ ಹರೆಯ ... ... | 1 |
| * ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು ... ... | 2 |
| * ಲೌಕಿಕ ದಾರ್ಶನಿಕರನ್ನು ಹಿಂಬಾಲಿಸಬೇಡಿರಿ ... ... | 2 |
| * ಪ್ರಪಂಚ ಸ್ವಯಂಭು ? ... ... | 3 |
| * ಕ್ರೈಸ್ತ ಮತ ಮತ್ತು ಉಪವಾಸ ... ... | 7 |
| * ಇಸ್ಲಾಂ ನವೀನ ಪಾಶ್ಚಿಮಾತ್ಯರ ನೋಟದಲ್ಲಿ—ಇಸ್ಲಾಮಿಕ ನಿಯಮಗಳು ಮತ್ತು ನಾಗರಿಕತೆ | 9 |
| * ಪ್ರವಾದಿಗಳು ಮತ್ತು ಅವರ ಶತ್ರುಗಳು ... ... | 19 |
| * ಸಂಪಾದಕರಿಗೆ ಪತ್ರ ... ... | 31 |
| * ಪ್ರೊಫೆಸರ್ ಅಬ್ದುಸ್ಸಲಾಂ ಅವರ ಭಾರತ ಸಂಚಾರ ... ... | 32 |
| * ಖುರ್‌ಆನ್ ಭಾಷಾಂತರಕ್ಕೆ ಮುಟ್ಟುಗೋಲು - ಅನುಚಿತ ಕ್ರಮ ... | 37 |
| * ಪುಸ್ತಕ ವಿಭಾಗ - ಇಸ್ಲಾಂ ಮತ ತತ್ತ್ವಜ್ಞಾನ | |
| * ಪ್ರತಿಕ್ರಿಯೆ | |



## AHMADIYYA URDU LITERATURE

1 Ahmadiyyat Ka Paigham
2 Imam Mahdi Ka Zuhoor
3 Sadakat Hazrat Masih Mauwood
4 Silsila Nubuwwat Allah Ka Abdi Ahd Hai
5 Khatamunnabiyyen

**WILL BE SENT FREE**

Apply with 25 paise Stamp for each book to :

**The Editor : "YUGARASHMI" Kannada Quarterly,**

10-23/1008, Ansari Road, Bunder, Mangalore-575 001

بسم الله الرحمن الرحيم

نحمده ونصلي على رسوله الكريم

# ಯುಗರಶ್ಮಿ

ಸಂಪಾದಕ: ಮುಹಮ್ಮದ್ ಯೂಸುಫ್

ಸಂಪುಟ: 7 | ಜೂನ್-ಆಗಸ್ಟ್ 1981 / ಇಹ್ಸಾನ್-ಜ಼ುಹೂರ್ 1360 | ಸಂಚಿಕೆ: 1

## ಯುಗರಶ್ಮಿಯ ಏಳನೆ ಹರೆಯ

ಈ ಸಂಚಿಕೆಯೊಂದಿಗೆ "ಯುಗರಶ್ಮಿ" ತನ್ನ ಏಳನೆಯ ವಯಸ್ಸಿಗೆ ಅಡಿಯಿಟ್ಟಿದೆ. ಅಲ್ಲಾಹನಿಗೆ ಸರ್ವ ಸ್ತುತಿ.

ಪತ್ರಿಕೋದ್ಯಮ ಸುಲಭ ವೃತ್ತಿಯಲ್ಲವೆಂದು ಆ ಬಗ್ಗೆ ಪರಿಚಯವಿರುವವರಿಗೆ ಬೇರೆ ಹೇಳಬೇಕಾಗಿಲ್ಲ. ಒಂದರ ನಂತರ ಇನ್ನೊಂದರಂತೆ ಅಭಿಮುಖೀಕರಿಸುವ ಅನೇಕ ಎಡರು ತೊಡರುಗಳನ್ನು ನಿವಾರಿಸಿ ಸುಗಮವಾಗಿ ಮುಂದುವರಿಯುವರೆ ಬಲು ಪ್ರಯಾಸ. "ಯುಗರಶ್ಮಿ" ಹುಟ್ಟಿದ ಬಳಿಕ ಸಹ ಅನೇಕ ಪತ್ರಿಕೆಗಳು ಜನ್ಮತಾಳಿ ಕಣ್ಮರೆಯಾಗಿವೆ. ಯುಗರಶ್ಮಿಗೂ ಅನೇಕ ಅಡ್ಡಿ ಆತಂಕಗಳು ಎದುರಾಗುತ್ತವೆ. ಆದರೆ ಇಸ್ಲಾಂ ಧರ್ಮದ ಬಗ್ಗೆ ತಪ್ಪು ಭಾವನೆಗಳು ಲೋಕದಲ್ಲೆಲ್ಲಾ ವ್ಯಾಪಿಸಿರುವ ಈ ಕಾಲದಲ್ಲಿ, ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಜ಼್ರತ್ ಮಿರ್ಜ಼ಾ ಗುಲಾಂ ಅಹ್ಮದ್ ಅವರು ಬೋಧಿಸಿದ ಇಸ್ಲಾಮಿಕ ಅಧ್ಯಾಪನಗಳ ಸೊಬಗನ್ನು ಕನ್ನಡಿಗರಿಗೂ ತೋರಿಸಬೇಕೆಂಬ ನಮ್ಮ ಹಂಬಲವೇ ಒಂದು ಕಡೆಯಲ್ಲಿ ಮುನ್ನಡೆಯುವಂತೆ ನಮಗೆ ಸ್ಫೂರ್ತಿದಾಯಕವಾದರೆ, ಓದುಗರು ವ್ಯಕ್ತಪಡಿಸುವ ಪ್ರತಿಕ್ರಿಯೆಗಳು ಮತ್ತೊಂದು ಕಡೆಯಲ್ಲಿ ನಮಗೆ ಉತ್ತೇಜನಕಾರಿಯಾಗಿವೆ. ಎಲ್ಲಕ್ಕಿಂತ ಮಿಗಿಲಾಗಿ ಅಲ್ಲಾಹನ ಅನುಗ್ರಹವೇ ನಮ್ಮ ಯಶಸ್ಸಿಗೆ ಕಾರಣ.

"ಯುಗರಶ್ಮಿ"ಯು ಚಂದಾದಾರರ ಹೊರತು ಸಾರ್ವಜನಿಕರ ನೆರವನ್ನಾಗಲಿ, ಪತ್ರಿಕೆಯ ಜೀವಾಳವೆನಿಸುವ ಜಾಹೀರಾತನ್ನಾಗಲಿ ಅವಲಂಬಿಸಿಲ್ಲವೆಂಬುದು ಗಮನಾರ್ಹ. ಹಾಗಿರುವಾಗ ಸ್ವಾಭಾವಿಕವಾಗಿಯೇ ಅಡೆತಡೆಗಳು ಇನ್ನೂ ಹೆಚ್ಚುತ್ತವೆ. ಹಾಗಿದ್ದರೂ ಕಳೆದ ಆರು ವರ್ಷಗಳಲ್ಲಿ ಅದು ಮೆಲು ನಡೆಯಲ್ಲಾದರೂ ಅವ್ಯಾಹತವಾಗಿ ಮುಂದೆ ಸಾಗುತ್ತಿದೆ. ಅದಕ್ಕಾಗಿ ನಾವು ಸರ್ವಶಕ್ತನಾದ ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸುತ್ತೇವೆ; ಹಾಗೂ ಮುಂದೆಯೂ ಅವನು ನಮಗೆ ಸಫಲತೆಯನ್ನು ದಯಪಾಲಿಸಲಿ ಎಂದು ಬೇಡುತ್ತೇವೆ.

—ಸಂಪಾದಕ.

# ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು

1. ಕೈದಿಗಳೊಡನೆ ಉತ್ತಮ ರೀತಿಯಲ್ಲಿ ವರ್ತಿಸಬೇಕು.

2. ಮಿತವ್ಯಯ ಅಭ್ಯಾಸ ಮಾಡಿದವನು ದರಿದ್ರನಾಗಲಾರನು.

3. ಇಚ್ಛಿಸಿದ್ದನ್ನೆಲ್ಲಾ ತಿನ್ನುವುದು ದುರ್ವ್ಯಯವಾಗಿದೆ.

4. ನಿಮ್ಮ ಕೈಗಳನ್ನು ನಿಯಂತ್ರಿಸಿರಿ.

5. ಏನಾದರೂ ಕೆಲಸದಲ್ಲಿ ನಿರತವಾಗಿರುವುದು ನಿಮಗೆ ಒಳಿತನ್ನುಂಟುಮಾಡುವುದು.

6. ಉದ್ದೇಶ ರಹಿತ ಮತ್ತು ನಿಷ್ಪ್ರಯೋಜಕವಾದುದನ್ನು ಕೈಬಿಡುವುದು ಇಸ್ಲಾಮಿಗೆ ಅನುಯೋಜ್ಯವಾಗಿದೆ.

7. ಬೀದಿಯ ಗಲಾಟೆಯಿಂದ ದೂರವಿದ್ದುಕೊಳ್ಳಿರಿ.

8. ಬೀದಿಯಲ್ಲಿ ತಿನ್ನುವುದು ಅಸಭ್ಯತನ.

9. ಕೇಳದೆಯೇ ನಿಮಗೆ ಏನಾದರೂ ನೀಡಲ್ಪಟ್ಟರೆ, ಅದರಿಂದ ಒಂದಂಶವನ್ನು ತಿಂದು ಇನ್ನೊಂದಂಶವನ್ನು ದಾನ ಮಾಡಿರಿ.

10. ಹಸಿದ ಹೊಟ್ಟೆಗೆ ಅನ್ನ ನೀಡುವುದೇ ಅತ್ಯುತ್ತಮ ದಾನ.

(ಸರ್ ಮುಹಮ್ಮದ್ ಝಫರುಲ್ಲಾ ಖಾನರ **Wisdom of the Holy Prophet Muhammad** ಎಂಬ ಪುಸ್ತಕದಿಂದ ಆಯ್ದುದು)

---

# ಲೌಕಿಕ ದಾರ್ಶನಿಕರನ್ನು ಹಿಂಬಾಲಿಸಬೇಡಿರಿ

"ಲೌಕಿಕ ದಾರ್ಶನಿಕರನ್ನು ನೀವು ಹಿಂಬಾಲಿಸಬೇಡಿರಿ; ಧ್ವೈಷಣಿಕವಾದ ಅವರ ಪ್ರಭಾವಕ್ಕೆ ತುತ್ತಾಗಬೇಡಿರಿ. ಕೇಂದ್ರೀಕೃತವಾದೊಂದು ಅಜ್ಞತೆಯ ವಿವಿಧ ರೂಪಗಳಾಗಿವೆ ಅವೆಲ್ಲಾ. ದೇವನು ಅವನ ಪವಿತ್ರ ಗ್ರಂಥದಲ್ಲಿ ನಿಮಗೆ ನೀಡಿರುವುದೇ ಯಥಾರ್ಥ ಹಾಗೂ ಸತ್ಯಪೂರ್ಣ ತತ್ತ್ವಜ್ಞಾನ. ಈ ಭೌತಿಕ ತತ್ತ್ವಶಾಸ್ತ್ರಗಳನ್ನು ಸ್ವಾಯತ್ತ ಮಾಡಿರುವವರು ನಾಶ–ವಿಪತ್ತುಗಳ ಬದಿಯಲ್ಲಿ ನಿಂತವರಾಗಿದ್ದಾರೆ. ಯಥಾರ್ಥ ಜ್ಞಾನವನ್ನರಸಿ ಪವಿತ್ರ ಗ್ರಂಥದೆಡೆಗೆ ಹೋಗುವವರು ವಿಜಯಿಗಳು. ನೀವು ಅಜ್ಞತೆಯ ಹಾದಿಯಲ್ಲಿ ಚಲಿಸುವುದೇಕೆ? ಅಂಧರನ್ನು ಹಿಂಬಾಲಿಸಿಕೊಂಡೋ ನೀವು ಓಡುವುದು– ಅವರು ನಿಮಗೆ ಸರಿಯಾದ ದಾರಿ ತೋರಿಸಿಕೊಡುವರೆಂಬ ಆಶೆಯಿಂದ? ಓ ಅವಿವೇಕಿಗಳೆ, ಸ್ವಯಂ ಕುರುಡನಾಗಿರುವವನು ನಿಮಗೆ ಮಾರ್ಗ ತೋರಿಸಿಕೊಡುವುದು ಹೇಗೆ ?" (ತಅಲೀಂ).

—ಹಝ್ರತ್ ಅಹ್ಮದ್
ಅಹ್ಮದಿಯಾ ಸಂಘಟನೆಯ ಸ್ಥಾಪಕರು.

# ಪ್ರಪಂಚ ಸ್ವಯಂಭು?

★ ಮಿರ್ಝಾ ಬಶೀರ್ ಅಹ್ಮದ್ ಎಂ. ಎ.

ಹಲವರ ಹೃದಯದಲ್ಲಿ ಉದಿಸುವ ಹಾಗೂ ಯುರೋಪಿನ ನಾಸ್ತಿಕರು ಸಾಮಾನ್ಯವಾಗಿ ಹೇಳುವ ಒಂದು ಸಂಶಯಕ್ಕೆ ನಾನಿಲ್ಲಿ ಉತ್ತರ ಹೇಳಲು ಬಯಸುತ್ತೇನೆ. ಆ ಸಂಶಯ ಇದಾಗಿದೆ– ದೇವನು ಸ್ವಯಂಭುವೆಂದೂ ಒಬ್ಬ ಸೃಷ್ಟಿಕರ್ತನಾಗಲಿ ಒಡೆಯನಾಗಲಿ ಇಲ್ಲದೆ ತನ್ನಷ್ಟಕ್ಕೇನೆ ಸದಾ ಕಾಲ ಇರುವವನೆಂದೂ ಒಪ್ಪುವುದಾದರೆ ಈ ಪ್ರಪಂಚದ ಕುರಿತು ಸಹ ಹಾಗೆಯೇ ಒಪ್ಪಿಕೊಂಡು ಎಲ್ಲಾ ವಿವಾದಗಳನ್ನೂ ಆರಂಭದಲ್ಲೇ ಕೊನೆಗಾಣಿಸಬಾರದೇ? ಆದರೆ ಗಾಢವಾಗಿ ಆಲೋಚಿಸಿದರೆ, ಈ ಸಂಶಯ ಆಧಾರರಹಿತ ಹಾಗೂ ಅರ್ಥಶೂನ್ಯವೆಂದು ತಿಳಿದುಕೊಳ್ಳಬಹುದು. ಯಥಾರ್ಥದಲ್ಲಿ ಈ ಸಂಶಯಕ್ಕೆ ಆಧಾರ, ದೇವನು ಸೃಷ್ಟಿಕರ್ತನಿಲ್ಲದೆ ತನ್ನಷ್ಟಕ್ಕೆ ಉಂಟಾದವನಾದರೆ ಇತರ ವಸ್ತುಗಳು ಸಹ ಹಾಗೆ ಆಗಲು ಸಾಧ್ಯತೆಯುಂಟೆಂಬುದಾಗಿದೆ. ಇದು ಸಾಬೀತಾದರೆ ಈ ಲೋಕವನ್ನು ಸೃಷ್ಟಿಯೆಂದು ತಿಳಿದುಕೊಳ್ಳುವ ಹಾಗೂ ಅದಕ್ಕೆ ಮಿಗಿಲಾದ ಒಬ್ಬ ದೇವನ ಅಸ್ತಿತ್ವದ ಕುರಿತು ವಿಶ್ವಾಸವಿರಿಸುವ ಯಾವ ಅಗತ್ಯವೂ ಇರುವುದಿಲ್ಲ. ಲೋಕವು ಸೃಷ್ಟಿಯಲ್ಲವೆಂದೂ ತನ್ನಷ್ಟಕ್ಕೆ ಉಂಟಾದುದೆಂದೂ ಒಪ್ಪಿಕೊಂಡು ಈ ವಿವಾದವನ್ನು ಇಲ್ಲಿಯೇ ಮುಗಿಸಬಹುದು.

ಈ ಸಂಶಯಕ್ಕೆ ಉತ್ತರ ಇದಾಗಿದೆ– ಎಲ್ಲಾ ವಸ್ತುಗಳೂ ಸೃಷ್ಟಿಯಾಗಿರಬೇಕಾದುದು ಅತ್ಯಾವಶ್ಯವೆಂಬ ಆಧಾರದಲ್ಲಿಯಲ್ಲ ಲೋಕವನ್ನು ಸೃಷ್ಟಿಯೆಂದು ನಾವು ನಂಬುವುದು. ತದ್ವಿರುದ್ಧವಾಗಿ, ಲೋಕವು ಸೃಷ್ಟಿಯೆಂದು ಅದರ ಸ್ಥಿತಿಯೇ ರುಜುಪಡಿಸುತ್ತದೆ. ಎಲ್ಲಾ ವಸ್ತುಗಳು, ಅವುಗಳ ಸ್ಥಿತಿ ಹೇಗಿದ್ದರೂ ಸರಿ, ಸೃಷ್ಟಿಯಾಗಿರಬೇಕೆಂಬುದು ಅತ್ಯಾವಶ್ಯವೆಂಬ ತತ್ತ್ವವನ್ನು ನಾವು ಸ್ಥಾಪಿಸುವುದಾದರೆ, ಒಂದೋ ದೇವನು ಸಹ ಸೃಷ್ಟಿಯೆಂದು ಒಪ್ಪಬೇಕೆಂದೋ ಅಲ್ಲವಾದರೆ ಆ ತತ್ತ್ವವನ್ನು ಅಲ್ಲಗಳೆದು ಲೋಕವು ಸೃಷ್ಟಿಯಲ್ಲದಿರಬಹುದೆಂಬ ಸಾಧ್ಯತೆಯನ್ನು ಒಪ್ಪಬೇಕೆಂದೋ ವಾದಿಸಬಹುದು. ಒಟ್ಟಿನಲ್ಲಿ, ದೇವನು ಸ್ವಯಂಭುವೆಂದು ಒಪ್ಪಬೇಕಾಗಿ ಬರುವ ಕಾರಣ ಲೋಕವು ಸಹ ಸ್ವಯಂಭುವೆಂದು ಭಾವಿಸುವುದಕ್ಕೆ ವಿರೋಧವಿಲ್ಲವೆಂಬ ವಾದ ತಪ್ಪು. ಪ್ರತಿಯೊಂದು ವಸ್ತುವಿಗೆ ಅದರ ವೈಶಿಷ್ಟ್ಯಗಳಿವೆ. ಆ ವೈಶಿಷ್ಟ್ಯಗಳ ಆಧಾರದಲ್ಲಿ ಪ್ರತಿಯೊಂದು ವಸ್ತುವಿನ ಬಗ್ಗೆ ಅಭಿಪ್ರಾಯ ರೂಪೀಕರಿಸಲಾಗುತ್ತದೆ. ಉದಾಹರಣೆಗಾಗಿ, ನೀರು, ಬೆಂಕಿ, ಕಲ್ಲು, ಗಾಳಿ ಇವುಗಳ ಸ್ಥಿತಿ ಬೇರೆ ಬೇರೆಯಾಗಿವೆ. ಒಂದೇ ನಿಯಮದ ಅಧೀನದಲ್ಲೆಂದು ಭಾವಿಸಿ ಅವನ್ನೆಲ್ಲಾ ಒಂದೇ ಮಾನದಂಡದಿಂದ ಅಳೆಯುವುದು ಬುದ್ಧಿಶೂನ್ಯವಾಗಿರಬಹುದು. ಅದೇ ಪ್ರಕಾರ ಲೋಕವಸ್ತುಗಳ ಆಧಾರದಲ್ಲಿ ದೇವನ ಸಂಬಂಧಿಸಿಯೂ ದೇವನ ಆಧಾರದಲ್ಲಿ ಲೋಕದ ಸಂಬಂಧಿಸಿಯೂ ಅಭಿಪ್ರಾಯ ರೂಪೀಕರಿಸಬಾರದು. ಪ್ರತಿಯೊಂದು ವಸ್ತುವನ್ನು ಅದರ ಸ್ಥಿತಿಗನುಗುಣವಾಗಿ ವಿಭಿನ್ನ ಚಿಹ್ನೆಗಳಿಂದ ಬೇರ್ಪಡಿಸಿ ತಿಳಿದುಕೊಳ್ಳಬೇಕಾಗಿದೆ.

ಈ ಆಧಾರವನ್ನು ಮುಂದಿರಿಸಿ ನೋಡುವುದಾದರೆ ದೇವನು ಸ್ವಯಂಭುವೆಂದೂ, ಆದರೆ ಲೋಕವು ಸ್ವಯಂಭು ಅಲ್ಲವೆಂದೂ ನಮಗೆ ಸ್ಪಷ್ಟವಾಗಿ ಕಾಣಲು ಸಾಧ್ಯವಿದೆ. ದೇವನು ಸೃಷ್ಟಿಸಲ್ಪಟ್ಟವನಾಗಿರಲು ಸಾಧ್ಯವಿಲ್ಲವೆಂದು ನಾನು ಮೊದಲು ಸಮರ್ಥಿಸಿರುವೆನು.* ಹೇಗೆಂದರೆ, ಒಂದನೆಯದಾಗಿ ದೇವನನ್ನು ಸೃಷ್ಟಿಯೆಂದು ಭಾವಿಸುವುದಾದರೆ, ಎಂದರೆ ಅವನಿಗೊಬ್ಬ ಸೃಷ್ಟಿಕರ್ತನಿದ್ದಾನೆಂದು ಸಂಕಲ್ಪಿಸುವುದಾದರೆ ದೈವತ್ವದ ವ್ಯಾಖ್ಯೆ

* "ಯುಗರಶ್ಮಿ" ಜನವರಿ 1981ರ ಸಂಚಿಕೆ ನೋಡಿರಿ.

ಕೂಡಲೇ ಅವನಿಂದ ಬೇರ್ಪಟ್ಟು ಅವನ ಸೃಷ್ಟಿಕರ್ತನಿಗೆ ಹೋಗುತ್ತದೆ. ಇನ್ನೂ ಸ್ಪಷ್ಟವಾಗಿ ಹೇಳುವುದಾದರೆ, ದೇವನು ಸೃಷ್ಟಿಯೆಂಬ ವಿಚಾರ ಮನಸ್ಸಿನಲ್ಲಿ ಉದಿಸುವುದರೊಂದಿಗೆ ಅವನು ದೇವನಾಗುವುದಿಲ್ಲ. ಎರಡನೆಯದಾಗಿ, ದೇವನನ್ನು ಸೃಷ್ಟಿಯೆಂದು ಸಂಕಲ್ಪಿಸುವಾಗ ದೈವತ್ವದ ಆಧಾರ ಸ್ತಂಭಗಳೆಂದು ವಿವೇಕ ಒಪ್ಪುವ, ಅವುಗಳ ಹೊರತು ದೇವನು ದೇವನಾಗಿರಲಿಕ್ಕೆ ಅಸಾಧ್ಯವಾದ, ಅವನ ಗುಣವಿಶೇಷಗಳನ್ನೆಲ್ಲಾ ನಿರಾಕರಿಸಬೇಕಾಗುತ್ತದೆ. ಸಂಕ್ಷಿಪ್ತವಾಗಿ, ದೇವನ ಸಂಬಂಧಿಸಿ ಅವನು ಸೃಷ್ಟಿಸಲ್ಪಟ್ಟವನಾಗಿರಲಿಕ್ಕೆ ಸಾಧ್ಯವಿಲ್ಲವೆಂದು ಸ್ಪಷ್ಟವಾಗಿ ಸಾಬೀತಾಗಿದೆ. ಇನ್ನಿರುವುದು ಲೋಕದ ಪ್ರಶ್ನೆಯಾಗಿದೆ. ಅದರ ಸ್ಥಿತಿಗತಿಗಳಿಂದಲೇ ಅದು ಸೃಷ್ಟಿಯೆಂದು ಸ್ಪಷ್ಟವಾಗುತ್ತದೆ. ಆದರ ಅವಸ್ಥೆ ಅದು ಸೃಷ್ಟಿಯಲ್ಲವೆಂದು ಸಾಬೀತು ಪಡಿಸುವುದಿಲ್ಲವಾಗಿದ್ದರೆ ಅದು ಸ್ವಯಂಭುವೆಂದು ಸಂತೋಷದಿಂದ ಒಪ್ಪಲು ನಾವು ಸಿದ್ಧರಿದ್ದೇವೆ. ಆದರೆ ದೇವನು ತನ್ನ ಸ್ಥಿತಿಯಿಂದ ಸ್ವಯಂಭುವೆಂದು ಸ್ಪಷ್ಟಪಡಿಸುವಾಗ, ಲೋಕವು ಅದರ ಅವಸ್ಥೆಯಿಂದ, ಅದು ಬೇರೆ ಯಾವುದೋ ಒಂದು ಮಿಗಿಲಾದ ಶಕ್ತಿಯ ಸೃಷ್ಟಿಸಾಮರ್ಥ್ಯದ ಫಲವೆಂದೂ ಅದರ ಅಸ್ತಿತ್ವ ಆ ಶಕ್ತಿಯನ್ನು ಆಶ್ರಯಿಸಿ ಕೊಂಡಿದೆಯೆಂದೂ ವ್ಯಕ್ತಪಡಿಸುತ್ತದೆ.

ಬೇರೊಂದು ಸಂಗತಿ ಸಹ ನಾವು ತಿಳಿದಿರಬೇಕಾಗಿದೆ. ಲೋಕದಲ್ಲಿರುವ ಯಾವುದಾದರೊಂದು ವಸ್ತುವಿನ ಬಗ್ಗೆ, ಅದು ಸೃಷ್ಟಿಯೆಂದು ಒಪ್ಪುವುದರಿಂದ ಅದರ ಯಾವುದೇ ಗುಣವನ್ನು ಅಲ್ಲಗಳೆಯಬೇಕಾಗಿಲ್ಲ. ತದ್ವಿರುದ್ಧವಾಗಿ, ದೇವನನ್ನು ಸೃಷ್ಟಿಯೆಂದು ಭಾವಿಸುವುದರಿಂದ ಅವನ ಮೂಲಭೂತ ಗುಣವಿಶೇಷಗಳನ್ನೆಲ್ಲಾ ತಿರಸ್ಕರಿಸಲು ನಾವು ನಿರ್ಬಂಧಿತರಾಗುತ್ತೇವೆ. ಉದಾಹರಣೆಗಾಗಿ, ನೀರನ್ನು ಸೃಷ್ಟಿಯೆಂದು ಒಪ್ಪುವಾಗ ಅದರ ಯಾವುದೇ ಗುಣವಿಶೇಷವನ್ನು ನಿರಾಕರಿಸಬೇಕಾಗಿ ಬರುವುದಿಲ್ಲ. ಅದೇ ಪ್ರಕಾರ ಮನುಷ್ಯನನ್ನಾಗಲಿ, ಬೆಂಕಿ, ಗಾಳಿ, ಭೂಮಿ, ಸೂರ್ಯ, ಚಂದ್ರ ಇತ್ಯಾದಿಗಳನ್ನಾಗಲಿ, ಸೃಷ್ಟಿಯೆಂದು ನಂಬುವಾಗ ಅವುಗಳ ಗುಣವಿಶೇಷಗಳಿಗೆ ಯಾವುದೇ ಕುಂದುಂಟಾಗುವುದಿಲ್ಲ. ಧಾತುಗಳನ್ನು ಸೃಷ್ಟಿಯೆಂದು ನಂಬುವಾಗ ಸಹ ಅವುಗಳ ಗುಣವಿಶೇಷಗಳಿಗೆ ವ್ಯತ್ಯಾಸವೇನೂ ಉಂಟಾಗುವುದಿಲ್ಲ. ಹೀಗೆ ಲೋಕದಲ್ಲಿರುವ ಯಾವುದೇ ವಸ್ತುವಿನ ಸಂಬಂಧಿಸಿದರೂ, ಅದು ಸಣ್ಣದಾಗಿರಲಿ ಯಾ ದೊಡ್ಡದಾಗಿರಲಿ, ಸಂಯುಕ್ತವಾಗಿರಲಿ ಯಾ ಒಂಟಿಯಾಗಿರಲಿ, ಅದನ್ನು ಸೃಷ್ಟಿಯೆಂದು ನಂಬುವುದರಿಂದ ಆದರ ಗುಣವಿಶೇಷಗಳು ಯಾವುದೂ ಅದಕ್ಕೆ ನಷ್ಟವಾಗುವುದಿಲ್ಲ. ಅವನ್ನು ಸೃಷ್ಟಿಯೆಂದು ನಂಬಿದರೂ ಅವುಗಳ ಗುಣವಿಶೇಷಗಳು ಇಂದು ಗೋಚರಿಸುವ ರೀತಿಯಲ್ಲೇ ಅವುಗಳಲ್ಲಿ ಬಾಕಿಯಾಗುತ್ತವೆ.

ಆದರೆ ದೇವನನ್ನು ಸೃಷ್ಟಿಯೆಂದು ಭಾವಿಸುವುದಾದರೆ ದೈವತ್ವದ ಆಧಾರಸ್ತಂಭಗಳಂತಿರುವ ಎಲ್ಲಾ ಗುಣವಿಶೇಷಗಳು ಅವನಿಗೆ ನಷ್ಟವಾಗಿ ಅವನ ದಿವ್ಯತ್ವಕ್ಕೆ ಭಂಗವುಂಟಾಗುತ್ತದೆ. ಒಟ್ಟಾರೆ, ದೇವನನ್ನು ಸ್ವಯಂಭುವೆಂದು ನಂಬುವ ರೀತಿಯಲ್ಲಿ ಈ ಪ್ರಪಂಚವನ್ನು ಸಹ ಯಾಕೆ ಸ್ವಯಂಭುವೆಂದು ನಂಬಬಾರದು? ಎಂಬ ಪ್ರಶ್ನೆ ಅಜ್ಞಾನದಿಂದ ಉದ್ಭವಿಸಿದುದಾಗಿದೆ. ನೋಡಿರಿ, ನೀರು ದ್ರವವಾಗಿರುವುದರಿಂದ ಯಾವ ಪಾತ್ರೆಯಲ್ಲಿ ಹಾಕಿದರೂ ಆ ಪಾತ್ರೆಯ ಆಕೃತಿಯನ್ನು ಅದು ಪಡೆಯುತ್ತದೆ. ಆದರೆ ನೀರಿನಂತೆ ಕಲ್ಲಿನ ಕುರಿತು ಸಹ, ಅದನ್ನು ಹಾಕಲಾದ ಪಾತ್ರೆಯ ಆಕೃತಿಯನ್ನು ಅದು ಪಡೆಯುವುದೆಂದು ಭಾವಿಸುವುದಕ್ಕೇನು ಅಡ್ಡಿಯಿದೆಯೆಂದು ಯಾರಾದರೂ ಪ್ರಶ್ನಿಸುವರೇ? ಅದು ಅಜ್ಞತೆ ಹಾಗೂ ಮೂಢತೆಯ ಪ್ರಶ್ನೆಯಾಗಿದೆ. ಬುದ್ಧಿಶಾಲಿಗಳಾರೂ ಅದರೆಡೆಗೆ ಲಕ್ಷ್ಯಗೊಡಲಿಕ್ಕಿಲ್ಲ. ಒಟ್ಟಿನಲ್ಲಿ ದೇವನು ಸೃಷ್ಟಿಯಲ್ಲ. ಅವನು ಸೃಷ್ಟಿಯೆಂದೆನಿಸಲಿಕ್ಕೆ ಸಾಧ್ಯವಿಲ್ಲ. ಸೃಷ್ಟಿಯೆಂಬ ಸ್ಥಿತಿಯಲ್ಲಿ ಅವನು ದೇವನೆನಿಸುವುದಿಲ್ಲ. (ಯಾವ ರೀತಿಯೆಂದರೆ ನೀರಿನಂತೆ ಕಲ್ಲು, ಅದನ್ನು ಹಾಕಲಾದ ಪಾತ್ರೆಯ ಆಕೃತಿಯನ್ನು ಪಡೆಯಲು ಅಶಕ್ತ. ಹಾಗೆ ಪಡೆದರೆ ಕಲ್ಲು ಕಲ್ಲೆನಿಸುವುದಿಲ್ಲ). ಆದರೆ, ಈ ಲೋಕದಲ್ಲಿರುವ ಯಾವುದೇ ವಸ್ತು ಸೃಷ್ಟಿಯೆಂದೆನಿಸಿದರೆ ಅದರ ಸ್ವಾಭಾವಿಕವಾದ ಗುಣ ವಿಶೇಷಗಳಿಗೆ ವಿರುದ್ಧವಾಗುವುದಿಲ್ಲ.

ಸೃಷ್ಟಿಯೆಂದು ಭಾವಿಸುವುದರಿಂದ ಯಾವುದಾದರೊಂದು ಗುಣವಿಶೇಷಕ್ಕೆ ದಕ್ಕೆ ಬರುವ ಯಾವುದೇ ವಸ್ತುವಾಗಲಿ ಲೋಕದಲ್ಲಿಲ್ಲ ಎಂದು ಮಾತ್ರವಾಗಿದೆ ನಾನು ಇಷ್ಟರ ವರೆಗೆ ಹೇಳಿದ್ದು. ಯಾವುದೇ ಒಂದು ವಸ್ತುವನ್ನು ಸೃಷ್ಟಿಯೆಂದು ಭಾವಿಸಲು ಸ್ವಾಭಾವಿಕವಾದ

ಅಡ್ಡಿಯೇನೂ ಇಲ್ಲದಿರುವಾಗ ಅದನ್ನು ಸೃಷ್ಟಿಯೆಂದು ಒಪ್ಪಬಹುದು. ಒಟ್ಟಾರೆ ಈ ಲೋಕವು ಸೃಷ್ಟಿಯೆಂದು ಸಾಬೀತಾಯಿತು. ಆದರೆ ಲೋಕವನ್ನು ಸೃಷ್ಟಿಯೆಂದು ಒಪ್ಪುವ ವಿಚಾರದಲ್ಲಿ ಅಡ್ಡಿಯೇನೂ ಇಲ್ಲ; ಮಾತ್ರವಲ್ಲ ಲೋಕದ ಸ್ಥಿತಿಯೇ ಅದನ್ನು ಸೃಷ್ಟಿಯೆಂದು ಒಪ್ಪಲು ನಮ್ಮನ್ನು ನಿರ್ಬಂಧಿಸುವ ತರದಲ್ಲಿದೆಯೆಂದು ಸಹ ನಾನು ವ್ಯಕ್ತಪಡಿಸಿ ಕೊಡುವೆನು.

ಒಂದನೆಯದಾಗಿ, ಲೋಕದಲ್ಲಿ ಆಧಿಕ್ಯವಿದೆ. ಎಂದರೆ ಲೋಕವೆಂಬುದು ಯಾವುದಾದರೊಂದು ವಸ್ತುವಿನ ಹೆಸರಲ್ಲ, ಅಸಂಖ್ಯಾತ ವಸ್ತುಗಳ ಸಮೂಹದ ನಾಮವಾಗಿದೆ. ಈ ಮಹತ್ತಾದ ಆಧಿಕ್ಯದ ಪರಿಧಿ ನಿರ್ಣಯಿಸಲಿಕ್ಕೆ ಮನುಷ್ಯನಿಗೆ ಈ ತನಕ ಸಾಧ್ಯವಾಗಲಿಲ್ಲ. ಇನ್ನು ಮುಂದೆ ಸಾಧ್ಯವಾಗಲಿಕ್ಕೂ ಇಲ್ಲ. ಈ ಆಸಂಖ್ಯಾತ ಸೈನ್ಯವನ್ನೆಲ್ಲಾ ಏಕ ವ್ಯವಸ್ಥೆಯ ಅಧೀನದಲ್ಲಿ ಒಟ್ಟುಗೂಡಿಸುವರೆ ಶಕ್ತನಾದ ಒಬ್ಬ ಸೃಷ್ಟಿಕರ್ತನೂ ಒಡೆಯನೂ ಲೋಕಕ್ಕೆ ಇರಬೇಕೆಂದು ಈ ಆಧಿಕ್ಯ ಅಗತ್ಯಪಡಿಸುತ್ತದೆ. ಆದರೆ ಇದಕ್ಕೆದುರಾಗಿ, ದೇವನ ಅಸ್ತಿತ್ವ ಏಕವೆಂದು ಮತವೂ ವಿವೇಕವೂ ಸಾರುತ್ತವೆ. ಅವನಿಗಿಂತ ಮಿಗಿಲಾದ ಒಬ್ಬ ಸೂತ್ರಧಾರನ, ಎಂದರೆ ಒಂದು ವ್ಯವಸ್ಥೆಯಲ್ಲಿ ಒಟ್ಟುಗೂಡಿಸುವ ಸತ್ತೆಯ ಅವಶ್ಯವಿಲ್ಲ.

ಎರಡನೆಯದಾಗಿ, ಲೋಕದಲ್ಲಿ ವೈವಿಧ್ಯವಿದೆ. ಅಂದರೆ, ಲೋಕವೆಂಬುದು ಒಂದೇ ತರದ ವಸ್ತುಗಳ ಸಮೂಹದ ಹೆಸರಲ್ಲ. ರೂಪದಲ್ಲೂ ಗುಣದಲ್ಲೂ ವ್ಯತ್ಯಸ್ತಗಳಾದ ಅಸಂಖ್ಯ ವಸ್ತುಗಳ ಸಮೂಹವಾಗಿದೆ ಅದು. ಅವು ಪ್ರತಿಯೊಂದು ವಿಭಿನ್ನ ಗುಣಗಳಿಂದ ಕೂಡಿವೆ. ವಿವಿಧ ನಿಯಮಗಳಿಗೆ ಅಧೀನವಾಗಿದ್ದುಕೊಂಡು ವಿಭಿನ್ನ ಪರಿಧಿಯಲ್ಲಿ ಅವು ಚಲಿಸುತ್ತವೆ. ಈ ವೈವಿಧ್ಯ ಸಹ, ಈ ಅಸಂಖ್ಯಾತ ವ್ಯತ್ಯಸ್ತ ವಸ್ತುಗಳನ್ನು ವಿವಿಧ ನಿಯಮಗಳಿಂದ ನಿಯಂತ್ರಿಸುವ ಜತೆಗೆ ಒಂದು ಸಂಯುಕ್ತ ನಿಯಮದ ಕೊಂಡಿಯಲ್ಲಿ ಸೇರಿಸಲು ಶಕ್ತನಾದ ಸೃಷ್ಟಿಕರ್ತನೂ ಪ್ರಭುವೂ ನಿಯಾಮಕನೂ ಆದ ಒಂದು ಸತ್ತೆಯ ಆವಶ್ಯಕತೆಯನ್ನು ಸಾಬೀತುಪಡಿಸುತ್ತದೆ. ಆದರೆ ದೇವನ ಸಂಬಂಧಿಸಿ, ಅವನು ಏಕನಾಗಿರುವುದರಿಂದ ವೈವಿಧ್ಯದ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಮೂರನೆಯದಾಗಿ, ಲೋಕದಲ್ಲಿರುವ ಎಲ್ಲಾ ವಸ್ತುಗಳು ಮಾರ್ಪಾಟಿಗೆ ಗುರಿಯಾಗುತ್ತವೆ. ಒಂದೇ ಸ್ಥಿತಿಯಲ್ಲಿ ಬಾಕಿಯುಳಿಯುವ ಯಾವುದೇ ವಸ್ತು ಲೋಕದಲ್ಲಿಲ್ಲ. ಎಲ್ಲಾ ಸಮಯದಲ್ಲೂ ಎಲ್ಲಾ ವಸ್ತುಗಳು ಪರಿವರ್ತನೆಗೊಂಡು ಅವುಗಳ ಪರಿಮಿತವಾದ ಆಯುಷ್ಕಾಲವನ್ನು ಹ್ರಸ್ವಗೊಳಿಸುತ್ತವೆ. ಈ ಸ್ಥಿತಿ ಸಹ, ಲೋಕ ತನ್ನಷ್ಟಕ್ಕೆ ಉಂಟಾದುದಲ್ಲವೆಂದೂ ಒಂದು ಪರಾಶಕ್ತಿಯ ಸ್ವಾಧೀನದಲ್ಲಿದೆಯೆಂದೂ ರುಜುಪಡಿಸುತ್ತದೆ. ಆದರೆ ದೇವನು ಮಾರ್ಪಾಟು ಇಲ್ಲದವನಾಗಿದ್ದಾನೆ.

ನಾಲ್ಕನೆಯದಾಗಿ, ಲೋಕದಲ್ಲಿರುವ ಎಲ್ಲಾ ವಸ್ತುಗಳು ಅವುಗಳ ಶಕ್ತಿಯಲ್ಲೂ ಸಾಮರ್ಥ್ಯದಲ್ಲೂ ಪ್ರವರ್ತನೆಯಲ್ಲೂ ಪರಿಮಿತ ಹಾಗೂ ನಿಯಂತ್ರಿತ. ಯಾವುದಾದರೊಂದು ಗುಣದಲ್ಲಿ ಪರಿಪೂರ್ಣವಾಗಿರುವ, ಪರಿಧಿ ಮತ್ತು ನಿಯಂತ್ರಣದಿಂದ ಸ್ವತಂತ್ರವಾಗಿರುವ ಯಾವ ವಸ್ತುವೂ ಲೋಕದಲ್ಲಿಲ್ಲ. ಗುಣ ಮತ್ತು ಸ್ವಭಾವಗಳ ಈ ಪರಿಮಿತಿ ಹಾಗೂ ಪರಿಧಿಗಳನ್ನು ನಿಶ್ಚಯಿಸುವ ಒಂದು ಸತ್ತೆಯಿದೆಯೆಂದು ಇದರಿಂದ ಸಾಬೀತಾಗುತ್ತದೆ. ಅಂದರೆ, ಅಸಂಖ್ಯಾತ ವಿವಿಧ ವಸ್ತುಗಳನ್ನು ಒಂದು ನಿಯಮದ ಅಧೀನದಲ್ಲಿ, ನಿಶ್ಚಯಿಸಲ್ಪಟ್ಟ ಪರಿಧಿಯೊಳಗೆ ನಿಯಂತ್ರಿಸಿಟ್ಟಿರುವ ಒಂದು ಶಕ್ತಿಯ ಕುರಿತು ಸೂಚನೆ ನೀಡುತ್ತದೆ. ಆ ಶಕ್ತಿಯಾದರೋ ಪರಿಧಿಗೂ ಪರಿಮಿತಿಗೂ ಅತೀತ.

ಐದನೆಯದಾಗಿ, ಲೋಕದಲ್ಲಿರುವ ಯಾವ ವಸ್ತುವೂ ಸ್ವಯಂ ನೆಲೆಗೊಳ್ಳುವುದಿಲ್ಲ. ಪ್ರತಿಯೊಂದು ವಸ್ತು ಅದರ ಬಾಳಿಕೆಗೆ ಇನ್ನೊಂದನ್ನು ಆಶ್ರಯಿಸಿಕೊಂಡಿರುತ್ತದೆ. ವಿಜ್ಞಾನದ ಹೊಸ ಸಂಶೋಧನೆಯಿಂದ ಇಷ್ಟರ ಮಟ್ಟಿಗೆ ರುಜುಪಟ್ಟಿದೆ–ಲೋಕದಲ್ಲಿರುವ ಪ್ರತಿಯೊಂದು ವಸ್ತು ಅದರ ಬಾಳ್ವೆಗಾಗಿ ಇತರ ವಸ್ತುಗಳ ಮೇಲೆ ಪ್ರಭಾವ ಬೀರುತ್ತದೆ ಹಾಗೂ ಅವುಗಳಿಂದ ಫಲಪಡೆಯುತ್ತದೆ. ಹಾಗೆ, ಯಾವ ವಸ್ತುವೂ ತನ್ನಷ್ಟಕ್ಕೆ ಬಾಳದಿರುವ ಈ ಸ್ಥಿತಿ ಸಹ, ಲೋಕವು ತನ್ನಷ್ಟಕ್ಕೆ ಉಂಟಾದುದಲ್ಲ; ಪ್ರತಿಯೊಂದು ವಸ್ತುವನ್ನು ಆಯಾಯ ಸ್ಥಾನದಲ್ಲಿ ನೆಲೆಗೊಳಿಸಿರುವ ಒಂದು ಪರಾಶಕ್ತಿಯ ಸಹಾಯದಿಂದ ಬಾಳುತ್ತದೆಯೆಂಬುದಕ್ಕೆ ಸಾಕ್ಷಿಯಾಗಿದೆ.

ಆರನೆಯದಾಗಿ, ಲೋಕದಲ್ಲಿ ವಿಶಿಷ್ಟವಾದೊಂದು ಕ್ರಮೀಕರಣ [Design] ಕಂಡು ಬರುತ್ತದೆ. ಇದು ಸಹ ಉದ್ದೇಶದಿಂದೊಡಗೂಡಿದ ಒಬ್ಬ ಸೃಷ್ಟಿಕರ್ತನ ಆವಶ್ಯಕತೆಯನ್ನು ತೋರ್ಪಡಿಸುತ್ತವೆ. ಆದರೆ ದೇವನ ಸಂಬಂಧಿಸಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಏಳನೆಯದಾಗಿ, ಲೋಕದಲ್ಲಿರುವ ಪ್ರತಿಯೊಂದು ವಸ್ತು ವಿಶಿಷ್ಟವಾದೊಂದು ಲಕ್ಷ್ಯವನ್ನಿರಿಸಿ ಚಲಿಸುತ್ತದೆಯೆಂದು ಕಾಣಬಹುದು. ಪ್ರತಿಯೊಂದು ವಸ್ತುವಿನ ಜೀವತಘಟ್ಟದಲ್ಲಿ ಸಾಭಾವಿಕವಾಗಿ ಕಾಣಲ್ಪಡುವ ಈ ಪರಮಲಕ್ಷ್ಯ ಸಹ, ಸ್ವಯಂ ಮರೆಯಲ್ಲಿದ್ದುಕೊಂಡು ಎಲ್ಲಾ ಸಮಯದಲ್ಲೂ ಲೋಕವ್ಯವಸ್ಥೆಯನ್ನು ನಿಯಂತ್ರಿಸಿ ನಿರ್ದಿಷ್ಟವಾದೊಂದು ಕಾರ್ಯಕ್ರಮವನ್ನನುಸರಿಸಿ ಲೋಕವನ್ನು ನಿಶ್ಚಿತವಾದೊಂದು ಲಕ್ಷ್ಯದೆಡೆಗೆ ಕೊಂಡೊಯ್ಯುವ ಒಂದು ಸತ್ತೆ ಇರಬೇಕೆಂದು ಸೂಚಿಸುತ್ತದೆ. ಆದರೆ ಇದಕ್ಕೆದುರಾಗಿ, ದೇವನ ಸಂಬಂಧಿಸಿ ಒಂದು ಪರಮಲಕ್ಷ್ಯದ ಪ್ರಶ್ನೆ ಉದ್ಭವಿಸುವುದಿಲ್ಲ. ಏಕೆಂದರೆ ಅವನು ಏಕನೂ ಸನಾತನನೂ ಅನಶ್ವರನೂ ಸ್ವತಂತ್ರನೂ ಸ್ವಯಂ ಪರ್ಯಾಪ್ತನೂ ಪರಿಪೂರ್ಣನೂ ಆಗಿದ್ದಾನೆ. ಇದೇ ಪ್ರಕಾರ ಲೋಕದ ಇತರ ಸ್ಥಿತಿಗಳು ಸಹ ಅದು ಸೃಷ್ಟಿಯೆಂಬುದಕ್ಕೆ ರುಜುವಾತಾಗಿದೆ.

ಸಂಕ್ಷಿಪ್ತವಾಗಿ, ಲೋಕವು ಸ್ವಯಂಭು ಅಲ್ಲವೆಂದು ನಂಬಲು ಅದರ ಸ್ಥಿತಿಗತಿಗಳು ನಮ್ಮನ್ನು ನಿರ್ಬಂಧಿಸುತ್ತವೆ. ಬದಲಾಗಿ, ದೇವನ ಸ್ಥಿತಿಯು ಅವನು ಸೃಷ್ಟಿಯೆನಿಸುವುದಕ್ಕೆ ವಿರೋಧ ಮಾತ್ರವಲ್ಲ, ದೇವನ ಮತ್ತು ಸೃಷ್ಟಿಯ ವ್ಯಾಖ್ಯೆಗಳು ಪರಸ್ಪರ ವಿರುದ್ಧ ಹಾಗೂ ಒಂದೇ ವಸ್ತುವಿನಲ್ಲಿ ಎಂದಿಗೂ ಒಂದುಗೂಡಲು ಅಸಾಧ್ಯ. ಒಟ್ಟಿನಲ್ಲಿ ದೇವನು ಸ್ವಯಂಭು ಆಗಿರುವಾಗ ಈ ಲೋಕವನ್ನು ಸಹ ಸ್ವಯಂಭು ಎಂದು ಏಕೆ ಒಪ್ಪಬಾರದೆಂಬ ಪ್ರಶ್ನೆ ಅಸಂಬದ್ಧ ಹಾಗೂ ಅಜ್ಞತಾಜಟಿಲವಾದುದು. ಸತ್ಯವೇನೆಂದರೆ — ಎಲ್ಲಾ ವಸ್ತುಗಳು ಸೃಷ್ಟಿಸಲ್ಪಟ್ಟವು. ಆದರೆ ದೇವನ ಮೇಲೊಬ್ಬ ಸೃಷ್ಟಿಕರ್ತನಿಲ್ಲ. ಎಲ್ಲಾ ವಸ್ತುಗಳು ಆಳಲ್ಪಡುತ್ತವೆ. ಆದರೆ ದೇವನನ್ನು ಯಾರೂ ಆಳುವುದಿಲ್ಲ. ಎಲ್ಲಾ ವಸ್ತುಗಳಿಗೆ ಪ್ರಭುವೊಬ್ಬನಿದ್ದಾನೆ. ಆದರೆ ದೇವನ ಮೇಲೊಬ್ಬ ಪ್ರಭುವಿಲ್ಲ. ಎಲ್ಲಾ ಮಾರ್ಗಗಳು ಒಂದುಗೂಡುವ ಕೇಂದ್ರಸ್ಥಾನವಾಗಿದೆ ಅವನದು. ಆದರಾಚೆ ಯಾವ ಮಾರ್ಗವೂ ಇಲ್ಲ. ಆ ಸ್ಥಾನವನ್ನು ಗುರುತಿಸುವವನು ಭಾಗ್ಯವಂತ. ಅವನು ನಾಶಕೂಪದಲ್ಲಿ ಬೀಳುವುದರಿಂದ ರಕ್ಷಿಸಲ್ಪಡುವನು.

ಮುಹಮ್ಮದ್ ಪೈಗಂಬರರು ಹೇಳಿದುದಾಗಿ ಹೀಗೆ ಉಲ್ಲೇಖಿಸಲ್ಪಟ್ಟಿದೆ : ಎಲ್ಲಾ ವಸ್ತುಗಳ ಕುರಿತು ಅವನ್ನು ಯಾರು ಸೃಷ್ಟಿಸಿದ್ದೆಂದು ನಿಮಗೆ ಕೇಳಲಿಕ್ಕೆ ಸಾಧ್ಯವಿದೆ, ಆದರೆ ದೇವನ ಸಂಬಂಧಿಸಿದ್ದರೆ ಆ ಪ್ರಶ್ನೆಯನ್ನು ಅಲ್ಲೇ ಕೊನೆಗೊಳಿಸಿರಿ. ಪೈಗಂಬರರು ತನ್ನ ಅನುಯಾಯಿಗಳಿಗೆ ಸ್ವತಂತ್ರ ಅನ್ವೇಷಣೆಯ ದಾರಿಯನ್ನು ತಡೆದಿದ್ದಾರೆಂದು, ಅಂದರೆ ಸಂಶಯಗಳಿಂದ ವಿಮುಕ್ತರಾಗಲಿಕ್ಕೆ ವೈಜ್ಞಾನಿಕವಾದ ಈ ಪ್ರಶ್ನೆಯನ್ನು ಕೇಳುವುದರಿಂದ ಅವರನ್ನು ವಿರೋಧಿಸಿದರೆಂದು ಅವಿವೇಕಿಗಳು ಭಾವಿಸಬಹುದು. ಆದರೆ ಪೈಗಂಬರರ ಉದ್ದೇಶ ಎಲ್ಲಾ ವಸ್ತುಗಳ ಸಂಬಂಧಿಸಿ, ಅವು ಸೃಷ್ಟಿಯಾಗಿರಬಹುದೆಂಬ ಪ್ರಶ್ನೆ ಉದ್ಭವಿಸುತ್ತದೆಯೆಂದೂ, ಆದರೆ ದೇವನ ಸಂಬಂಧಿಸಿ ಆ ಪ್ರಶ್ನೆ ಹುಟ್ಟುವುದಿಲ್ಲವೆಂದೂ ಆಗಿದೆ. ಯಾರಾದರೂ ಆ ಪ್ರಶ್ನೆಯೆತ್ತಿದರೆ ಅದು ಅವರ ಅಜ್ಞತೆಗೆ ಸಾಕ್ಷಿಯಾಗಿದೆ. ವಾಸ್ತವದಲ್ಲಿ ಪೈಗಂಬರರು ವಿಜ್ಞಾನದ ಕವಾಟವನ್ನಲ್ಲ, ಅಜ್ಞಾನದ ಕವಾಟವನ್ನು ಮುಚ್ಚಿದ್ದಾರೆ. ಅನ್ವೇಷಣೆಯ ಮಾರ್ಗವನ್ನಲ್ಲ, ಸಂದಿಗ್ಧತೆಯ ಮಾರ್ಗವನ್ನು ತಡೆದಿದ್ದಾರೆ.

ಸಂಕ್ಷಿಪ್ತವಾಗಿ, ಅಸಂಖ್ಯಾತ, ವಿಭಿನ್ನ ತರದ, ಪರಿವರ್ತನೆಗೊಳ್ಳುವ, ಸ್ವಯಂ ನಿರ್ದಿಷ್ಟತೆಯಿಲ್ಲದ, ಸೀಮಿತ ಸಾಮರ್ಥ್ಯ ಮಾತ್ರವುಳ್ಳ ವಸ್ತುಗಳಲ್ಲಿ ವ್ಯಷ್ಟಿಯಾಗಿಯೂ ಸಮಷ್ಟಿಯಾಗಿಯೂ ಪ್ರವರ್ತಿಸುತ್ತಿರುವ ಅತ್ಯಂತ ಬುದ್ಧಿಪೂರ್ಣ ವ್ಯವಸ್ಥೆಯಿಂದ ಕೂಡಿದ ಈ ವಿಪುಲವಾದ ಪ್ರಪಂಚವು, ಅದು ಸ್ವಯಂಭುವಲ್ಲವೆಂದೂ ಒಂದು ಪರಾಶಕ್ತಿಯ ಸೃಷ್ಟಿವೈಭವದಿಂದ ಅಸ್ತಿತ್ವವನ್ನು ಪಡೆದಿದೆಯೆಂದೂ, ಆ ಪರಾಶಕ್ತಿಯ ಸಹಾಯದಿಂದ ನೆಲೆಗೊಂಡು ಚಲಿಸುತ್ತದೆಯೆಂದೂ ಅದರ ಸ್ಥಿತಿಗತಿಗಳು ಸಾರುತ್ತವೆ. ಆ ಪರಾಶಕ್ತಿಯಾದರೋ ಸ್ವಯಂಭು ಹಾಗೂ ಸಾರ್ವಭೌಮ ಸತ್ತೆಯಾಗಿದೆ. ಅದು ಪೂರ್ಣ ಶೃಂಖಲೆ ಕೊನೆಗೊಳ್ಳುವ ಕಡೆಯ ಕೊಂಡಿಯಾಗಿದೆ.

# ★ ಕ್ರೈಸ್ತ ಮತ ಮತ್ತು ಉಪವಾಸ ★

ಹತ್ತೊಂಭತ್ತು ಶತಮಾನಗಳ ಮುಂಚೆ ಇಸ್ರಾಯೇಲ್ ಸಮುದಾಯವನ್ನು ಉದ್ಧರಿಸಲಿಕ್ಕಾಗಿ ದೇವನು ಯೇಸುಕ್ರಿಸ್ತರನ್ನು ನಿಯೋಗಿಸಿದನು. ಅವರು ಅತಿ ಕ್ರಮಕಾರಿಗಳಾದ ಆ ಯಹೂದರ ಪೈಕಿಯಿಂದ ಶುದ್ಧಾತ್ಮರಾದ ಅನುಯಾಯಿಗಳ (ಹವಾರಿಗಳ) ಒಂದು ಸಂಘವನ್ನು ಕಟ್ಟಿದರು. ಯೇಸುಕ್ರಿಸ್ತರ ಶಿಕ್ಷಣ ಮೂಲಕ ಅವರು ಆಧ್ಯಾತ್ಮಿಕ ಆಕಾಶದಲ್ಲಿ ನಕ್ಷತ್ರಗಳಂತೆ ಪ್ರಶೋಭಿತರಾದರು. ಪ್ರಚಲಿತ ಸುವಾರ್ತೆಗಳು ಏನು ಹೇಳಿದರೂ ಪವಿತ್ರ ಖುರ್‌ಆನ್ ಆ ಅನುಯಾಯಿಗಳ ಉನ್ನತ ಆಧ್ಯಾತ್ಮಿಕ ಮಟ್ಟದ ಕುರಿತು ತಿಳಿಸಿಕೊಡುತ್ತದೆ.

ಆದ್ಯಕಾಲದ ಕ್ರೈಸ್ತರಿಗೆ ಶತ್ರುಗಳಿಂದ ಹಲವಿಧ ಉಪದ್ರವಗಳನ್ನು ಅನುಭವಿಸಬೇಕಾಗಿ ಬಂದಿತ್ತು. ಅವರು ಸ್ವದೇಶದಿಂದ ಪಲಾಯನ ಮಾಡಲು ನಿರ್ಬಂಧಿಸಲ್ಪಟ್ಟರು. ಮಾತ್ರವಲ್ಲ ಪರದೇಶಗಳಲ್ಲೂ ಅವರಿಗೆ ಜೀವಿತ ಕಷ್ಟಕರವಾಗಿತ್ತು. ಅವರಿಗೆ ಪ್ರತಿಕೂಲಾವಸ್ಥೆಗಳನ್ನು ಎದುರಿಸಬೇಕಾಗಿ ಬಂತು. ಇಂತಹ ಪರಿಸ್ಥಿತಿಗಳಲ್ಲಿ ಸುವಾರ್ತೆಗಳ ಅಧ್ಯಾಪನಗಳಲ್ಲಿ ಕೆಲವು ವ್ಯತ್ಯಾಸಗಳುಂಟಾಗಲು ತೊಡಗಿದುವು.

ಅಷ್ಟು ಮಾತ್ರವಲ್ಲ, ಹೊಸದಾಗಿ ಕೆಲವರು ಈ ಮತದಲ್ಲಿ ಪ್ರವೇಶಿಸಲಿಕ್ಕೂ ಅದರ ವೃತ್ತ ಯೇಸುಕ್ರಿಸ್ತರ ಮೂಲ ಅಧ್ಯಾಪನಕ್ಕೆ ವಿರುದ್ಧವಾಗಿ ಇಸ್ರಾಯೇಲರಲ್ಲದವರೆಡೆಗೆ ವ್ಯಾಪಿಸಲಿಕ್ಕೂ ತೊಡಗಿದಾಗ ಕ್ರೈಸ್ತ ಮತದ ಆರಾಧನೆಗಳಲ್ಲಿ ಮಾತ್ರವಲ್ಲ, ಮೂಲ ವಿಶ್ವಾಸಗಳಲ್ಲಿ ಸಹ ಬದಲಾವಣೆಗಳುಂಟಾದುವು.

ವಿಶುದ್ಧ ಉಪವಾಸಾನುಷ್ಠಾನ ಎಲ್ಲಾ ಮತಗಳಲ್ಲಿ ಸಹ ನಿರ್ದೇಶಿಸಲಾದ ಒಂದು ಆರಾಧನಾ ಕರ್ಮವಾಗಿದೆ. ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

"ವಿಶ್ವಾಸಿಗಳೆ, ನಿಮಗಿಂತ ಮೊದಲಿನ ಸಮುದಾಯಗಳಿಗೆ ಉಪವಾಸವನ್ನು ಕಡ್ಡಾಯಗೊಳಿಸಿದ ಪ್ರಕಾರವೇ ನಿಮಗೆ ಸಹ ಅದನ್ನು ಕಡ್ಡಾಯಗೊಳಿಸಲಾಗಿದೆ" (2:184)

ಯೇಸುಕ್ರಿಸ್ತರು ಮುಹಮ್ಮದ್ ಪೈಗಂಬರರಿಗೆ ನಿಕಟಪೂರ್ವದಲ್ಲಿ ಆಗಮಿಸಿದ್ದ ಪ್ರವಾದಿಯಾಗಿದ್ದರಷ್ಟೆ. ಅವರು ತನ್ನ ಅನುಯಾಯಿಗಳಿಗೆ ಹಳೆಯ ಒಡಂಬಡಿಕೆಯ ಧರ್ಮವಿಧಿಗಳನ್ನನುಸರಿಸಿ ಜೀವನ ನಡೆಸಬೇಕೆಂದು ಕಲಿಸಿದ ಪಾಠಗಳಲ್ಲಿ ಉಪವಾಸದ ಸಂಬಂಧಿಸಿ ಸಹ ಶಕ್ತಿಯುತವಾಗಿ ಉಪದೇಶಿಸಿದ್ದರು. ಆ ಮಹಾಪುರುಷ ಪ್ರಾರ್ಥನೆ ಮತ್ತು ಉಪವಾಸಗಳನ್ನನುಷ್ಠಿಸಿದ್ದರಲ್ಲದೆ, ಶಿಷ್ಯರಿಗೂ ಅವುಗಳ ಪ್ರಾಧಾನ್ಯವನ್ನು ಮನದಟ್ಟು ಮಾಡಿಕೊಟ್ಟಿದ್ದರು. ಈ ವಿಚಾರವನ್ನು ಪ್ರಚಲಿತ ಸುವಾರ್ತೆಗಳು ಸಹ ತಿಳಿಸಿಕೊಡುತ್ತವೆ.

ಒಮ್ಮೆ ಯೇಸುವಿನ ಶಿಷ್ಯರಿಗೆ ಒಬ್ಬ ಬಾಲಕನ ಮಾನಸಿಕ ರೋಗವನ್ನು ಗುಣಪಡಿಸಲು ಸಾಧ್ಯವಾಗದೆ, ಯೇಸುಕ್ರಿಸ್ತರು ಗುಣಪಡಿಸಿ ತೋರಿಸಿದಾಗ ತಮಗೆ ಅದು ಅಸಾಧ್ಯವಾದುದರ ಕಾರಣವೇನೆಂದು ಅವರು ಏಕಾಂತವಾಗಿ ಕೇಳಿದರು. ಅದಕ್ಕೆ ಉತ್ತರವಾಗಿ ಯೇಸು ಹೀಗೆ ಹೇಳಿದರು:

"ಈ ಜಾತಿಯು ಪ್ರಾರ್ಥನೆ ಮತ್ತು ಉಪವಾಸದ ಹೊರತು ಬೇರೆ ಯಾವುದರಿಂದಲೂ ಬಿಟ್ಟು ಹೋಗುವುದಿಲ್ಲ". (ಮತ್ತಾಯ 17:21)

ಯೇಸುಕ್ರಿಸ್ತರ ಈ ಉತ್ತರ ತೋರಿಸಿಕೊಡುವುದೇನೆಂದರೆ, ಅವರು ಪ್ರಾರ್ಥನೆ ಮತ್ತು ಉಪವಾಸದ ಪ್ರಧಾನತೆಯನ್ನು ತನ್ನ ಶಿಷ್ಯಗಣಕ್ಕೆ ಮನದಟ್ಟು ಮಾಡಿಕೊಡುತ್ತಿದ್ದರು.

ಪ್ರಸ್ತುತ ವಚನ ಬೈಬಲಿನ ಇಂಗ್ಲೀಷ್ ಆವೃತ್ತಿಯಲ್ಲಿ ಹೀಗೆ ಉಲ್ಲೇಖಿಸಲ್ಪಟ್ಟಿದೆ:

"This kind goeth not out but by prayer and fasting" (Matthew, 17:21).

ಮಾರ್ಕನು ಹೀಗೆ ಉಲ್ಲೇಖಿಸಿರುವನು:

"This kind can come forth by nothing but prayer and fasting" (Mark, 9:29).

ಇದೇ ಅರ್ಥಬರುವ ವಚನಗಳು ಅರಬಿ ಬೈಬಲಿನಲ್ಲಿ ಸಹ ಮತ್ತಾಯ ಮತ್ತು ಮಾರ್ಕ ಇಬ್ಬರ ಸುವಾರ್ತೆಗಳಲ್ಲಿಯೂ ಬರೆಯಲಾಗಿವೆ. ಅರಬಿ ವಚನ ಈ ರೀತಿಯಿದೆ:

"ಹಾದಲ್ ಜಿನ್ಸುಲಾಯುಂಕಿನು ಅನ್‌ಯಖ್ರುಜ ಬಿಶೈಇನ್ ಇಲ್ಲಾಬಿಸ್ಸಲಾತಿ ವಸ್ಸೌಮಿ".

ಆದರೆ ಮಲೆಯಾಳ, ಉರ್ದು, ಕನ್ನಡ ಬೈಬಲ್‌ಗಳಲ್ಲಿ ಈ ವಚನಗಳು ರೂಪಾಂತರಗೊಂಡು ಕಾಣಲ್ಪಡುತ್ತವೆ. ಮಲೆಯಾಳದಲ್ಲಿ ಮತ್ತಾಯನ ಸುವಾರ್ತೆಯ ಮೇಲೆ ಉದ್ಧರಿಸಲಾದ ವಾಕ್ಯವನ್ನು ಆವರಣದೊಳಗೆ ಬರೆಯಲಾಗಿದೆ. ಉರ್ದು ಮತ್ತು ಕನ್ನಡ ಬೈಬಲ್ ಆವೃತ್ತಿಗಳಲ್ಲಿ ಅದನ್ನು ಸಂಪೂರ್ಣ ತೆಗೆದುಹಾಕಲಾಗಿದೆ. ಕ್ರಮಾಂಕದಲ್ಲೂ ವ್ಯತ್ಯಾಸವಿದೆ. ಮಾರ್ಕನ ಸುವಾರ್ತೆಯ ಕನ್ನಡ ಭಾಷಾಂತರದಲ್ಲಿ ಹೀಗೆ ಬರೆಯಲಾಗಿದೆ:

"ಈ ಜಾತಿಯು ದೇವರ ಪ್ರಾರ್ಥನೆಯಿಂದಲೇ ಹೊರತು ಬೇರೆ ಯಾತರಿಂದಲೂ ಬಿಟ್ಟುಹೋಗುವುದಿಲ್ಲ" (ಮಾರ್ಕ 9:29).

ಅಂದರೆ, ಉಪವಾಸದ ಕುರಿತುಳ್ಳ ಮಾತನ್ನು ಅದರಿಂದ ತೆಗೆದುಹಾಕಲಾಗಿದೆ. ಉರ್ದು ಮತ್ತು ಮಲೆಯಾಳ ಭಾಷಾಂತರಗಳಲ್ಲೂ ಇದೇ ಪ್ರಕಾರ ಮಾಡಲಾಗಿದೆ.

ಕಾಲಾಂತರದಲ್ಲಿ ಪುರೋಹಿತರು ದೈವಿಕ ಧರ್ಮವಿಧಿಗಳನ್ನು ಉಪೇಕ್ಷಿಸುವ ನೀತಿಯನ್ನು ಕೈಗೊಂಡಾಗ ಸುವಾರ್ತೆಗಳ ವಾಕ್ಯಗಳ ಮೇಲೆ ಸಹ ಅವರು ಧಾರಾಳವಾಗಿ ಕೈಯಾಡಿಸಿದ್ದಾರೆ. ಅದಕ್ಕೆ ಸ್ಪಷ್ಟವಾದ ಒಂದು ಉದಾಹರಣೆಯಾಗಿದೆ ಪ್ರಸ್ತುತ ವಾಕ್ಯಗಳಲ್ಲಿರುವ ಈ ವ್ಯತ್ಯಾಸಗಳು.

ಪ್ರಚಲಿತ ಸುವಾರ್ತೆಗಳಲ್ಲಿ ಬೇರೆಡೆಗಳಲ್ಲಿ ಉಪವಾಸವನ್ನು ಒಂದು ದುಃಖಾಚಾರಣೆಯಂತೆ ಚಿತ್ರೀಕರಿಸಿದ್ದು ಸಹ ಮೇಲೆ ಹೇಳಿದಂಥ ಮನುಷ್ಯ ಹಸ್ತಕ್ಷೇಪದ ಫಲವಾಗಿರಬಹುದು. ಮತ್ತಾಯ 9ನೇ ಅಧ್ಯಾಯದ 14,15 ವಚನಗಳನ್ನು ನೋಡಿರಿ:

"ಆ ಮೇಲೆ ಯೋಹಾನನ ಶಿಷ್ಯರು ಆತನ ಬಳಿಗೆ ಬಂದು—ಫರಿಸಾಯರೂ ನಾವೂ ಉಪವಾಸಮಾಡುತ್ತೇವಲ್ಲ; ನಿನ್ನ ಶಿಷ್ಯರು ಯಾಕೆ ಉಪವಾಸಮಾಡುವುದಿಲ್ಲ ಎಂದು ಕೇಳಲು ಯೇಸು ಅವರಿಗೆ—ಮದುವೆಯ ಜನರು ತಮ್ಮ ಸಂಗಡ ಮದುವಣಿಗನು ಇರುವ ತನಕ ದುಃಖಪಟ್ಟಾರೋ? ಆದರೆ ಮದಲಿಂಗನನ್ನು ಅವರ ಬಳಿಯಿಂದ ತೆಗೆದುಕೊಂಡು ಹೋಗುವ ಕಾಲ ಬರುತ್ತದೆ; ಆಗ ಅವರು ಉಪವಾಸಮಾಡುವರು" ಎಂದನು.

ಮೊದಲು ಉದ್ಧರಿಸಲಾದ ಸುವಾರ್ತೆ ವಚನಗಳನ್ನೂ ಯೇಸುಕ್ರಿಸ್ತರ ಉನ್ನತ ಆಧ್ಯಾತ್ಮಿಕ ಮಟ್ಟವನ್ನೂ ಪರಿಗಣಿಸುವಾಗ ಈ ಪ್ರಸ್ತಾವನೆ ಅವರದ್ದೆಂದು ನಂಬಲು ನಿರ್ವಾಹವಿಲ್ಲ. ಮಾತ್ರವಲ್ಲ, ಉಪವಾಸವನ್ನು ಆತ್ಮಾರ್ಥವಾಗಿ ದೇವನ ಸಂಪ್ರೀತಿಯನ್ನು ಮಾತ್ರ ಗುರಿಯಾಗಿರಿಸಿ ಅನುಷ್ಠಿಸಬೇಕೆಂದೂ ಮನುಷ್ಯನ ಪ್ರೀತಿಗಾಗಿ ಆಗಬಾರದೆಂದೂ ಯೇಸು ಕಲಿಸಿದ್ದುದಾಗಿ ಸುವಾರ್ತೆಯೇ ಹೇಳುತ್ತದೆ. ನೋಡಿರಿ :

"ನೀವು ಉಪವಾಸ ಮಾಡುವಾಗ ಕಪಟಿಗಳಂತೆ ಮುಖವನ್ನು ಸಪ್ಪಗೆ ಮಾಡಿಕೊಳ್ಳಬೇಡಿರಿ. ಅವರು ತಾವು ಉಪವಾಸಿಗಳೆಂದು ಜನರಿಗೆ ತೋರುವುದಕ್ಕಾಗಿ ತಮ್ಮ ಮುಖವನ್ನು ವಿಕಾರ ಮಾಡಿಕೊಳ್ಳುತ್ತಾರೆ. ಅವರು ತಮಗೆ ಬರತಕ್ಕ ಫಲವನ್ನು ಹೊಂದಿದ್ದಾಯಿತೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ. ಆದರೆ ನೀನು ಉಪವಾಸ ಮಾಡುವಾಗ ತಲೆಗೆ ಎಣ್ಣೆ ಹಚ್ಚಿಕೊಂಡು ಮುಖವನ್ನು ತೊಳಕೋ. ಹೀಗೆ ಮಾಡಿದರೆ ನೀನು ಉಪವಾಸಿಯೆಂದು ಜನರಿಗೆ ಕಾಣದೆಹೋದಾಗ್ಯೂ ಅಂತರಂಗದಲ್ಲಿರುವ ನಿನ್ನ ತಂದೆಗೆ ಉಪವಾಸಿಯೆಂದು ಕಾಣಿಸಿಕೊಳ್ಳುವಿ. ಅಂತರಂಗದಲ್ಲಿ ನಡೆಯುವುದನ್ನು ನೋಡುವ ನಿನ್ನ ತಂದೆಯು ನಿನಗೆ ಫಲ ಕೊಡುವನು. (ಮತ್ತಾಯ 7: 16–1೮.)

ಮಾತ್ರವಲ್ಲ, ದಿವ್ಯ ಪ್ರವಾದಿಗಳ ರೂಢಿಯನುಸಾರ ಯೇಸುಕ್ರಿಸ್ತರು ಸಹ ತನ್ನ ದೌತ್ಯಲಬ್ಧಿಗೆ ಮುಂಚೆ ನಾಲ್ವತ್ತು ದಿವಸ ಉಪವಾಸ ಅನುಷ್ಠಿಸಿದ್ದರೆಂದು ಸ್ವಲ್ಪ ರೂಪಾಂತರಗೊಂಡ ರೀತಿಯಲ್ಲಾದರೂ ಬೈಬಲ್ ನಮಗೆ ತಿಳಿಸಿಕೊಡುತ್ತದೆ. ನೋಡಿರಿ :

"ಆಗ ಯೇಸು ಸೈತಾನನಿಂದ ಶೋಧಿಸಲ್ಪಡುವುದಕ್ಕಾಗಿ ಆತ್ಮನು ಆತನನ್ನು ಅಡವಿಗೆ ಒಯ್ದನು. ಆತನು ನಾಲ್ವತ್ತು ದಿವಸ ಹಗಲಿರುಳು ಉಪವಾಸವಿದ್ದ ತರುವಾಯ ಆತನಿಗೆ ಹಸಿವಾಯಿತು. (ಮತ್ತಾಯ 4:1–2)

ಇಸ್ಲಾಮ್ ನವೀನ ಪಾಶ್ಚಿಮಾತ್ಯರ ನೋಟದಲ್ಲಿ:

# ಇಸ್ಲಾಮಿಕ ನಿಯಮಗಳು ಮತ್ತು ನಾಗರಿಕತೆ

—ಡಾಕ್ಟರ್ ಲೋರಾ ವಿ. ವಾಗ್ಲಿಯೇರಿ

ನಾವು ಇಸ್ಲಾಮ್ ಧರ್ಮದ ಕುರಿತು ಮನಃಪೂರ್ವಕವಾದ, ಗಾಢವಾದ ಮೆಚ್ಚುಗೆಯನ್ನು ವ್ಯಕ್ತಗೊಳಿಸಬೇಕಾಗಿದೆ : ಅದು ಮನುಷ್ಯನ ಸಹಜ ಗುಣಗಳಿಗನುಗುಣವಾದ ತತ್ತ್ವಶಾಸ್ತ್ರವನ್ನು ಮಂಡನೆ ಮಾಡುವುದಕ್ಕೆ ತನ್ನ ಧರ್ಮಸಂಹಿತೆಯನ್ನು ಸೀಮಿತಗೊಳಿಸದೆ ಮಾನವರಿಗೆ ಜೀವನ ಮಾರ್ಗವನ್ನು ಗಮಿಸಲು ಅತ್ಯುತ್ಕೃಷ್ಟ ವಿಧಿವಿಧಾನಗಳನ್ನು ಸೂಚಿಸಿ ಜೀವಿತದ ಒಂದು ಸಿದ್ಧಾಂತವನ್ನೇ ರೂಪಿಸುತ್ತದೆ. ಅದು ನೀತಿಶಾಸ್ತ್ರದ ಮೂಲತತ್ತ್ವಗಳನ್ನು ಕ್ರಮಬದ್ಧವಾದ, ನಿಷ್ಕೃಷ್ಟವಾದ ರೂಪದಲ್ಲಿ ವ್ಯಕ್ತಗೊಳಿಸುತ್ತದೆ. ಅದು ಮನುಷ್ಯನಿಗೆ, ಸ್ವಯಂ ಸಂಬಂಧವಾಗಿರುವ ಕರ್ತವ್ಯಗಳನ್ನೂ ಇತರರ ಕುರಿತು ಆತನಿಗಿರುವ ಕರ್ತವ್ಯಗಳನ್ನೂ ಸ್ಪಷ್ಟವಾದ ನಿಬಂಧನೆಗಳಿಗೆ ಒಳಪಡಿಸುತ್ತದೆ. ಈ ನಿಬಂಧನೆಗಳು ಪರಿವರ್ತನಕರವೂ ಮನುಷ್ಯನ ಅತ್ಯುನ್ನತ ಬೌದ್ಧಿಕ ಪುರೋಗತಿಗೆ ಅನುಯೋಜ್ಯವೂ ಆಗಿದೆ. ಈ ಎಲ್ಲಾ ನೀತಿನಿಯಮಗಳಿಗೆ ದೈವಿಕ ಅನುಮೋದನೆಯಿರುತ್ತದೆ. ಇಂತಹ ಮತದ ಪ್ರಭಾವ ಮನುಷ್ಯರಜೀವಿತದಲ್ಲಿ ಸಾಮಾನ್ಯವಾಗಿ ಮತ್ತು ವಿಶೇಷವಾಗಿ ಅಜ್ಞಾನಿಗಳೂ ಅವಿದ್ಯಾವಂತರೂ ಆದ ಜನರ ಮೇಲೆ ಹಿತಕರವಾಗಿ ಪರಿಣಮಿಸುತ್ತದೆ. ನೈತಿಕ ನಿಯಮಗಳು ಕಾನೂನಿನ ನಿಷ್ಕರ್ಷತೆಯಿಂದಲೂ ನಿಯಮೋಲ್ಲಂಘನೆಗೆ ನಿಶ್ಚಿತ ದಂಡನಾವಿಧಿಗಳಿಂದಲೂ ಕೂಡಿರದಿದ್ದರೆ ಇಂತಹ ಜನರಿಗೆ ಈ ನಿಯಮಗಳು ಯಾವುದೇ ಬೆಲೆಯಿಲ್ಲದವುಗಳಾಗುತ್ತವೆ.

ಇಸ್ಲಾಮ್ ಮೇಲೆ ವಿವರಿಸಿದಂತಹ ಧರ್ಮವಾಗಿದೆ. ಮನುಷ್ಯರ ಪ್ರಕೃತಿ ಉಪದೇಶ ಮತ್ತು ಅವ್ಯಕ್ತ ತತ್ತ್ವಗಳಿಗಿಂತ ಹೆಚ್ಚಾಗಿ ಅಧಿಕಾರಯುತವಾದ ಆಜ್ಞೆಗಳಿಂದ ಮಾರ್ಗದರ್ಶನಕ್ಕೊಳಪಡುತ್ತದೆ ಎಂಬ ತತ್ತ್ವವನ್ನು ಪರಿಗಣಿಸಿದ ಇಸ್ಲಾಮ್ ಮನುಷ್ಯರನ್ನು ಅತ್ಯಂತ ಮಹೋನ್ನತಾಧಿಕಾರ ಪಡೆದ ದೇವರ ನಿಷ್ಕೃಷ್ಟವಾದ ಆಜ್ಞೆಗಳಿಂದ ಅಭಿಮುಖೀಕರಿಸಿತು. ಇದು ಇಸ್ಲಾಮ್

---

"ಕೂಡಲೆ ಯೇಸು ದೇವರಾತ್ಮ ಪ್ರೇರಿತನಾಗಿ ಅಡವಿಗೆ ಹೋದನು. ಆತನು ನಾಲ್ವತ್ತು ದಿವಸ ಅಡವಿಯಲ್ಲಿ ಮೃಗಗಳೊಂದಿಗೆ ಇದ್ದು ಸೈತಾನನಿಂದ ಶೋಧಿಸಲ್ಪಡುವವನಾದನು; ಮತ್ತು ದೇವದೂತರು ಆತನಿಗೆ ಉಪಚಾರ ಮಾಡಿದರು. (ಮಾರ್ಕ 1 : 12–13)

"ಯೇಸು ಪವಿತ್ರಾತ್ಮಭರಿತನಾಗಿ ಯೋರ್ದನ್ ಹೊಳೆಯಿಂದ ಹಿಂತಿರುಗಿ ದೇವರಾತ್ಮನಿಂದ ನಾಲ್ವತ್ತು ದಿವಸ ಅಡವಿಯಲ್ಲಿ ನಡೆಸಲ್ಪಡುತ್ತಾ ಸೈತಾನನಿಂದ ಶೋಧಿಸಲ್ಪಟ್ಟನು. ಆ ದಿವಸಗಳಲ್ಲಿ ಆತನು ಏನೂ ತಿನ್ನಲಿಲ್ಲ. ಆವು ಕಳೆದ ಮೇಲೆ ಆತನಿಗೆ ಹಸಿವಾಯಿತು." (ಲೂಕ 4 : 1–2).

ಮೇಲಿನ ವಿವರಣೆಗಳಲ್ಲಿ ಕಂಡುಬರುವಂತಹ ವೈರುಧ್ಯಗಳನ್ನೂ ಅತಿಶಯೋಕ್ತಿಗಳನ್ನೂ ನಿರ್ಲಕ್ಷಿಸಿ ಅವುಗಳಲ್ಲಿ ಅಡಕವಾಗಿರುವ ಒಂದು ಸಂಗತಿಯನ್ನು ನಮಗೆ ತಿಳಿದುಕೊಳ್ಳಬಹುದಾಗಿದೆ. ಅದೇನೆಂದರೆ,ಯೇಸು ಕ್ರಿಸ್ತರು ತನ್ನ ಪ್ರವಾದಿತ್ವದ ಆರಂಭ ಕಾಲದಲ್ಲಿ ವನಾಂತರಗಳಿಗೆ ಹೋಗಿ ನಾಲ್ವತ್ತು ದಿವಸ ಉಪವಾಸ ಅನುಷ್ಠಿಸಿದ್ದರೆಂದು ಈ ವಚನಗಳಿಂದ ಸಾಬೀತಾಗುತ್ತದೆ. ಹೀಗಿರುವಾಗ, ಯೇಸು ಉಪವಾಸವನ್ನು ಒಂದು ದುಃಖಾಚರಣೆಯಂತೆ ಗಣಿಸಿದ್ದರೆಂದು ನಂಬುವುದು ಅಸಾಧ್ಯ.

ಸಂಕ್ಷಿಪ್ತವಾಗಿ, ಉಪವಾಸಕ್ಕೆ ಸಂಬಂಧಿಸಿದ ಈಗಿನ ಕ್ರೈಸ್ತಮತದ ನಿಲುವು ಯೇಸುಕ್ರಿಸ್ತರ ಯಥಾರ್ಥ ಜೀವನ ಮಾದರಿಯೊಂದಿಗೆ ತಾಳೆಬರುವುದಿಲ್ಲವೆಂಬುದು ಸ್ಪಷ್ಟ.

★

ಧರ್ಮದ ಮಹತ್ತಾದ ವಿಜಯಕ್ಕೆ ಇನ್ನೊಂದು ಕಾರಣವಾಗಿದೆ. ಇಸ್ಲಾಮ್ ಧರ್ಮ ಐಕ್ಯದಿಂದ ಕೂಡಿದ ಬಲಶಾಲಿ ಜನಾಂಗವೊಂದನ್ನು ನೈತಿಕ ತತ್ವಗಳ ತಳಹದಿಯಲ್ಲಿ ರೂಪಿಸಲು ಅರೇಬಿಯಾದಲ್ಲಿ ಶಕ್ತವಾದುದು–ಎಲ್ಲಿ ಪರಿಪೂರ್ಣವಾಗಿ ಅರಾಜಕತೆ ಇದ್ದಿತೋ, ಎಲ್ಲಿ ಸರಕಾರ ಎಂಬ ಸ್ವತಂತ್ರ ಸಾಮಾಜಿಕ ಸಂಸ್ಥೆಯ ಬಗ್ಗೆ ಯಾವುದೇ ತಿಳುವಳಿಕೆ ಇರಲಿಲ್ಲವೋ, ಎಲ್ಲಿ ಯಾವುದೇ ವಿಧದ ಮಾನವೀಯ ಆಧಿಪತ್ಯ ಅಸಹ್ಯವೆಂದು ಪರಿಗಣಿಸಲ್ಪಡುತ್ತಿತ್ತೋ, ಎಲ್ಲಿ ಹಿಂಸೆಯೇ ನಿಯಮವಾಗಿತ್ತೋ, ಎಲ್ಲಿ ಕೊಲೆ ಮತ್ತು ಕಳವು ಶಿಕ್ಷಾರ್ಹವಾದ ತಪ್ಪುಗಳಾಗಿರದೆ ಕೊಲೆಗೊಳಗಾದ ಅಥವಾ ಘಾಸಿಗೊಳಗಾದವರ ಕುಟುಂಬದವರಿಂದ ಅಥವಾ ಗೋತ್ರದವರಿಂದ ಪ್ರತೀಕಾರಕ್ಕೆ ಮಾತ್ರ ಯೋಗ್ಯವಾಗಿದ್ದುವೋ, ಅಂತಹ ಅರೇಬಿಯಾದಲ್ಲಿ ಇದು ಸಾಧಿತವಾದುದು – ಇಸ್ಲಾಮ್ ಒಂದು ನಿಯಮ ಸಂಹಿತೆಯೂ ಒಂದು ಧರ್ಮವೂ ಆದಕಾರಣದಿಂದಾಗಿದೆ.

“ಶರೀಅತ್” (ಇಸ್ಲಾಮಿಕ ನಿಯಮ ಸಂಹಿತೆ) ಕೇವಲ ಆರಾಧನಾ ವಿಧಿಗಳನ್ನು ಸೂಚಿಸುವುದಕ್ಕೆ ಸೀಮಿವಾಗಿಲ್ಲ. ಸಾರ್ವಜನಿಕ ಜೀವನದ ಮತ್ತು ವೈಯಕ್ತಿಕ ಜೀವನದ ಎಲ್ಲಾ ಘಟ್ಟಗಳಲ್ಲಿಯೂ ಅದು ತನ್ನ ತೀರ್ಮಾನಗಳನ್ನು ನೀಡುತ್ತದೆ. ವ್ಯಕ್ತಿಯ ಎಲ್ಲಾ ವರ್ತನೆಗಳೂ ಅವನ ಧಾರ್ಮಿಕ ನಡೆವಳಿಕೆಗೆ ಸಂಬಂಧಿಸುವ ಉದ್ದೇಶದಿಂದ ಈ ಆಜ್ಞೆಗಳನ್ನು ನೀಡಲಾಗಿದೆ. ಕಾನೂನಿನ ಎಲ್ಲಾ ಶಾಖೆಗಳೂ ಈ ನಿಯಮ ಸಂಹಿತೆಯಲ್ಲಿ ಅಡಕವಾಗಿವೆ.

ವಿವಿಧ ನೈತಿಕ ನಡೆವಳಿಕೆಗಳನ್ನು ರೂಢಿಸುವ ನಿಯಮಗಳನ್ನು ನಿರ್ಮಿಸುವಾಗ ನಿಯಮ ನಿರ್ಮಾಪಕರಿಗೆ ಯಾವಾಗಲೂ ಪವಿತ್ರ ಖುರ್‌ಆನಿನ ಕಡೆಗೆ ಮಾರ್ಗದರ್ಶನಕ್ಕಾಗಿ ತಿರುಗಲು ಸಾಧ್ಯವಿರಲಿಲ್ಲ. ಪವಿತ್ರ ಖುರ್‌ಆನಿನ ಕೆಲವೇ ವಚನಗಳು ಮಾತ್ರ ನ್ಯಾಯ ವಿಧಾಯಕಗಳಾಗಿವೆ. ಈ ವಚನಗಳೂ ಬೃಹತ್ತಾದ ನೀತಿ ಸೂತ್ರಗಳನ್ನು ವ್ಯಕ್ತಗೊಳಿಸುತ್ತವೆ. ಜೀವಿತದ ಹಲವಾರು ಪ್ರಶ್ನೆಗಳ ಪರಿಹಾರಕ್ಕಾಗಿ ಪೈಗಂಬರರ ಆಚಾರ ವಿಧಿಗಳನ್ನೂ-ಅವು ಪವಿತ್ರ ಖುರ್‌ಆನಿನ ನಿಯಮಗಳಿಗೆ ಧಾರಾಳವಾದ ಪೂರಕ ನಿಯಮಗಳನ್ನೊದಗಿಸುತ್ತಿದ್ದರೂ–ಪೂರ್ಣವಾಗಿ ಅವಲಂಬಿಸಿರಲು ಸಾಧ್ಯವಿರಲಿಲ್ಲ. ಈ ಕಾರಣದಿಂದಲೇ ಮುಸ್ಲಿಮ್ ಲೋಕದಲ್ಲಿ “ಇಜ್ಮಾ” ಅಥವಾ ಐಕ್ಯಮತ್ಯದ ನಿರ್ಣಯದ ತತ್ವವು ಜಾರಿಗೆ ಬಂದಿದೆ. ಈ ರೀತಿ ಐಕ್ಯಮತ್ಯದ ತೀರ್ಮಾನ ಕೈಗೊಳ್ಳುವವರು ಆಯಾ ಕಾಲದಲ್ಲಿ ಅತ್ಯಧಿಕ ವಿದ್ಯಾಸಂಪನ್ನರಾದ ಮುಸ್ಲಿಮರಾಗಿದ್ದರು. ಐಕ್ಯಮತ್ಯದಿಂದ ಕೈಗೊಂಡ ಅತ್ಯುತ್ತಮ ತೀರ್ಮಾನಗಳು ಸರ್ವರೂ ಅನುಸರಿಸಬೇಕಾದ ಕಾನೂನುಗಳಾಗಿ ಅಂಗೀಕಾರವನ್ನು ಪಡೆದುವು.

ಪೈಗಂಬರರು ಈ ರೀತಿ ಹೇಳಿದ್ದರು: “ನನ್ನ ಅನುಯಾಯಿಗಳು ತಪ್ಪಾದ ಒಂದು ತೀರ್ಮಾನದ ಕುರಿತು ಐಕ್ಯಮತ್ಯವನ್ನು ಹೊಂದಲಾರರು”. ಒಂದು ವಿದ್ಯಾಸಂಪನ್ನರಾದ ಮುಸ್ಲಿಮರ ಗುಂಪು ಐಕ್ಯಮತ್ಯದಿಂದ ಸರಿಯೆಂದೂ ನ್ಯಾಯಯುತವಾದುವೆಂದೂ ಸ್ವೀಕರಿಸುವ ಅಂಶಗಳು ಸರ್ವ ಮುಸ್ಲಿಮರಿಂದಲೂ ಸರಿಯೆಂದೂ ನ್ಯಾಯಯುತವಾದುವೆಂದೂ ಅಂಗೀಕರಿಸಲ್ಪಟ್ಟು ಈ ರೀತಿ ಸರ್ವ ಸಮ್ಮತಿಯಿಂದ ಕೈಗೊಂಡ ತೀರ್ಮಾನಗಳು ಸರ್ವರೂ ಪಾಲಿಸಲು ನಿರ್ಬಂಧಿಸಲ್ಪಡುವ ಕಾನೂನಿನ ಅಧಿಕಾರವನ್ನು ಪಡೆದುವು.

“ಇಜ್ಮಾ” ಅಥವಾ ಸರ್ವಸಮ್ಮತವಾದ ತೀರ್ಮಾನಗಳು ಇಸ್ಲಾಮಿನ ಪುರೋಗತಿಯಲ್ಲಿ ಪ್ರಧಾನ ಪಾತ್ರ ವಹಿಸಿದ್ದು ಅದರ ಅಭಿವೃದ್ಧಿಯನ್ನು ಮುಂದುವರಿಸುವ ಶಕ್ತಿಯೂ ಆಗಿದ್ದಿತು. ಅರಬಿಗಳಲ್ಲದ ಜನತೆಯಲ್ಲಿ ವಾಡಿಕೆಯಲ್ಲಿದ್ದ ಕಾನೂನುಗಳು ದೈವಿಕ ಕಾನೂನಿನ ವಿಧಿಗಳಿಗೆ ವಿರುದ್ಧವಾಗಿಲ್ಲದಿದ್ದರೆ ಅವುಗಳನ್ನು ಇಸ್ಲಾಮಿಕ ನ್ಯಾಯ ಸಂಹಿತೆಗಳಲ್ಲಿ ಸೇರಿಸಲು “ಇಜ್ಮಾ” ತತ್ವ ಸಹಕರಿಸಿತು. ಇತ್ತೀಚೆಗೆ ಮುಸ್ಲಿಮ್ ಲೋಕವು ಹೊಂದಿರುವುದಾಗಿ ಕಂಡು ಬರುವ ಒರಟುತನವನ್ನು ತೊರೆದರೆ (ಆಶಾದಾಯಕ ಚಿಹ್ನೆಗಳು ದಿಗಂತದಲ್ಲಿ ಈಗಲೇ ಕಾಣತೊಡಗಿವೆ) ಈ “ಇಜ್ಮಾ” ತತ್ವದ ಅನುಸರಣೆಯಿಂದಲೇ ಇಸ್ಲಾಮ್ ಧರ್ಮ ಸ್ವತಂತ್ರವಾಗಿ ಇನ್ನೊಮ್ಮೆ ಮುನ್ನಡೆದು ಇಂದಿನ ಕಾಲಕ್ಕೆ ಯೋಗ್ಯವಾದ ರೀತಿಯಲ್ಲಿ ಹೊಂದಿಕೊಳ್ಳುವುದಕ್ಕೆ ಸಹಕಾರಿಯಾಗುವುದು.

“ಇಜ್ಮಾ” ತತ್ವಕ್ಕಾಗಿ ನಾವು ಇಸ್ಲಾಮಿಗೆ ಕೃತಜ್ಞತೆ ಸೂಚಿಸಬೇಕಾಗಿದೆ. ಮುಹಮ್ಮದ್ ಪೈಗಂಬರರು ಪ್ರವಾದಿಗಳಾಗುವ ಮೊದಲೇ ಜಾರಿಯಲ್ಲಿದ್ದ ಹಲವಾರು ನಿಯಮಗಳು ಸ್ವೀಕೃತವಾಗಿ, ಅವುಗಳು ಇಸ್ಲಾಮೀ ನಿಯಮ ಸಂಹಿತೆಯಲ್ಲಿ ಸೇರಿಸಲ್ಪಟ್ಟು ನಿಯಮಗಳು ಪೂರ್ಣ ರೂಪ ಪಡೆಯುವಂತೆ ಆದುದು ಈ “ಇಜ್ಮಾ”

ತತ್ವದ ಪಾಲನೆಯಿಂದಲೇ ಆಗಿದೆ. ಈ ನಿಯಮಗಳ ಮೌಲ್ಯಮಾಪನ ಈಗ ಪ್ರಶ್ನೆಯಾಗಿಲ್ಲ; ಈಗ ನಾವು ಅವುಗಳ ಕುರಿತು ಇಲ್ಲಿ ಚರ್ಚಿಸುವುದಿಲ್ಲ. ಅಪಾರವಾದ ಪ್ರಶ್ನಾತೀತ ಜಾಣ್ಮೆಯಿಂದ ವಿರಚಿತವಾದುದೆಂದು ತಿಳಿಯಲ್ಪಡುವ ಇಸ್ಲಾಮಿಕ ನಿಯಮಗಳ ಕುರಿತು ಸಹ ಇಲ್ಲಿ ಚರ್ಚಿಸುವುದಿಲ್ಲ. ಆದರೆ ಇಲ್ಲಿ ನಾವು ಅವಿಶ್ವಾಸಿಗಳಿಂದ ವಿಮರ್ಶಿಸಲ್ಪಡುತ್ತಿರುವ ಇಸ್ಲಾಮಿಕ ಸಾಮಾಜಿಕ ಪದ್ಧತಿಗಳ ಪರವಾಗಿ ಯಾವ ರೀತಿಯಲ್ಲಿ ವಾದ ಮಾಡಬಹುದೆಂದು ಪರ್ಯಾಲೋಚಿಸುವ:

ನಾವು ಮೇಲೆ ಹೇಳಿದಂತೆ ಪವಿತ್ರ ಖುರ್‌ಆನ್ ಕೆಲವೇ ನಿಬಂಧನೆಗಳನ್ನು ನಿರ್ದಿಷ್ಟವಾದ ಕಾನೂನಿನ ರೂಪದಲ್ಲಿ ವ್ಯಕ್ತಗೊಳಿಸಿತು. ಹೆಚ್ಚಿನ ಸಂದರ್ಭಗಳಲ್ಲಿ ಅದು ತನ್ನ ಅನುಯಾಯಿಗಳು ಜೀವಿಸುವ ರಾಜ್ಯ ಮತ್ತು ಕಾಲಕ್ಕನುಗುಣವಾಗಿ ಸ್ಥಾಪಿಸಲ್ಪಡುವ ವ್ಯವಸ್ಥೆಗಳಿಗೆ ಅನುಕೂಲವಾದ ರೀತಿಯಲ್ಲಿ ವರ್ತಿಸುವ ಸ್ವಾತಂತ್ರ್ಯವನ್ನು ನೀಡಿತು. ದೇವರ ದಯಾಪರತೆಯ ಅತ್ಯಂತಾಶ್ಚರ್ಯಕರವಾದ ಚಿಹ್ನೆ! ಮದುವೆಯ ವಿಷಯದಲ್ಲಾದರೋ ಕಟ್ಟುನಿಟ್ಟಾದ ನಿಯಮಗಳನ್ನು ಜಾರಿಗೆ ತರಲಾಯಿತು. ಕೆಲವು ಹತ್ತಿರದ ಸಂಬಂಧಿಗಳನ್ನು ಮದುವೆಯಾಗಲೇ ಬಾರದೆಂದು ನಿಯಮವಿದೆ. ಇದಕ್ಕೆ ವಿರುದ್ಧವಾಗಿ ಅಮುಸ್ಲಿಮರು ಯಾವುದೇ ಆಕ್ಷೇಪವೆತ್ತಿಲ್ಲ. ಆದರೆ ಪವಿತ್ರ ಖುರ್‌ಆನ್ ಕೆಲವು ಸಂದರ್ಭಗಳಲ್ಲಿ ಅನುಮತಿಸಿರುವ ಬಹುಭಾರ್ಯತ್ವದ ಪ್ರಶ್ನೆ ಬರುವಾಗ (ನಾವು ಇದರ ಕುರಿತು ಮುಂದೆ ಚರ್ಚಿಸಲಿದ್ದೇವೆ) ಎಲ್ಲಾ ವಿಧದ ವಿರೋಧ ಅಭಿಪ್ರಾಯಗಳು ಶಕ್ತಿಯುತವಾಗಿ ಮಂಡಿಸಲ್ಪಡುತ್ತವೆ.

ಬಹುಭಾರ್ಯತ್ವ ಸಾಮಾಜಿಕವಾದ ಒಂದು ತಪ್ಪು ನಡೆವಳಿಕೆಯೆಂಬುದನ್ನು ಸ್ಪಷ್ಟವಾಗಿ ಇಷ್ಟರವರೆಗೆ ಸಾದರಪಡಿಸಲು ಸಾಧ್ಯವಾಗಿಲ್ಲವೆಂದೂ ಅದು ಪ್ರಗತಿಗೆ ತಡೆಯಾಗಿದೆಯೆಂದು ರುಜುಪಡಿಸಲು ಸಾಧ್ಯವಿಲ್ಲವೆಂದೂ ನಾವು ಇಲ್ಲಿ ಹೇಳಬಹುದಾದರೂ ಈ ವಿಷಯದ ಕುರಿತು ಇಲ್ಲಿ ಹೆಚ್ಚಿಗೆ ಚರ್ಚಿಸುವುದನ್ನು ನಾವು ಇಚ್ಛಿಸುವುದಿಲ್ಲ. ಸಾಮಾಜಿಕ ಬೆಳವಣಿಗೆಯ ಕೆಲವು ಘಟ್ಟಗಳಲ್ಲಿ, ಕೆಲವು ವಿಶಿಷ್ಟ ಸಂದರ್ಭಗಳಲ್ಲಿ–ಉದಾಹರಣೆಗೆ ಯುದ್ಧದಲ್ಲಿ ಅತ್ಯಧಿಕ ಪುರುಷರು ಹತರಾದರೆ–ಬಹುಭಾರ್ಯತ್ವ ಒಂದು ಸಾಮಾಜಿಕ ಆವಶ್ಯಕತೆಯಾಗಿ ಪರಿವರ್ತಿಸುತ್ತದೆ. ಒಟ್ಟಾರೆ ಹೇಳುವುದಾದರೆ, ಬಹುಭಾರ್ಯತ್ವದ ಕುರಿತು ಅನಂತರದ ಕಾಲಗಳಲ್ಲಿ ಉಂಟಾದ ಕಲ್ಪನೆಗಳಿಗನುಸಾರವಾಗಿ ತೀರ್ಮಾನ ಕೈಗೊಳ್ಳಬಾರದು. ಮುಹಮ್ಮದ್ ಪೈಗಂಬರರ ಕಾಲದಲ್ಲಿ ಬಹುಭಾರ್ಯತ್ವವು ಸರ್ವರಿಂದಲೂ ಅಂಗೀಕರಿಸಲ್ಪಟ್ಟು ನಿಯಮಾನುಸಾರವೆಂದು ಅರಬಿ ಜನತೆಯಿಂದಲೂ ಆ ಪ್ರದೇಶದ ಇತರ ಜನಾಂಗಗಳಿಂದಲೂ ಪರಿಗಣಿಸಲ್ಪಡುತ್ತಿತ್ತು. ಯಥಾರ್ಥ ಸಂಗತಿಯೇನೆಂದರೆ ಇಸ್ಲಾಮಿಕ ಕಾನೂನು ಬಹುಭಾರ್ಯತ್ವದ ಕುರಿತು ಬಹಳ ರಿಯಾಯಿತಿ ತೋರಿಸುವುದಾಗಿ ಇಂದಿಗೆ ಕಂಡುಬರುವುದಾದರೂ ಅದು ಆ ಕಾಲದಲ್ಲಿ ಅನಿಯಂತ್ರಿತವಾಗಿ ಆಚರಿಸಲ್ಪಡುತ್ತಿದ್ದ ಬಹುಭಾರ್ಯತ್ವವನ್ನು ಮುಹಮ್ಮದ್ ಪೈಗಂಬರರ ಅನುಯಾಯಿಗಳಿಗೆ ನಿಯಂತ್ರಣಕ್ಕೊಳಗಾಗುವಂತೆ ಮಾಡಿತು. ಇಸ್ಲಾಮ್ ಧರ್ಮ ಶರ್ತಕ್ಕೊಳಪಟ್ಟ ಅಲ್ಪಕಾಲೀನ ಮದುವೆಗಳನ್ನು ಖಂಡಿಸಿತು. ಇಂತಹ ಅಲ್ಪ ಕಾಲಾವಧಿಯ ಶರ್ತದ ಮದುವೆಗಳು ಯಥಾರ್ಥವಾಗಿ ಕಾನೂನುಬದ್ಧ ವ್ಯಭಿಚಾರವಾಗಿತ್ತು. ಇಸ್ಲಾಮ್ ಧರ್ಮ ಸ್ತ್ರೀಯರಿಗೆ ಹಿಂದೆ ಎಂದೂ ದೊರಕದ ಹಕ್ಕುಗಳನ್ನು ನೀಡಿತು. ಇಂತಹ ಎಲ್ಲಾ ವಿಷಯಗಳನ್ನು ಸುಲಭವಾಗಿ ರುಜುವಾತು ಸಹಿತವಾಗಿ ಇಲ್ಲಿ ಬರೆಯುತ್ತಾ ಹೋಗಬಹುದಾಗಿತ್ತು. ಆದರೆ ಈ ಪ್ರಶ್ನೆಯ ಇನ್ನೊಂದು ಪ್ರಧಾನ ಅಂಶವನ್ನು ಇಲ್ಲಿ ವ್ಯಕ್ತಗೊಳಿಸಬೇಕಾಗಿದೆ.

ಪವಿತ್ರ ಖುರ್‌ಆನ್ ಒಬ್ಬ ಪುರುಷ ಎರಡು, ಮೂರು, ನಾಲ್ಕು ಸ್ತ್ರೀಯರನ್ನು ಸಹ ವಿವಾಹವಾಗಬಹುದೆಂದು ಅನುಮತಿ ನೀಡಿದೆ. ಆದರೆ ಅದೇ ಸಂದರ್ಭದಲ್ಲಿ ಪವಿತ್ರ ಖುರ್‌ಆನ್ ಒಂದು ಪ್ರಧಾನವಾದ, ನಿರ್ಲಕ್ಷ್ಯಮಾಡಲಸಾಧ್ಯವಾದ ಒಂದು ಶರ್ತವನ್ನು ಮುಂದಿರಿಸಿದೆ: ಪತಿ ತನ್ನ ಪತ್ನಿಯರಿಗೆ ಅತ್ಯಂತ ಪರಿಪೂರ್ಣವಾದ ನ್ಯಾಯವನ್ನು ನೀಡಬೇಕೆಂದು ಅದು ನಿರ್ಬಂಧಿಸುತ್ತದೆ. "ನ್ಯಾಯ" ಎಂಬುದರ ಅರ್ಥ ಸರಿಸಮಾನವಾಗಿ ಸರ್ವ ಪತ್ನಿಯರಿಗೆ ಸಾಮಾಗ್ರಿಗಳನ್ನು ನೀಡುವುದು ಮಾತ್ರವಲ್ಲ ಪ್ರೀತಿಯನ್ನು ತೋರುವುದೂ ಅತ್ಯಾವಶ್ಯಕವಾಗಿದೆ: "ನೀವು ಎರಡು, ಮೂರು ಅಥವಾ ನಾಲ್ಕು ಸ್ತ್ರೀಯರನ್ನು ಮದುವೆಯಾಗಿರಿ; ಆದರೆ ನೀವು ನ್ಯಾಯಯುತವಾಗಿ ನಡೆದುಕೊಳ್ಳಲಾರಿರೆಂದು ಶಂಕಿಸುವುದಾದರೆ

ಒಬ್ಬಳೇ ಸ್ತ್ರೀಯನ್ನು ವಿವಾಹವಾಗಿರಿ." (ಪವಿತ್ರ ಖುರ್‌ಆನ್ 4 : 4)

ಪವಿತ್ರ ಖುರ್‌ಆನಿನಲ್ಲಿ ಮೇಲೆ ಬರೆದ ವಚನ ವಿರುವ ಅಧ್ಯಾಯದಲ್ಲಿ ಮನುಷ್ಯನಲ್ಲಿ ಎಲ್ಲರೊಡನೆ ಸಮಾನವಾಗಿ ವರ್ತಿಸುವ ಗುಣ ಬಹಳ ಅಪೂರ್ವವೆಂದು ಸಹ ಕೆಲವು ವಚನಗಳು ಸೂಚಿಸುತ್ತವೆ. ಉದಾಹರಣೆಗೆ ಪವಿತ್ರ ಖುರ್‌ಆನಿನ ವಚನ 4:130 ಈ ರೀತಿ ಇದೆ:

"ನೀವು ಎಷ್ಟು ಆಶಿಸಿದರೂ ನಿಮಗೆ ಪತ್ನಿಯರ ಮಧ್ಯೆ ಪರಿಪೂರ್ಣವಾದ ನ್ಯಾಯವನ್ನು ಸ್ಥಾಪಿಸಲು ಸಾಧ್ಯವಾಗಲಾರದು."

ಮೇಲಿನ ವಚನಗಳ ಆಧಾರದ ಮೇಲೆ ನಾವು ಈ ರೀತಿ ತೀರ್ಮಾನಿಸಬಹುದು: ಬಹುಭಾರ್ಯತ್ವ ಅನುಮತಿಸಲ್ಪಟ್ಟಿದೆಯೆಂದು ಸಾದರಪಡಿಸಬಹುದಾದರೂ ಕಾರ್ಯರೂಪದಲ್ಲಿ ಇದನ್ನು ಜಾರಿಗೆ ತರಲು ಮೇಲಿನ ಶರ್ತದ ಪರಿಪಾಲನೆ ಅತ್ಯಾವಶ್ಯಕವಾದ ಕಾರಣ ಬಹುಭಾರ್ಯತ್ವವನ್ನು ಅಸಾಧ್ಯವನ್ನಾಗಿ ಮೇಲಿನ ವಚನಗಳು ಮಾಡಿವೆ. ದೇವರ ಆಜ್ಞೆ ಯಥಾರ್ಥವಾಗಿ ಬಹುಭಾರ್ಯತ್ವಕ್ಕೆ ತಡೆಯಾಗಿದೆಯೆಂದು ಪ್ರಸಿದ್ಧ ಪಂಡಿತರಾದ ಅಬ್ದುಹ್, ಹರವೀ ಮತ್ತು ಅಮೀರ್‌ಅಲಿ ಹೇಳುತ್ತಾರೆ.* ದೇವರಿಗೆ ಸ್ವೀಕಾರ್ಯವಾದುದೆಂದು ನಾವು ಬಹುಭಾರ್ಯತ್ವದ ಪರವಾಗಿ ವಾದಿಸಲು ಸಾಧ್ಯವಿಲ್ಲ. ಪೈಗಂಬರರ ವೈಯಕ್ತಿಕ ಜೀವನದ ಸಾಕ್ಷ್ಯವನ್ನು ನಾವು ಬಹುಭಾರ್ಯತ್ವದ ಪರವಾಗಿ ನೀಡಲು ಸಾಧ್ಯವಿಲ್ಲ. ಪೈಗಂಬರರು ಬಹುಭಾರ್ಯತ್ವವನ್ನು ಕೈಗೊಂಡುದು ಅವರಿಗಿದ್ದ ವೈಯಕ್ತಿಕ ಕಾರಣಗಳಿಂದಲೂ ವಿಶಿಷ್ಟ ಜವಾಬ್ದಾರಿಕೆಗಳ ಪರಿಣಾಮವಾಗಿಯೂ ಆಗಿತ್ತು. ನ್ಯಾಯಯುತವಾದ ನಡೆವಳಿಕೆಯ ಶರ್ತದ ಪರಿಪಾಲನೆಯಲ್ಲಿ ಪೈಗಂಬರರಿಗೂ ಇತರ ಮನುಷ್ಯರಿಗೂ ಎಷ್ಟೋ ವ್ಯತ್ಯಾಸಗಳಿವೆ. ಅದೇ ರೀತಿ ಪೈಗಂಬರರು ಎದುರಿಸಿದ ಸಮಸ್ಯೆಗಳಿಗೂ ಕಷ್ಟಗಳಿಗೂ ಇತರ ಮನುಷ್ಯರ ಜೀವಿತ ಘಟನೆಗಳಿಗೂ ಎಷ್ಟೋ ವ್ಯತ್ಯಾಸಗಳಿವೆ.

ಇಸ್ಲಾಮ್ ಧರ್ಮದ ವೈರಿಗಳು ಮುಹಮ್ಮದ್ ಪೈಗಂಬರರನ್ನು ಕಾಮುಕ ವ್ಯಕ್ತಿಯೆಂದೂ ನೀಚನೆಂದೂ ಅವರ ಮದುವೆಗಳ ಆಧಾರದ ಮೇಲೆ ಅವರು ದುರ್ಬಲ ನೈತಿಕ ಗುಣಗಳನ್ನು ಹೊಂದಿದ ವ್ಯಕ್ತಿಯೆಂದೂ ಅದು ಅವರ ಪ್ರವಾದಿತ್ವದ ವಾದಕ್ಕನುಗುಣವಾಗಿಲ್ಲವೆಂದೂ ವಾದಿಸುತ್ತಾರೆ. ಆದರೆ ಇಸ್ಲಾಮಿನ ಈ ವೈರಿಗಳು ಒಂದು ಪ್ರಧಾನ ಸಂಗತಿಯನ್ನು ಗಣನೆಗೆ ತೆಗೆದುಕೊಳ್ಳಲು ನಿರಾಕರಿಸುತ್ತಾರೆ: ಮದುವೆಯೆಂಬ ಸಂಪ್ರದಾಯ ಅತ್ಯಂತ ನಿರ್ಬಲವಾಗಿದ್ದ, ಬಹುಭಾರ್ಯತ್ವವೇ ನಿಯಮವಾಗಿದ್ದ, ವಿವಾಹವಿಚ್ಛೇದನೆ ಅತ್ಯಂತ ಸುಲಭವಾಗಿದ್ದ ಅರಬಿಗಳ ಸಮಾಜದಲ್ಲಿ ಮುಹಮ್ಮದರು ನಿವಾಸಿಸುತ್ತಾ, ಕಾಮ ಭಾವನೆ ಅತ್ಯಂತ ಹೆಚ್ಚು ಇರುವ ಜೀವಿತ ಕಾಲವನ್ನು ಕೇವಲ ಒಬ್ಬ ಸ್ತ್ರೀಯನ್ನು ವಿವಾಹವಾಗಿ ಆ ಸ್ತ್ರೀ (ಖದೀಜ) ಅವರಿಗಿಂತ ಹೆಚ್ಚಿಗೆ ವಯಸ್ಸಾಗಿದ್ದವಳಾಗಿದ್ದರೂ ಸಹ ಆಕೆಯ ಸಹವಾಸದಲ್ಲಿ ಇಪ್ಪತ್ತೈದು ವರ್ಷಗಳ ಕಾಲ ವಿಶ್ವಸ್ತ, ಪ್ರೀತಿಸುವ ಪತಿಯಾಗಿ ಜೀವಿಸಿದರು. ಖದೀಜ ನಿಧನ ಹೊಂದಿದ ನಂತರ ಅವರ ಪ್ರಾಯ ಐವತ್ತು ವರ್ಷವಾಗಿದ್ದಾಗ, ಅವರು ಒಂದಕ್ಕಿಂತ ಹೆಚ್ಚು ವಿವಾಹವಾದರು. ಈ ಎಲ್ಲಾ ಮದುವೆಗಳಿಗೆ ಸಾಮಾಜಿಕ ಅಥವಾ ರಾಜಕೀಯ ಕಾರಣಗಳಿದ್ದುವು. ತನ್ನ ವಿವಾಹಗಳ ಮೂಲಕ ಪೈಗಂಬರರು ಪರಿಶುದ್ಧೆಯರಾದ ಸ್ತ್ರೀಯರನ್ನು ಬಹುಮಾನಿಸಲಿಕ್ಕೂ ಇತರ ಗೋತ್ರ ಅಥವಾ ಪಂಗಡಗಳ ಜೊತೆ ಸಂಬಂಧ ಸ್ಥಾಪಿಸಿ ಇಸ್ಲಾಮಿನ ಪ್ರಚಾರಕ್ಕೆ ಮಾರ್ಗಗಳನ್ನು ತೆರೆಯಲಿಕ್ಕೂ ಉದ್ದೇಶಿಸಿದ್ದರು. "ಆಯಿಷ" ಎಂಬ ಒಬ್ಬಳೇ ಒಬ್ಬ ಸ್ತ್ರೀಯ ಹೊರತು ಇತರ ಎಲ್ಲಾ ಸ್ತ್ರೀಯರು ಕನ್ಯೆಯರೋ, ಎಳೆ ವಯಸ್ಸಿನವರೋ ಸುಂದರಿಯರೋ ಆಗಿರಲಿಲ್ಲ. ಇದು ಕಾಮುಕತೆಯೇ?

ಮುಹಮ್ಮದ್ ಪೈಗಂಬರ್ ಒಬ್ಬ ಮನುಷ್ಯರಾಗಿದ್ದರು; ಅವರು ದೇವರಾಗಿರಲಿಲ್ಲ. ಒಬ್ಬ ಪುತ್ರನ ಕಾಂಕ್ಷೆ ಅವರನ್ನು ಇತರ ಮದುವೆಗಳಿಗೆ ಪ್ರೇರೇಪಿಸಿದ್ದಿರಲೂ ಬಹುದು. ಅವರಿಗೆ ಖದೀಜರವರಲ್ಲಿ ಜನಿಸಿದ ಪುತ್ರರೆಲ್ಲರೂ ಮೃತರಾಗಿದ್ದರು. ಹೆಚ್ಚಿನ ಸಂಪನ್ಮೂಲಗಳು ಇಲ್ಲದಿದ್ದರೂ ಅವರು ದೊಡ್ಡ ಸಂಸಾರವನ್ನು ಸಲಹುವ ಹೊರೆಯನ್ನು ತನ್ನ ಹೆಗಲ ಮೇಲೆ ಹೊತ್ತುಕೊಂಡರು. ಅವರು ಅಧಿಕ ಹೆಂಡತಿಯರನ್ನು ಹೊಂದಿದ್ದರೂ ಯಾವಾಗಲೂ ಅವರೆಲ್ಲರೊಡನೆ ಸಮಾನವಾಗಿ ವರ್ತಿಸಿದರು, ಅವರ ಪೈಕಿ ಯಾರ ವಿರುದ್ಧವೂ ಅವರು ವಿವಾಹ ವಿಚ್ಛೇದನದ ತನ್ನ ಹಕ್ಕನ್ನು ಚಲಾಯಿಸಲಿಲ್ಲ,

---

* ಗ್ರಂಥಕರ್ತೆಯ ಅಭಿಮತಗಳನ್ನೆಲ್ಲಾ ನಾವು ಪೂರ್ತಿ ಬೆಂಬಲಿಸಬೇಕೆಂದಿಲ್ಲ. —ಸಂ.

ಪೈಗಂಬರರು ಆದರಣೀಯರಾದ ಪುರಾತನ ಪ್ರವಾದಿಗಳಾದ ಮೂಸಾ (ಮೋಸೆಸ್) ಮತ್ತಿತರ ಯಹೂದ್ಯ ಪ್ರವಾದಿಗಳ ಪರಂಪರೆಯನ್ನನುಸರಿಸಿದರು. ಈ ಪುರಾತನ ಪ್ರವಾದಿಗಳ ಬಹುಭಾರ್ಯತ್ವದ ಕುರಿತು ಯಾರೂ ಆಕ್ಷೇಪಿಸಿರುವುದಿಲ್ಲ. ಹಿಂದಿನ ಪ್ರವಾದಿಗಳ ದೈನಂದಿನ ಜೀವಿತದ ಕುರಿತು ಯಾವುದೇ ದಾಖಲೆಗಳು ನಮ್ಮಲ್ಲಿಲ್ಲದಿರುವುದೇ ಇದಕ್ಕೆ ಕಾರಣವಾಗಿರಬಹುದೆ? ಆದರೆ ಮುಹಮ್ಮದರ ವಿಷಯದಲ್ಲಿ ಹೇಳುವುದಾದರೆ ನಮಗೆ ಅವರ ಕೌಟುಂಬಿಕ ಜೀವನದ ಕುರಿತು ಎಲ್ಲಾ ತಿಳಿದಿದೆ. ದುರದೃಷ್ಟವಶಾತ್ ಹಿಂದಿನ ಕಾಲದ ಮುಸ್ಲಿಮರು, ಏಕ ಭಾರ್ಯತ್ವಕ್ಕೆ ಕರೆಗೊಡುವ ಪವಿತ್ರ ಖುರ್‌ಆನಿನ ವಚನದ ವಿಮರ್ಶಾತ್ಮಕ ಎರಡನೆಯ ಭಾಗಕ್ಕೆ ಕಿವಿಗೊಡದೆ ಬಹುಭಾರ್ಯತ್ವಕ್ಕೆ ಅನುಮತಿಸಿರುವ ಆ ವಚನದ ಪ್ರಥಮ ಭಾಗವನ್ನು ಗಮನಿಸಿ ಆ ವಚನ ನೀಡಿರುವ ರಿಯಾಯಿತಿಯನ್ನು ಉಪಯೋಗಿಸಿಕೊಂಡು ಆ ವಚನದ ಸರಿಯಾದ ವ್ಯಾಖ್ಯಾನಕ್ಕೆ ಲಕ್ಷ್ಯ ಕೊಡಲಿಲ್ಲ. ಇಂದಿನ ಕಾಲದಲ್ಲಿ ಇಸ್ಲಾಮಿಕ ಜಗತ್ತಿನಲ್ಲಿ, ಪ್ರತ್ಯೇಕವಾಗಿ ಆಧುನಿಕ ನಾಗರಿಕತೆಯು ಪುರೋಗತಿಯನ್ನು ಕಂಡ ರಾಷ್ಟ್ರಗಳಲ್ಲಿ ಹೊಸ ನೈತಿಕ ತತ್ವಗಳು ತಳವೂರಿ ವಿವಿಧ ಕಾರಣಗಳ ಒತ್ತಡಗಳಿಂದಾಗಿ ಬಹುಭಾರ್ಯತ್ವ ಬಹಳ ಸಂಕುಚಿತಾವಸ್ಥೆಯನ್ನು ಪಡೆದಿದೆ.

ಪವಿತ್ರ ಖುರ್‌ಆನ್ ವಿವಾಹ ವಿಚ್ಛೇದನವನ್ನು ಅನುಮತಿಸಿದೆ. ಪಾಶ್ಚಿಮಾತ್ಯ ಸಮಾಜ ವಿವಾಹ ವಿಚ್ಛೇದನವನ್ನು ಸ್ವೀಕರಿಸಿ, ಅದು ಜೀವಿತದ ಒಂದು ಅತ್ಯಾವಶ್ಯಕ ಸಂಗತಿಯೆಂದು ಅಂಗೀಕರಿಸಿರುವುದರಿಂದಲೂ ಅದಕ್ಕೆ ಎಲ್ಲಾ ರಾಜ್ಯಗಳಲ್ಲೂ ಪೂರ್ಣ ಕಾನೂನಿನ ಬಲವನ್ನು ನೀಡಿರುವುದರಿಂದಲೂ ಇಸ್ಲಾಮ್ ಧರ್ಮ ವಿವಾಹ ವಿಚ್ಛೇದನವನ್ನು ಅಂಗೀಕರಿಸಿರುವುದರ ಔಚಿತ್ಯದ ಕುರಿತು ಇಲ್ಲಿ ಅದರ ಪರವಾಗಿ ವಾದಿಸುವುದನ್ನು ಕೈಬಿಡುತ್ತೇವೆ. ಆದರೆ ಇಲ್ಲಿ ವಿವಾಹ ವಿಚ್ಛೇದ ನಿಯಮದ ಕುರಿತು ಚರ್ಚಿಸುವುದರಿಂದ ಮತ್ತು ಅದನ್ನು ಇಸ್ಲಾಮ್ ಧರ್ಮಕ್ಕೆ ಹಿಂದಿನ ಅರಬಿ ಸಮಾಜದ ನಡೆವಳಿಕೆಗಳಿಗೆ ಹೋಲಿಸುವುದರಿಂದ ವಿವಾಹ ವಿಚ್ಛೇದನದ ಕುರಿತು ಇಸ್ಲಾಮಿಕ ನಿಯಮಗಳು ಈ ವಿಷಯದಲ್ಲಿಯೂ ಒಂದು ಸುಧಾರಣೆಯ ಪ್ರಾರಂಭವನ್ನುಂಟುಮಾಡಿತೆಂದು ತೋರಿಸಲು ಸಾಧ್ಯವಾದೀತು.

ಮುಹಮ್ಮದ್ ಪೈಗಂಬರರ ಕಾಲಕ್ಕೆ ಮೊದಲು ವಿವಾಹ ವಿಚ್ಛೇದನೆ ಅರಬಿಗಳ ಸಂಪ್ರದಾಯಗಳ ಪ್ರಕಾರ ಬಹಳ ಸುಲಭಗೊಳಿಸಲಾಗಿತ್ತು. ಪುರುಷನು ಕೇವಲ ಒಂದು ಶಬ್ದವನ್ನು ಉಚ್ಚರಿಸುವುದರ ಮೂಲಕ ಅಥವಾ ಒಂದೇ ಒಂದು ಸಂಜ್ಞೆ ತೋರಿಸುವುದರ ಮೂಲಕ ತನ್ನ ಪತ್ನಿಯನ್ನು ಆಕೆಯ ತವರುಮನೆಗೆ ಹಿಂತಿರುಗಿಸಲು ಸಾಧ್ಯವಿತ್ತು. ಪತ್ನಿ ತನ್ನ ವಾಸದ ಡೇರೆಯ ಪ್ರವೇಶ ದ್ವಾರದ ಪರದೆಯ ಒಳಮೈಯನ್ನು ಹೊರಗೆ ಮಗಚುವ ಮೂಲಕ ತಾನು ವಿವಾಹ ಬಾಂಧವ್ಯವನ್ನು ಕೊನೆಗೊಳಿಸಿರುವೆನೆಂದು ಸೂಚಿಸಬಹುದಿತ್ತು. (ಈ ಕ್ರಮ ಬಹಳ ಹೆಚ್ಚಾಗಿ ಜಾರಿಯಲ್ಲಿರದಿದ್ದರೂ ಇದಕ್ಕೆ ಧಾರಾಳ ಉದಾಹರಣೆಗಳು ಇಸ್ಲಾಮಿಗೆ ಮುಂಚಿತವಾದ ಅರಬಿ ಸಮಾಜದಲ್ಲಿ ದೊರೆಯುತ್ತವೆ). ಇಸ್ಲಾಮಿನ ನಿಯಮ ಸಂಹಿತೆಗಳು (ದೇವರ ನಿಯಮಗಳು) ವಿವಾಹ ವಿಚ್ಛೇದನೆಯನ್ನು ಅನುಮತಿಸುವುದು ಮಾತ್ರವಲ್ಲದೆ ಕೆಲವು ಸನ್ನಿವೇಶಗಳಲ್ಲಿ ವಿವಾಹ ವಿಚ್ಛೇದನೆಯ ರದ್ದತಿಯನ್ನು ಶಿಫಾರಸು ಮಾಡುತ್ತದೆ. ಗಂಡ ವಿವಾಹ ವಿಚ್ಛೇದನೆಯ ಶಬ್ದಗಳನ್ನು ಉಚ್ಚರಿಸಿದರೂ, ಒಂದು ನಿರ್ದಿಷ್ಟ ಕಾಲದ ಒಳಗೆ ಬಾಹ್ಯಾಚಾರ ರಹಿತವಾಗಿಯೇ ಅವಳನ್ನು ಪುನಃ ಸ್ವೀಕರಿಸುವ ಹಕ್ಕು ಅವನಿಗಿದೆ. ಈ ಕಾಲಾವಧಿಯಲ್ಲಿ ಅವಳು ಸ್ವಾಶ್ರಯದಲ್ಲಿದ್ದುಕೊಂಡು ಬೇರೆ ವಿವಾಹ ಮಾಡಿಕೊಂಡಿರಬಾರದು. ವಿವಾಹ ವಿಚ್ಛೇದನೆ ಸ್ಪಷ್ಟವಾಗಿ ಜಾರಿಗೆ ಬರುವುದು ವಿವಾಹ ವಿಚ್ಛೇದನೆಯ ಘೋಷಣೆ ಮಾಡಿದ ನಂತರದ ವಿರಾಮದ ಅವಧಿ ಪೂರ್ಣವಾದ ಬಳಿಕ ಮಾತ್ರವಾಗಿದೆ. ಸ್ತ್ರೀಗೆ ವಿವಾಹ ವಿಚ್ಛೇದನೆ ಕೇಳುವ ಹಕ್ಕು ಇರುವುದಿಲ್ಲ; ಆದರೆ ಆಕೆ ತನ್ನ ವಿವಾಹ ರದ್ದುಗೊಳಿಸಲಿಕ್ಕಾಗಿ ನ್ಯಾಯಾಧಿಪತಿಯನ್ನು ಯೋಗ್ಯವಾದ ಕಾರಣಗಳಿದ್ದರೆ ಕೇಳಬಹುದು. ಪುರುಷರಿಗಿಂತ ಸ್ತ್ರೀಯರು ದಿಢೀರ್ ತೀರ್ಮಾನಗಳನ್ನು ಕೈಗೊಳ್ಳುವವರೆಂದು ಭಾವಿಸಲಾಗಿರುವ ಕಾರಣ ಸ್ತ್ರೀಯರು ಸ್ವಇಷ್ಟದಿಂದ ವಿವಾಹ ವಿಚ್ಛೇದನೆ ಮಾಡುವುದನ್ನು ನಿಯಂತ್ರಿಸಿ, ವಿವಾಹ ವಿಚ್ಛೇದನೆಗಳು ಹೆಚ್ಚಾಗದಂತೆ ಮಾಡಲಾಗಿದೆ. ಸ್ತ್ರೀಯರು ವಿವಾಹ ವಿಚ್ಛೇದನಕ್ಕೆ ಅಭಿಲಾಷಿಸುವಾಗ ನ್ಯಾಯಾಧೀಶನ ಮಧ್ಯಪ್ರವೇಶವು ಸ್ತ್ರೀಗೆ ವಿವಾಹ ವಿಚ್ಛೇದನೆಯ ಸಂದರ್ಭದಲ್ಲಿ ಎಲ್ಲಾ ಬಗೆಯ ಆರ್ಥಿಕ ಮತ್ತಿತರ ಹಕ್ಕುಗಳು ದೊರೆಯುವಂತೆ ಮಾಡಲಿಕ್ಕಾಗಿದೆ.

ಮೇಲಿನ ನಿಯಮ ಮತ್ತು ಕುಟುಂಬದ ಒಳಗೆ ವೈಮನಸ್ಯ ತಲೆದೋರಿದರೆ ರಾಜಿಪಂಚಾಯತಿಗಾರರನ್ನು ನೇಮಿಸಿ ವಿರೋಧ ಭಾವನೆಗಳನ್ನು ಹೋಗಲಾಡಿಸಬೇಕೆಂಬ ಇನ್ನೊಂದು ನಿಯಮ ಇಸ್ಲಾಮ್ ಧರ್ಮ ವಿವಾಹ ವಿಚ್ಛೇದನೆಯನ್ನು ಅನಪೇಕ್ಷಣೀಯವೆಂದು ಪರಿಗಣಿಸುತ್ತದೆಯೆಂದು ಭಾವಿಸುವುದಕ್ಕೆ ತಕ್ಕ ಸಾಕ್ಷಿಯಾಗಿದೆ. ಪವಿತ್ರ ಖುರ್‌ಆನಿನ ಈ ಕೆಳಗಿನ ವಚನಗಳು ಇದನ್ನು ಸ್ಪಷ್ಟವಾಗಿ ನಿರೂಪಿಸುತ್ತವೆ:

"ತಮ್ಮ ಪತ್ನಿಯರನ್ನು ಸಮೀಪಿಸುವುದಿಲ್ಲವೆಂದು ಪ್ರಮಾಣ ಮಾಡುವವರಿಗೆ ನಾಲ್ಕು ತಿಂಗಳ ಅವಧಿಯಿದೆ. ಅದರೊಳಗೆ ಅವರು ತಮ್ಮ ಶಪಥವನ್ನು ಹಿಂತೆಗೆದು ತಮ್ಮ ಪತ್ನಿಯರೆಡೆಗೆ ಹಿಂದಿರುಗಿದರೆ ಅಲ್ಲಾಹು ನಿಶ್ಚಯವಾಗಿಯೂ ಕ್ಷಮಿಸುವವನೂ ದಯಾಳುವೂ ಆಗಿದ್ದಾನೆ.

ಅವರು ವಿವಾಹ ವಿಚ್ಛೇದನದ ಕುರಿತು ದೃಢ ನಿಶ್ಚಯ ಮಾಡಿದರೆ, ಅಲ್ಲಾಹನು ಎಲ್ಲವನ್ನು ಕೇಳುವವನೂ ತಿಳಿಯುವವನೂ ಆಗಿದ್ದಾನೆ." (2:227,228).

ಪೈಗಂಬರರ ಹಲವಾರು ವಚನಗಳು ಇದೇ ವಿಚಾರವನ್ನು ವ್ಯಕ್ತಗೊಳಿಸುತ್ತವೆ. ಉದಾಹರಣೆಗೆ ಈ ಕೆಳಗಿನ ಪೈಗಂಬರ್ ವಚನ ನೋಡಿರಿ:

"ದೇವರಿಗೆ ದಾಸನ ವಿಮೋಚನೆಗಿಂತ ಹೆಚ್ಚು ಪ್ರಿಯಕರವಾದುದು ಯಾವುದೂ ಇಲ್ಲ, ವಿವಾಹ ವಿಚ್ಛೇದನೆಗಿಂತ ದೇವರಿಗೆ ಅಪ್ರಿಯಕರವಾದುದೂ ಯಾವುದೂ ಇಲ್ಲ."

ದುರ್ವರ್ತನೆಗೆ ಪ್ರೇರೇಪಣೆಯುಂಟಾಗದಂತೆಯೂ ಅದರ ಪರಿಣಾಮಗಳಿಂದ ಸ್ತ್ರೀಯರು ಸುರಕ್ಷಿತರಾಗುವಂತೆಯೂ ಮಾಡಲಿಕ್ಕಾಗಿ ಮುಸ್ಲಿಮ್ ಸ್ತ್ರೀಯರು ಪರದೆಯನ್ನು ಧರಿಸಬೇಕೆಂದು ಆಜ್ಞಾಪಿಸಲಾಗಿದೆ. ಪರದೆ ಶರೀರದ ಎಲ್ಲಾ ಭಾಗಗಳನ್ನು ಮುಚ್ಚಬೇಕಾಗಿದೆ. ಆದರೆ ಕಣ್ಣು ಮತ್ತು ಪಾದಗಳನ್ನು ಅವುಗಳ ಸ್ವತಂತ್ರ ಚಲನೆ ಅತ್ಯಾವಶ್ಯವಾದ ಕಾರಣ ಪರದೆಯಿಂದ ಮುಚ್ಚದಿರಲು ಅನುಮತಿಯಿದೆ. ಈ ಆಜ್ಞೆ ಜಾರಿಗೆ ಬಂದುದು ಸ್ತ್ರೀಯರ ಕುರಿತು ಇಸ್ಲಾಮ್ ಧರ್ಮಕ್ಕೆ ಯಾವುದೇ ಆದರವಿಲ್ಲದ ಕಾರಣದಿಂದಲ್ಲ. ಇದು ಸ್ತ್ರೀಯರ ಸ್ವತಂತ್ರ ಚಿಂತನೆಯನ್ನು ನಿರೋಧಿಸುವುದೂ ಇಲ್ಲ. ಈ ಆಜ್ಞೆ ಸ್ತ್ರೀಯರನ್ನು ಪುರುಷರ ಆಶೆಗಳಿಂದ ಸುರಕ್ಷಿತವಾಗಿಡುತ್ತದೆ. ಶತಮಾನಗಳಷ್ಟು ಹಳೆಯದಾದ ಸ್ತ್ರೀಯರ ಒತ್ತಟ್ಟಿನ ಜೀವಿತ ಪದ್ಧತಿಯ ಪರಿಣಾಮದಿಂದುಂಟಾದ ನೈತಿಕತೆಯು ಪೌರ್ವಾತ್ಯ ರಾಜ್ಯಗಳಲ್ಲಿ, ವಿದೇಶೀಯರ ಪ್ರಭಾವಕ್ಕೊಳಗಾದ ಕೆಲವೇ ಸ್ಥಳಗಳ ಹೊರತಾಗಿ ಬಾಕಿ ಎಲ್ಲಾ ಸ್ಥಳಗಳಲ್ಲಿ, ವೇಶ್ಯಾ ಪದ್ಧತಿಯನ್ನು ಸಂಪೂರ್ಣವಾಗಿ ಇಲ್ಲವಾಗಿಸಿತು. ಇಂತಹ ನೈತಿಕ ಮತ್ತು ಸಾಮಾಜಿಕ ಲಾಭಗಳನ್ನು ಯಾರೂ ಅಲ್ಲಗಳೆಯಲು ಸಾಧ್ಯವಿಲ್ಲವಾದುದರಿಂದ ಪರದಾ ಪದ್ಧತಿ ಮತ್ತು ಸ್ತ್ರೀಯರು ಸಾರ್ವಜನಿಕ ಜೀವನದಲ್ಲಿ ಪ್ರವೇಶ ಮಾಡದಿರುವಿಕೆಯಿಂದ ಒಂದು ನಿಶ್ಚಿತ ದೃಷ್ಟಿಕೋನದಿಂದ ಇದೊಂದು ನಷ್ಟವೆಂದು ಪರಿಗಣಿಸಬಹುದಾದರೂ ಇನ್ನೊಂದು ದೃಷ್ಟಿಕೋನದಿಂದ ನೋಡುವುದಾದರೆ ಇವುಗಳು ಮುಸ್ಲಿಮ್ ಸಮಾಜಕ್ಕೆ ಉಂಟುಮಾಡಿದ ಲಾಭ ಎಣಿಸಲಾಗದಷ್ಟಾಗಿವೆ ಎಂದು ಕಂಡುಬರುವುದು.

ಸ್ತ್ರೀಯರ ಸ್ವಾತಂತ್ರ್ಯಕ್ಕೆ ಪ್ರಥಮವಾಗಿ ಆವಶ್ಯವಿರುವ ವಿದ್ಯಾಭ್ಯಾಸ ಎಲ್ಲರಿಗೆ ದೊರೆಯದಿರುವ ದೇಶಗಳಲ್ಲಿ ಸ್ತ್ರೀಯರು ಬಹಿರಂಗ ಸಾಮೂಹಿಕ ಜೀವನದಿಂದ ದೂರ ಸರಿದಿರುವುದರ ಕುರಿತು ಹೇಳಲಿಕ್ಕಿದೆ – ನವ ವಿಚಾರಧಾರೆಗಳು ಮತ್ತು ಪಾಶ್ಚಿಮಾತ್ಯ ಪ್ರಭಾವದ ಪ್ರಸರಣೆ ಎಷ್ಟೇ ಹೆಚ್ಚಾಗಿದ್ದರೂ ಸಹ. ಆದರೆ ಹೆಚ್ಚಿನ ಪೌರ್ವಾತ್ಯ ದೇಶಗಳಲ್ಲಿ ಇಂದಿರುವ ಪರಿಸ್ಥಿತಿ ಇದೇ ಸ್ಥಿತಿಯಲ್ಲಿ ಬಿಗುವಾಗಿ ಮುಂದುವರಿಯುವುದೆಂದು ಇದರ ಅರ್ಥವಲ್ಲ, ಈ ರೀತಿಯ ಕಲ್ಪನೆ ಇಸ್ಲಾಮ್ ಧರ್ಮದ ಮೂಲ ತತ್ವಗಳಿಗೆ ವಿರುದ್ಧವಾಗಿದೆ. ಇಸ್ಲಾಮ್ ಎಲ್ಲಾ ಕಾಲಗಳಿಗೂ ಎಲ್ಲಾ ಜನಾಂಗಗಳಿಗೂ ಅನುಸರಣೆಯೋಗ್ಯವಾದ ಒಂದು ಧರ್ಮವಾಗಿದೆ.

ಪವಿತ್ರ ಖುರ್‌ಆನಿನ ಈ ಕೆಳಗಿನ ವಚನಗಳನ್ನು ಪರಾಂಬರಿಸಿರಿ:

ಓ ಪ್ರವಾದಿ, ನಿನ್ನ ಪತ್ನಿಯರೊಡನೆಯೂ ನಿನ್ನ ಹೆಮ್ಮಕ್ಕಳೊಡನೆಯೂ ಸತ್ಯ ವಿಶ್ವಾಸಿಗಳ ಸ್ತ್ರೀಯರೊಡನೆಯೂ ಹೇಳು: ಮೇಲ್ಹೊದಿಕೆಯ ಬಟ್ಟೆಗಳನ್ನು ಅವರು ತಮ್ಮ ಮೈಮೇಲೆ ಎಳೆದುಕೊಳ್ಳಲಿ. ಅದು ಅವರು ಗುರುತಿಸಲ್ಪಡಲಿಕ್ಕಾಗಿ ಮತ್ತು ಯಾವುದೇ ರೀತಿಯ ಕಿರುಕುಳಕ್ಕೆ ಗುರಿಯಾಗದಿರಲಿಕ್ಕಾಗಿದೆ. ಅಲ್ಲಾಹನು ಅತ್ಯಂತ ಕ್ಷಮಿಸುವವನೂ ದಯಾಳುವೂ ಆಗಿದ್ದಾನೆ. (33 : 60).

“(ಓ ಪ್ರವಾದಿ) ಎಲ್ಲಾ ಸತ್ಯ ವಿಶ್ವಾಸಿನಿಯರೊಡನೆ ಹೇಳು: ತಮ್ಮ ದೃಷ್ಟಿಗಳನ್ನವರು ಅಧೋಮುಖವಾಗಿರಿಸಲಿ, ತಮ್ಮ ಗುಹ್ಯಾಂಗಗಳನ್ನವರು ಸುರಕ್ಷಿತವಾಗಿಡಲಿ, ತನ್ನಿಂದ ತಾನೇ ಬಹಿರಂಗವಾಗುವುದರ ಹೊರತು ಸೌಂದರ್ಯವನ್ನು ಅವರು ಸ್ವತಃ ಪ್ರದರ್ಶಿಸದಿರಲಿ, ಅವರು ತಮ್ಮ ತಲೆ ಹೊದಿಕೆಯನ್ನು ತಮ್ಮ ಎದೆಗಳ ಮೇಲೆ ಎಳೆದುಕೊಳ್ಳಲಿ. (24:32)

ಪವಿತ್ರ ಖುರ್‌ಆನಿನ ಮೇಲಿನ ವಚನಗಳನ್ನು ಪೈಗಂಬರರ ನಡೆವಳಿಕೆಗಳ ಆಧಾರದ ಮೇಲೆ ವ್ಯಾಖ್ಯಾನಿಸಬೇಕಾಗಿದೆ. ಪೈಗಂಬರರು ತನ್ನ ಕುಟುಂಬದ ಸ್ತ್ರೀಯರಿಗೆ ಗಮನಾರ್ಹವಾದ ಸ್ವಾತಂತ್ರ್ಯವನ್ನು ನೀಡಿದ್ದರು. ಇದನ್ನು ನಾವು ಮನವರಿಕೆ ಮಾಡದಿದ್ದರೆ ಪೈಗಂಬರರ ಕಾಲದಲ್ಲಿ ಮತ್ತು ಅನಂತರ ಸ್ತ್ರೀಯರು ರಾಜಕೀಯ ಮತ್ತು ಯುದ್ಧ ಪರಿಸ್ಥಿತಿಗಳಲ್ಲಿ ವಹಿಸಿದ ಪಾತ್ರಗಳನ್ನು ನಾವು ವಿವರಿಸಲು ಅಸಮರ್ಥರಾಗುತ್ತೇವೆ. ಉದಾಹರಣೆಗೆ ಪೈಗಂಬರರ ಪತ್ನಿ ಆಯಿಷಾ ಅಲಿಯವರೆದುರು ಹೋರಾಡಿದರು. (“ಒಂಟೆಗಳ ಯುದ್ಧ” ಎಂದು ಹೆಸರಿಸಲಾದ ಒಂದು ಯುದ್ಧದಲ್ಲಿ ಆಯಿಷಾ ಸ್ವತಃ ಯುದ್ಧರಂಗದಲ್ಲಿ ಸೈನಿಕರನ್ನು ಹುರಿದುಂಬಿಸುತ್ತಿದ್ದು ಸ್ವತಃ ಬಹಳ ಅಪಾಯಕ್ಕೆ ತನ್ನನ್ನು ಗುರಿಮಾಡಿದ್ದರು). ಫಾತಿಮ ಬಿನ್ತ್ ಖೈಸಲ್ ಫಿಹ್‌ರಿಯ ಎಂಬ ಸ್ತ್ರೀ ಉಸ್ಮಾನ್ ಖಲಾಫತ್ ಸ್ಥಾನಕ್ಕೆ ಚುನಾಯಿತರಾಗುವಾಗ ವಹಿಸಿದ ಪಾತ್ರ ಮತ್ತು ಇತರ ಅನೇಕ ಸಂದರ್ಭಗಳಲ್ಲಿ ಇಸ್ಲಾಮಿನ ಆರಂಭದ ಕಾಲದಲ್ಲಿ ಸ್ತ್ರೀಯರು ವಹಿಸಿದ ಪಾತ್ರಗಳು ಸ್ತ್ರೀಯರಿಗೆ ಇಸ್ಲಾಮ್ ಧರ್ಮದಲ್ಲಿರುವ ಸ್ವಾತಂತ್ರ್ಯಕ್ಕೆ ಉದಾಹರಣೆಗಳಾಗಿವೆ.

ಯುರೋಪಿನಲ್ಲಿ ಸಾಮಾಜಿಕವಾಗಿ ನೋಡಿದರೆ ಸ್ತ್ರೀಯರು ಉನ್ನತವಾದ ಸ್ಥಿತಿಯನ್ನು ಪಡೆದಿದ್ದರೂ ಕೆಲವೇ ವರ್ಷಗಳ ಮುನ್ನ ಅವಳ ಸ್ಥಿತಿ ಕಾನೂನಿನ ದೃಷ್ಟಿಯಲ್ಲಿ ಇಸ್ಲಾಮಿಕ ಲೋಕದಲ್ಲಿರುವ ಮುಸ್ಲಿಮ್ ಸ್ತ್ರೀಯರಿಗಿಂತ ನಿಕೃಷ್ಟವಾಗಿತ್ತಲ್ಲದೆ ಈಗಲೂ ಕೆಲವು ದೇಶಗಳಲ್ಲಿ ಇದೇ ಸ್ಥಿತಿ ಮುಂದುವರಿಯುತ್ತಾ ಇದೆ.* ಮುಸ್ಲಿಮ್ ಸ್ತ್ರೀಯರಿಗೆ ಸ್ವಲ್ಪ ಕಮ್ಮಿ ಪ್ರಮಾಣದಲ್ಲಿಯಾದರೂ ತಮ್ಮ ಸಹೋದರರೊಂದಿಗೆ ವಾರೀಸು ಹಕ್ಕು ಇದೆ. ಆಕೆಯನ್ನು ತನ್ನ ಇಷ್ಟಕ್ಕೆ ವಿರುದ್ಧವಾಗಿ ವಿವಾಹ ಮಾಡಿ ಕೊಡಲು ಸಾಧ್ಯವಿಲ್ಲ. ಆಕೆಯನ್ನು ಆಕೆಯ ಗಂಡ ಉಪದ್ರವಿಸಲು ಸಾಧ್ಯವಿಲ್ಲ. ಆಕೆಗೆ ಮಹರ್ ಎಂಬ ವಿವಾಹಧನ ಗಂಡ ನೀಡಬೇಕಲ್ಲದೆ ಆಕೆ ಜನ್ಮತಃ ಐಶ್ವರ್ಯವಂತೆಯಾಗಿದ್ದರೂ ಸಹ ಖರ್ಚಿಗೆ ಆಕೆಯ ಗಂಡ ನೀಡಬೇಕಾಗಿದೆ. ಆಕೆ ತನ್ನ ಸ್ವಂತ ಸ್ವತ್ತಿನ ಮೇಲ್ವಿಚಾರಣೆಯನ್ನು ಮಾಡಲು ಇತರ ಕಾನೂನು ಸಂಬಂಧವಾದ ಅಡ್ಡಿಗಳಿಲ್ಲದಿದ್ದರೆ ಸ್ವತಂತ್ರಳಾಗಿದ್ದಾಳೆ.

ಜನರನ್ನು ಗುಲಾಮರನ್ನಾಗಿ ಮಾಡಿ ಅವರಿಂದ ಜೀತದ ದುಡಿಮೆ ಮಾಡಿಸುವ ಸಂಪ್ರದಾಯ ಮಾನವ ಸಮಾಜದ ಆರಂಭದಿಂದ ಇಂದಿನ ವರೆಗೆ ಒಂದಲ್ಲ ಒಂದು ರೀತಿಯಲ್ಲಿ ಜಾರಿಯಲ್ಲಿದೆ. ಇದನ್ನು ಇಸ್ಲಾಮಿನ ದೈವಿಕ ನಿಯಮ ಸಂಪೂರ್ಣವಾಗಿ ನಿಷಿದ್ಧಗೊಳಿಸಿಲ್ಲ. ಅಮುಸ್ಲಿಮರು ಇದನ್ನು ಇಸ್ಲಾಮನ್ನು ಆಕ್ಷೇಪಿಸಲು ಒಂದು ಪ್ರಧಾನ ಆರೋಪವನ್ನಾಗಿ ಮಾಡಿರುವರು.

ಪ್ರಥಮವಾಗಿ ಹೇಳುವುದಾದರೆ ಮುಸ್ಲಿಮರು ಅಲೆಮಾರಿಗಳಾಗಿದ್ದರೂ ಭೂಮಿಯಲ್ಲೊಂದೆಡೆಯಲ್ಲಿ ಸ್ಥಿರವಾಸ ಮಾಡುವವರಾಗಿದ್ದರೂ ಅವರ ಜೊತೆಯಲ್ಲಿರುವ ಗುಲಾಮರ ಸ್ಥಿತಿ ಯುರೋಪಿನ ಗುಲಾಮರ ಸ್ಥಿತಿಗಿಂತ ಎಷ್ಟೋ ಹೆಚ್ಚು ಸಹನೀಯವಾಗಿತ್ತು (ಪೌರ್ವಾತ್ಯ ದೇಶಗಳನ್ನು ಸಂದರ್ಶಿಸಿದ ಯುರೋಪಿಯನ್ ಸಂಚಾರಿಗಳ ಬರೆಹಗಳು ಇದಕ್ಕೆ ತಕ್ಕ ಸಾಕ್ಷ್ಯಗಳಾಗಿವೆ). ಪೌರ್ವಾತ್ಯ ದೇಶಗಳ ಗುಲಾಮಗಿರಿಯನ್ನು ಒಂದು ನೂರು ವರ್ಷಗಳ ಹಿಂದೆ ಅಮೇರಿಕದ ಸಂಯುಕ್ತ ಸಂಸ್ಥಾನಗಳಲ್ಲಿದ್ದ ಗುಲಾಮಗಿರಿಗೆ ಹೋಲಿಸುವುದು ಅನ್ಯಾಯಕರವಾಗಿದೆ. ಈ ಕೆಳಗಿನ ಪೈಗಂಬರ್ ವಚನಗಳಲ್ಲಿ ಮಾನವೀಯ ಅನುಕಂಪ ಎಷ್ಟು ತುಂಬಿದೆಯೆಂದು ನೋಡಿರಿ:

---

* ಫ್ರೆಂಚ್ ವಿಪ್ಲವದ ನಂತರ ಮಾತ್ರವೇ ಸ್ವತಂತ್ರ ಚಿಂತಕರ (Free thinkers) ಪರಿಶ್ರಮದಿಂದ ಯುರೋಪಿನಲ್ಲಿ ಸ್ತ್ರೀ ಸಂತಾನಗಳಿಗೆ ವಾರೀಸು ಹಕ್ಕು ಲಭಿಸಿತು. ಇಂಗ್ಲೆಂಡಿನಲ್ಲಿ 1882ರಲ್ಲಿ Married Women's Property Act ಜಾರಿಗೆ ಬರುವ ತನಕ ವಿವಾಹಿತ ಸ್ತ್ರೀಯ ಸೊತ್ತು ಗಂಡನ ಸಂಪೂರ್ಣ ನಿಯಂತ್ರಣದಲ್ಲಿತ್ತು. (ಬರ್ಟ್ರಂಡ್ ರಸೆಲ್ ಬರೆದ Marriage and Morals. ಪುಟ 42, 54 ನೋಡಿರಿ– Bantam Books. New York). 1919ರಲ್ಲಿ ಮಾತ್ರವೇ ಇಟೆಲಿಯಲ್ಲಿ ಸ್ತ್ರೀಗೆ ನಿಯಮ ಪ್ರಕಾರ ವಾರೀಸು ಹಕ್ಕು ಅಂಗೀಕರಿಸಲ್ಪಟ್ಟಿತು.

"ಆತನನ್ನು 'ನನ್ನ ಗುಲಾಮ' ಎಂದು ಕರೆಯಬೇಡ 'ನನ್ನ ಯುವಕ' ಎಂದು ಕರೆ. ನಿನ್ನ ದಾಸಿಯನ್ನು 'ಹೆಣ್ಣೇ' ಎಂದೆನ್ನಬೇಡ 'ನನ್ನ ಮಗಳೇ' ಎಂದು ಕರೆ". ಈ ಸಂಗತಿಗಳನ್ನು ನಾವು ಚಾರಿತ್ರಿಕ ದೃಷ್ಟಿಕೋನದಿಂದ ನೋಡಿದರೆ, ನಾವು ಇಲ್ಲಿಯೂ, ದೇವರ ಪ್ರವಾದಿ ಈ ವಿಷಯದಲ್ಲಿ ಮಾಡಿದ ಆಶ್ಚರ್ಯಕರವಾದ ಸುಧಾರಣೆಯನ್ನು ಕಾಣಬಹುದು: ಪೈಗಂಬರರು ಗುಲಾಮಗಿರಿ ಸಂಪ್ರದಾಯವನ್ನು ಬಹಳ ನಿಯಂತ್ರಣಗೊಳಪಡಿಸಿದರು. (ಇಸ್ಲಾಮಿಗಿಂತ ಮುನ್ನ ಒಬ್ಬ ಸ್ವತಂತ್ರ ಮನುಷ್ಯ ತಾನು ಪಡೆದ ಸಾಲವನ್ನು ಹಿಂತಿರುಗಿಸಲು ಅಸಮರ್ಥನಾದರೆ ತನ್ನ ಸ್ವಾತಂತ್ರ್ಯ ಕಳಕೊಳ್ಳಬೇಕಾಗಿತ್ತು. ಆದರೆ ಒಬ್ಬ ಮುಸ್ಲಿಮ್ ಇನ್ನೊಬ್ಬ ಮುಸ್ಲಿಮನನ್ನು ದಾಸನನ್ನಾಗಿ ಮಾಡಲು ಸಾಧ್ಯವಿರಲಿಲ್ಲ.) ಪೈಗಂಬರರು ರಚನಾತ್ಮಕ ಮತ್ತು ಪ್ರತಿಷೇಧಕ ನಿಬಂಧನೆಗಳನ್ನು ಜಾರಿಗೆ ತಂದು ಸತ್ಯವಿಶ್ವಾಸಿಗಳು ಎಲ್ಲಾ ಗುಲಾಮರನ್ನು ಕ್ರಮೇಣ ಬಂಧಮುಕ್ತರನ್ನಾಗಿ ಮಾಡಲು ಒತ್ತಾಯಿಸಿದರು. ಖಂಡಿತವಾಗಿಯೂ ಈ ಎಚ್ಚರಿಕೆಗಳ ಉತ್ತಮ ಫಲದಾಯಕವಾದ ಪ್ರಭಾವಗಳಿಂದಾಗಿ ಗುಲಾಮರ ಬಂಧವಿಮೋಚನೆ ಸುಲಭಸಾಧ್ಯವಾಗುತ್ತಿತ್ತು; ಅರಬಿ ಮತ್ತು ಅರಬಿಗಳಲ್ಲದ ಜನಾಂಗಗಳಲ್ಲಿ ಗುಲಾಮಗಿರಿಯ ಕುರಿತು ಬಲವತ್ತಾದ ಅನುಕೂಲ ಅಭಿಪ್ರಾಯ ಇಲ್ಲದಿರುತ್ತಿದ್ದರೆ ಮತ್ತು ಸೋಲಿಸಲ್ಪಟ್ಟ ಮತ್ತು ಸೋಲಿಸಲ್ಪಡುವಂತಾದ ಜನಾಂಗಗಳ ಬಗ್ಗೆ ಅವರಿಗೆ ಈ ರೀತಿಯ ಅಭಿಪ್ರಾಯ ಇದ್ದರೆ ಗುಲಾಮಗಿರಿಯ ಅಂತ್ಯ ಸುಗಮವಾಗುತ್ತಿತ್ತು. ಗುಲಾಮರ ಬಂಧವಿಮೋಚನೆ ಕೆಲವು ಜನರ ವಿಕೃತ ಮನೋಭಾವಗಳಿಂದಾಗಿಯೂ ತಡೆಯಲ್ಪಟ್ಟಿತು. ಅವರು ದೇವರ ವಚನಗಳನ್ನು ತಪ್ಪಾಗಿ ವ್ಯಾಖ್ಯಾನಿಸಿ ಆ ವಚನಗಳು ಗುಲಾಮಗಿರಿಯ ಸಂಪ್ರದಾಯವನ್ನು ಜೀವಂತವಿರಿಸುತ್ತದೆಯೆಂದು ವಾದಿಸಿದರು.

ಪವಿತ್ರ ಖುರ್‌ಆನಿನಲ್ಲಿ ಗುಲಾಮರ ಬಂಧ ವಿಮೋಚನೆ ಹಲವಾರು ಪಾಪಗಳ ಪರಿಹಾರ ಮಾರ್ಗವಾಗಿ ಸೂಚಿಸಲಾಗಿದೆ. (ಪವಿತ್ರ ಖುರ್‌ಆನ್ 4:93; 5:90; 24:34; 58:4; 90:14 ನೋಡಿರಿ). ಪೈಗಂಬರರ ವಚನಗಳಲ್ಲಿ ಗುಲಾಮರ ಬಂಧ ವಿಮೋಚನೆಯನ್ನು ದೇವರಿಗೆ ಅತ್ಯಂತ ಪ್ರಿಯವಾದ ಕೃತ್ಯವೆಂದು ಒತ್ತಿ ಹೇಳಲಾಗಿದೆ. ಉದಾಹರಣೆಗೆ ಈ ವಚನ ನೋಡಿರಿ: "ಒಬ್ಬ ಸತ್ಯ ವಿಶ್ವಾಸಿಯಾದ ಗುಲಾಮನ ಬಂಧ ವಿಮೋಚನೆ ಮಾಡುವವನು ಅಂತಿಮ ತೀರ್ಮಾನದ ದಿನ ನರಕದಿಂದ ವಿಮೋಚನೆ ಪಡೆಯುವನು."

ಪವಿತ್ರ ಖುರ್‌ಆನ್ ಮತ್ತು ಪೈಗಂಬರರ ವಚನಗಳಿಂದ ಮಾರ್ಗದರ್ಶನ ಪಡೆದ ಇಸ್ಲಾಮಿಕ ಕಾನೂನುಗಳ ವಿವಿಧ ಸಿದ್ಧಾಂತಗಾರರು ಗುಲಾಮರ ಬಂಧ ವಿಮೋಚನೆಯನ್ನು ಪ್ರೋತ್ಸಾಹಿಸುವ ನಿರ್ಬಂಧಕರವೂ ಶಕ್ತಿಯುತವೂ ಆದ ನಿಯಮಗಳನ್ನು ಜಾರಿಗೆ ತಂದರು. ನಾವು ಆ ನಿಯಮಗಳನ್ನೆಲ್ಲಾ ಇಲ್ಲಿ ಪಟ್ಟಿ ಮಾಡಲಾರೆವು. ನಾವು ಇಲ್ಲಿ ಕೇವಲ ಎರಡೇ ಎರಡು ನಿಯಮಗಳನ್ನು ಸೂಚಿಸುತ್ತೇವೆ. ಒಬ್ಬ ಗುಲಾಮನ ಬಂಧ ವಿಮೋಚನೆಯಿಂದಾಗುವ ನಷ್ಟವನ್ನು ಭರಿಸಲು ಆತನ ಯಜಮಾನನಿಗೆ ಸಾಧ್ಯವಿಲ್ಲದಿದ್ದರೆ ಅಥವಾ ಆತನಿಗೆ ಆ ನಷ್ಟವನ್ನು ಅನುಭವಿಸಲು ಇಷ್ಟವಿಲ್ಲದಿದ್ದರೆ, ಆ ಸಂದರ್ಭದಲ್ಲಿ ಒಬ್ಬ ಗುಲಾಮನು ತನ್ನ ಸ್ವಯಂ ಪ್ರಯತ್ನದಿಂದ ಬಂಧವಿಮೋಚನೆಯನ್ನು ಯಾವ ರೀತಿ ಪಡೆಯಬಹುದೆಂದು ಈ ನಿಯಮಗಳು ಸೂಚಿಸುತ್ತವೆ. ದಾಸನು ತನ್ನ ಯಜಮಾನನಿಂದ ಒಂದು ಕರಾರು ಪತ್ರವನ್ನು ಪಡೆಯಬಹುದು. ಆ ಪತ್ರದಲ್ಲಿ ಆತನ ಬಂಧ ವಿಮೋಚನೆಯಾದ ಕೂಡಲೆ ಇಷ್ಟು ಕಾಲಾವಧಿಯಲ್ಲಿ ಇಂತಿಷ್ಟು ಪರಿಹಾರ ಧನವನ್ನು ಸಂಪಾದಿಸಿ ನೀಡಬೇಕಾಗಿ ಬರೆಯಬಹುದು. ಅಥವಾ ಆತನು ತನ್ನ ಒಡೆಯನೊಡನೆ ಪರಿಹಾರ ಧನಕ್ಕಾಗಿ ದುಡಿಯಲು ಅನುಮತಿಯನ್ನು ಕೇಳಬಹುದು. (ಈ ಅನುಮತಿ ನಿಶ್ಚಯವಾಗಿಯೂ ಬಹಳ ಮಹತ್ವದ್ದಾಗಿದೆ.) ಪವಿತ್ರ ಖುರ್‌ಆನ್ ಈ ರೀತಿ ಹೇಳುತ್ತದೆ: "ನಿಮ್ಮ ದಾಸರ ಪೈಕಿಯಲ್ಲಿ ಯಾರಾದರೂ ಬಂಧವಿಮೋಚನೆಯ ಕರಾರನ್ನು ಅವಶ್ಯಪಟ್ಟರೆ, ಅದನ್ನು ಬರೆದುಕೊಡಿರಿ" (24 : 34)

ಇನ್ನೊಂದು ಸಂಗತಿಯೂ ಗಮನಾರ್ಹವಾಗಿದೆ : ಮುಸ್ಲಿಮ್ ರಾಜ್ಯಾಡಳಿತೆ ಅದಕ್ಕೆ ದೊರಕುವ ಝಕಾತ್ ತೆರಿಗೆಗಳಿಂದ ಅರ್ಹರಾದ ದಾಸರಿಗೆ (ಗುಲಾಮರಿಗೆ) ಬಂಧ ವಿಮೋಚನೆಯನ್ನು ದೊರಕಿಸಿ ಕೊಡುವ ಜವಾಬ್ದಾರಿಯನ್ನು ವಹಿಸಿದ್ದಿತು !

ಇಸ್ಲಾಮ್ ಧರ್ಮ ಮಾನವರಲ್ಲಿ ಯಾವುದೇ ಜನಾಂಗ ವ್ಯತ್ಯಾಸವನ್ನಾಗಲೀ ವರ್ಣ ವ್ಯತ್ಯಾಸವನ್ನಾ

ಗಲೀ ಮಾಡಲಿಲ್ಲ. ಅದು ಬೆಳ್ಳಗಿರುವವರನ್ನು ಕಪ್ಪಗಿರುವವರನ್ನೂ, ಅಲೆಮಾರಿ ಜನರನ್ನೂ ಸ್ಥಿರವಾಸಿಗಳಾದ ಕೃಷಿಕರನ್ನೂ ರಾಜರನ್ನೂ ಪ್ರಜೆಗಳನ್ನೂ ಸಮಾನವಾಗಿ ಕಂಡಿತು. ಇದು ಕೇವಲ ಸಿದ್ಧಾಂತ ರೂಪದಲ್ಲಿ ಮಾತ್ರವಲ್ಲ, ಆಚಾರದಲ್ಲಿಯೂ ಇದೇ ರೀತಿ ಯಾವುದೇ ವ್ಯತ್ಯಾಸವಿರುವುದಿಲ್ಲ. (ಯಥಾರ್ಥ ಸ್ಥಿತಿಯೇನೆಂದರೆ ಡೇರೆಗಳಲ್ಲೂ, ಅರಮನೆಗಳಲ್ಲೂ ಮಸೀದಿಗಳಲ್ಲೂ, ಬಜಾರುಗಳಲ್ಲೂ ಎಲ್ಲಾ ವರ್ಣದ ಎಲ್ಲಾ ವರ್ಗದ ಜನರು ಒಟ್ಟಿಗೆ ಸ್ಥಾನ ವ್ಯತ್ಯಾಸವಿಲ್ಲದೆ, ಯಾವುದೇ ಸಂಕೋಚವಿಲ್ಲದೆ, ಯಾವುದೇ ನೈಚ್ಯ ಭಾವನೆಯಿಲ್ಲದೆ, ಯಾವುದೇ ಅಹಂಭಾವದಿಂದಿರದೆ ಒಟ್ಟಿಗೆ ಸೇರುತ್ತಾರೆ). ಇಂತಹ ಮನೋವೃತ್ತಿಯವರು ಗುಲಾಮರ ಜೊತೆಯಲ್ಲಿ ಯಾವುದೇ ರೀತಿಯಲ್ಲಿ ಅಪಮಾನಕರವಾಗಿ ವರ್ತಿಸುತ್ತಿರಲಿಲ್ಲ. ಇಸ್ಲಾಮ್ ನಿರ್ಬಂಧಿಸಿರುವ ಸಾಮಾಜಿಕ ಸಮಾನತೆಯ ಕುರಿತು ಚರ್ಚಿಸುವಾಗ ಜಬಲೆ ರಾಜನ (King Jabale) ಸುಂದರ ವೃತ್ತಾಂತ ಇಲ್ಲಿ ಬರೆಯುವುದು ಸೂಕ್ತವಾಗುವುದಿಲ್ಲವೆ ? ಜಬಲೆ ರಾಜ ಇಸ್ಲಾಮ್ ಧರ್ಮ ಸ್ವೀಕರಿಸಿ ಬಹಳ ಆಡಂಭರದಿಂದ ಮಕ್ಕಕ್ಕೆ ಹೋದನು. ಆತ ಕಾಬಾ ಮಂದಿರದ ಸುತ್ತಲೂ ನಿಶ್ಚಿತ ಪ್ರದಕ್ಷಿಣೆಗಳನ್ನು ಮಾಡುತ್ತಿರುವಾಗ ಆತನ ಬೆಲೆ ಬಾಳುವ ಉಡುಗೆಯನ್ನು ಆಕಸ್ಮಿಕವಾಗಿ ತುಳಿದ ಒಬ್ಬ ಹಳ್ಳಿಗನಾದ ಅರಬಿಯನ್ನು ಆತನು ಹೊಡೆದನು. ಇದರ ಕುರಿತು ಖಲೀಫ ಉಮರ್ ಅವರ ಬಳಿಗೆ ದೂರು ಹೋದಾಗ ಅವರು ಈ ರೀತಿ ವಿಧಿಸಿದರು: ಇಸ್ಲಾಮ್ ಧರ್ಮದಲ್ಲಿ ಎಲ್ಲಾ ಜನರು ಸಮಾನರಾದ ಕಾರಣ ಜಬಲೆ ರಾಜನು ಹಳ್ಳಿಗನಾದ ಅರಬಿಯಿಂದ ಸಮಾನ ಪ್ರಹಾರವನ್ನು ಪಡೆಯಬೇಕು. ಜಬಲೆ ರಾಜನು ಈ ತೀರ್ಮಾನವನ್ನು ಸ್ವೀಕರಿಸಲಿಲ್ಲ. ಅದೇ ರಾತ್ರಿ ಆತನು ತನ್ನ ಐನೂರು ಸೈನಿಕರೊಡನೆ ಬೈಝಾಂಟಿಯಂ (ಕಾನ್ಸ್ಟೆಂಟಿನೋಪ್‌ಲ್–ಇಂದಿನ ಇಸ್ತಾಂಬುಲ್)ಗೆ ಹೋಗಿ ಅಲ್ಲಿ ಕ್ರೈಸ್ತ ಧರ್ಮಾವಲಂಬಿಯಾದನು. ಹಲವಾರು ವರ್ಷಗಳ ನಂತರ ತನ್ನ ವೈಭವ ಮತ್ತು ಐಶ್ವರ್ಯಗಳ ಮಧ್ಯೆ ಇಸ್ಲಾಮ್ ಧರ್ಮದ ನೆನಪು ಆತನಿಗೆ ಕಣ್ಣೀರನ್ನು ಬರಿಸುತ್ತಿತ್ತು.

ಹಲವಾರು ಗುಲಾಮರಿಗೆ ಉನ್ನತವಾದ ಮತ್ತು ಆದರಣೀಯ ಸ್ಥಾನ ದೊರೆತುದನ್ನು ಚರಿತ್ರೆ ವಿವರಿಸುತ್ತದೆ. ಗುಲಾಮರ ಪೈಕಿ ಬಿಲಾಲ್ ಎಂಬವರು ಅವರ ಅತ್ಯಂತ ಕರ್ಣಾನಂದಕರವಾದ ಸ್ವರದ ಕಾರಣದಿಂದ ಇಸ್ಲಾಮಿನ ಪ್ರಥಮ ಪ್ರಾರ್ಥನೆಯ ಕರೆಗಾರ (ಮುಅಝ್ಝಿನ್) ಆಗಿ ನೇಮಿಸಲ್ಪಟ್ಟರು. ಇತರ ಹಲವು ಬಂಧವಿಮೋಚಿತದಾಸರು ಉನ್ನತವಾದ ಸರಕಾರಿ ಹುದ್ದೆಗಳನ್ನು ಗಳಿಸಿದರಲ್ಲದೆ ಖಲೀಫರ ಸ್ಥಾನಗಳಿಸಲೂ ಸಮರ್ಥರಾದರು. ಬೇರೆ ವಿಷಯಕ್ಕೆ ಪ್ರವೇಶಿಸುವ ಮೊದಲು ಇಲ್ಲಿ ನಾವೊಂದು ಪ್ರಧಾನ ಸಂಗತಿಯನ್ನು ಜ್ಞಾಪಿಸುವುದು ಅತ್ಯಾವಶ್ಯಕವಾದೀತು: ಮುಹಮ್ಮದ್ ಪೈಗಂಬರರು ಗುಲಾಮರ ಅಂಗವಿಕಲನವನ್ನು ಕಟ್ಟುನಿಟ್ಟಾಗಿ ವಿರೋಧಿಸಿದ್ದರು. ಅರಮನೆಯ ಹೆಂಗಸರ ವಿಭಾಗವನ್ನು ಗುಲಾಮ ಹಿಜಡಾಗಳು (ಷಂಡರು – eunuchs) ಕಾವಲುಗಾಯುವ ಸಂಪ್ರದಾಯ ಉಮಾವೀ ಖಲೀಫರಿಂದ ಆರಂಭಿಸಲ್ಪಟ್ಟಿತು.

ದಂಡನಾ ಕಾನೂನಿನ ವಿಷಯವಾಗಿ ಹೇಳುವುದಾದರೆ ಇಸ್ಲಾಮಿನ ದೈವಿಕ ಕಾನೂನು ಹೊಸದಂಡನಾ ನಿಯಮಗಳನ್ನು ರೂಪಿಸಲಿಲ್ಲ. ಮುಹಮ್ಮದ್ ಪೈಗಂಬರರ ಕಾಲದಲ್ಲಿ ಈ ಸಂಬಂಧವಾಗಿ ಹೆಚ್ಚಿನ ಬದಲಾವಣೆಯನ್ನುಂಟುಮಾಡಲು ಸಾಧ್ಯವಿರಲಿಲ್ಲ. ಮತ್ತು ಆಯಾಯ ಜನಾಂಗಳಿಗೆ ಮತ್ತು ಕಾಲಕ್ಕೆ ಯೋಗ್ಯವಾದ ನಿಯಮಗಳನ್ನು ರೂಪಿಸಲು ಜನರಿಗೆ ಪೂರ್ಣ ಸ್ವಾತಂತ್ರ್ಯ ನೀಡುವುದು ಇಸ್ಲಾಮಿನ ಉದ್ದೇಶವಾಗಿತ್ತು. ಹೀಗಿದ್ದರೂ, ಹಳೆಯ ಕಾನೂನುಗಳಲ್ಲಿ ಇಸ್ಲಾಮ್ ಸುಧಾರಣೆಗಳನ್ನು ತಂದು ಪ್ರತೀಕಾರದ ಹಕ್ಕಿನ ಪ್ರಯೋಗದಿಂದ ಸಂಭವಿಸಲಿದ್ದ ಅಪಾಯಕಾರಿ ಪರಿಣಾಮಗಳನ್ನು ಪ್ರಧಾನವಾಗಿ ನಿವಾರಿಸಿತು. ಪುರೋಗಮನವಾದಿ ಕಾನೂನು ಮತ್ತು ನಾಗರಿಕತೆಯ ನಿಯಮಗಳಿಗೆ ಸಮ್ಮತಿ ಸೂಚಿಸುತ್ತಾ ತಪ್ಪಿತಸ್ಥನನ್ನು ಕಂಡು ಹಿಡಿದು ಶಿಕ್ಷಿಸಬೇಕೆಂಬ ಮೂಲ ನಿಯಮವನ್ನು ಅದು ಅಂಗೀಕರಿಸಿತು. ಆದರೆ ಕೆಲವೇ ಸನ್ನಿವೇಶಗಳ ಕುರಿತು ಅದು ಸ್ಪಷ್ಟವಾದ ನಿಬಂಧನೆಗಳನ್ನು ಸೂಚಿಸಿತು ಅಥವಾ ನೆಲೆಗೊಳಿಸಿತು. ಮುಹಮ್ಮದ್ ಪೈಗಂಬರರು ಇಸ್ಲಾಮಿಗಿಂತ ಮುನ್ನ ವಿವಿಧ ರಾಜ್ಯಗಳಲ್ಲಿದ್ದ ಕೆಲವು ಶಿಕ್ಷಾ ನಿಯಮಗಳನ್ನು ಅಂಗೀಕರಿಸಿದರು. ಉದಾಹರಣೆಗಾಗಿ ಪ್ರತೀಕಾರ, ಅಂಗವಿಕಲನ, ಕೊಲೆ ಮೊದಲಾದುವುಗಳಿಗೆ ಸಂಬಂಧಿಸಿದ ನಿಯಮಗಳನ್ನು ಅವರು ಅಂಗೀಕರಿ

ಸಿದರು; "ಪ್ರತಿದಂಡನೆಯ ನಿಯಮಗಳಲ್ಲಿ ನಿಮಗೆ ಜೀವನವಿದೆ" ಎಂದು ಪವಿತ್ರ ಖುರ್‌ಆನ್ ಹೇಳುತ್ತದೆ (2:180). ಅಪರಾಧಕ್ಕೆ ಅನುಯೋಜ್ಯವಾದ ಶಿಕ್ಷೆಯ ಭಯ ಅಪರಾಧ ಮಾಡಲುದ್ಯುಕ್ತನಾದವನ ಕೈಗಳನ್ನು ತಡೆಯುವುದೆಂದು ನಂಬಲಾಗುತ್ತಿತ್ತು. ಅಪರಾಧಗಳನ್ನು ತಡೆಯುವ ಉದ್ದೇಶದಿಂದ ಕೊಲೆ, ಶರೀರವನ್ನು ಗಾಯಗೊಳಿಸುವಿಕೆ, ಲೈಂಗಿಕ ಅಪರಾಧ, ಸುಳ್ಳು ಆರೋಪ, ಕುಡುಕುತನ, ಕಳವು, ದರೋಡೆ ಮೊದಲಾದುವುಗಳಿಗೆ ನಿಶ್ಚಿತವಾಗಿರುವ ಕಠಿಣ ಶಿಕ್ಷೆಗಳನ್ನು ನಾವು ಪರಿಶೀಲಿಸಿದರೆ ಅವುಗಳು ಜಾಣ್ಮೆಯಿಂದ ಕೂಡಿವೆಯೆಂದು ನಿಮಗೆ ಭಾಸವಾಗುವುದು. ವಿಶೇಷವಾಗಿ, ಪವಿತ್ರ ಖುರ್‌ಆನ್ ಕ್ಷಮಾಪಣೆಯನ್ನು ಪದೇ ಪದೇ ಒತ್ತಿಹೇಳುತ್ತಾ ಅದು ದೇವರಿಗೆ ಇಷ್ಟಕರವೆಂದೂ ರಕ್ತದ ಹಣ ಕೇಳುವಾಗ ಮತ್ತು ಪರಿಹಾರ ಕೇಳುವಾಗ ಮಿತವಾಗಿರಬೇಕೆಂಬ ಅದರ ಉಪದೇಶಗಳನ್ನೂ ಈ ಸಂದರ್ಭದಲ್ಲಿ ಜ್ಞಾಪಿಸುವುದು ಸೂಕ್ತವಾಗಿದೆ. ಈ ಶಿಕ್ಷೆಗಳನ್ನು ಇಸ್ಲಾಮಿಕ ನಿಯಮಗಳ ಇನ್ನೊಂದು ಪ್ರಧಾನ ತತ್ವದ ಬೆಳಕಿನಲ್ಲಿಯೂ ಪರಿಗಣಿಸಬೇಕಾಗಿದೆ. ಅದನೆಂದರೆ, ದೇವರ ಆಜ್ಞೆಗಳ ಉಲ್ಲಂಘನೆಗಾಗಿ ವಿಧಿಸುವ ಶಿಕ್ಷೆಗಳನ್ನು ಪಾಪಿಗೆ ನೀಡದಿರುವಂತೆ ಸತ್ಯವಿಶ್ವಾಸಿ ಆದಷ್ಟು ಪ್ರಯತ್ನಿಸಬೇಕಾಗಿದೆ; ಏಕೆಂದರೆ ದೇವರು ಮನುಷ್ಯರೊಡನೆ ತನ್ನ ಸಂಬಂಧವನ್ನು ದಯೆ ಮತ್ತು ಕನಿಕರತೆಯ ಮೇಲೆ ನೆಲೆಗೊಳಿಸಿದ್ದಾನೆ. ಕೊನೆಯದಾಗಿ, ಪವಿತ್ರ ಖುರ್‌ಆನ್ ವಿಧಿಸಿರುವ ಎಲ್ಲಾ ಶಿಕ್ಷೆಗಳನ್ನು ಅಕ್ಷರಶಃ ಪಾಲಿಸಲಿಕ್ಕೆ ಕಾರ್ಯರೂಪದಲ್ಲಿ ಬಹಳ ಕಷ್ಟಕರವಾಗಿರಿಸುವ ನಿಬಂಧನೆಗಳ ಬೆಳಕಿನಲ್ಲಿ ಅವನ್ನೆಲ್ಲಾ ಪರಿಗಣಿಸಬೇಕಾಗಿದೆ. ●

ಭಾಷಾಂತರ: ಎಂ. ಯು. ರಶೀದ್


## Ahmadiyya English Literature

1. Ahmadiyya Movement — 2-00
   By Hazrat Mirza Bashiruddin Muhmud Ahmad
2. Ahmadiyya Movement in India — 1-00
   By Barakat Ahmad Rajeke B. A.
3. The Tomb of Jesus — 1-00
   By Sufi M. R. Bengali
4. A Review of Christianity — 1-00
   By Hazrat Mirza Ghulam Ahmad
5. The Christian Doctrine of Atonement — 1-00
   By Dr. Mufti Muhammad Sadiq, D.D., LL. D., S. S. P. (Lond)
6. The Economic Structure of Islamic Society — 2-00
   By Hazrat Mirza Bashiruddin Mahmud Ahmad
7. Truth About Khatme Nubuwat — 2-00
   By Hazrat Mirza Bashir Ahmad M. A.

Write to :

The Editor, "Yugarashmi" Kannada Quarterly,
10-23/1008, Ansari Road, Bunder, Mangalore-575 001.

# ಪ್ರವಾದಿಗಳು ಮತ್ತು ಅವರ ಶತ್ರುಗಳು

★ ಮೌಲಾನಾ ಬಿ. ಅಬ್ದುಲ್ಲಾ H. A.

ಅಹ್ಮದಿಯಾ ಜಮಾಅತ್ ಅದರ ಪ್ರಾರಂಭ ಘಟ್ಟದಿಂದಲೇ ಕಟು ಆಕ್ಷೇಪಗಳಿಗೂ ಭೀಕರ ವಿರೋಧಕ್ಕೂ ಗುರಿಯಾಗಿದೆ. ಎಲ್ಲಾ ಮುಸ್ಲಿಂ ಪಂಗಡಗಳು ಒಟ್ಟುಗೂಡಿ ಅದರ ನಿರ್ಮೂಲನ ನಾಶಕ್ಕಾಗಿ ಟೊಂಕಕಟ್ಟಿ ಶ್ರಮಿಸಿದುವು. ಪ್ರಥಮವಾಗಿ 200ಕ್ಕಿ ಮಿಕ್ಕಿದ ಪ್ರಸಿದ್ಧ ಮುಸ್ಲಿಂ ಮತಪಂಡಿತರು ಭಯಾನಕವಾದೊಂದು "ಕುಫ್ರ್ ಫತ್ವಾ" (ಮತಭ್ರಷ್ಟ ವಿಧಿ) ವನ್ನು ಅದಕ್ಕೆದುರಾಗಿ ಪ್ರಕಟಪಡಿಸಿದರು. ಆ ಫತ್ವಾದಲ್ಲಿ ಅಹ್ಮದಿಯಾ ಜಮಾತಿನ ಸ್ಥಾಪಕರನ್ನು ಅಶ್ಲೀಲ ಹಾಗೂ ಅಸಭ್ಯಭಾಷೆಯಲ್ಲಿ ಆಕ್ಷೇಪಿಸಿ, ಆ ಮಹಾ ಪುರುಷ ಮತ್ತು ಅವರ ಶಿಷ್ಯಗಣ ಇಸ್ಲಾಮಿನ ವೈರಿಗಳಿಗಿಂತಲೂ ಕಟು ಕಾಫಿರರೆಂದೂ ಅವರ ಕುಫ್ರ್‌ನಲ್ಲಿ ಸಂಶಯಪಡುವವರು ಸಹ ಕಾಫಿರರೆಂದೂ, ಅವರನ್ನು ಎಲ್ಲಾ ವಿಧದಲ್ಲೂ ಬಹಿಷ್ಕರಿಸಬೇಕೆಂದೂ ಅವರ ಪತ್ನಿಯರನ್ನು ಬೇರೆಯವರು ವಿವಾಹ ಮಾಡಿಕೊಳ್ಳಬಹುದೆಂದೂ ಅವರು(ಮುರ್ತದ್) (ಮತತ್ಯಾಗಿ)ಗಳಾದುದರಿಂದ ವಧೆಗೆ ಅರ್ಹರೆಂದೂ ಇತ್ಯಾದಿಯಾಗಿ ಪ್ರಸ್ತಾವಿಸಲಾಗಿತ್ತು. ಬೇರೆ ಯಾವುದೇ ಸಂಘಟನೆಗೆದುರಾಗಿ ಕಂಡು ಬಾರದಷ್ಟು ಭಯಾನಕವಾದ ವಿದ್ವೇಷವೂ ವಿರೋಧವೂ ಅಹ್ಮದಿಯತಿಗೆದುರಾಗಿ ಸ್ಫೋಟಗೊಂಡಿತ್ತು. ಆ ವಿರೋಧ ಭಾವನೆ ಈಗಲೂ ಕಮ್ಮಿಯಾಗಿಲ್ಲ. ಎಲ್ಲಾ ಮುಸ್ಲಿಂ ಪಂಗಡಗಳಿಗೆ ಸೇರಿದವರು ಅವರ ಮತಪಂಡಿತರ ಮತ್ತು ಮುಖಂಡರ ಹಿಂದೆ ಅಣಿನೆರೆದು ಇಂದು ಸಹ ಅದನ್ನು ವಿರೋಧಿಸುತ್ತಿದ್ದಾರೆ.

ಉತ್ತರ ಭಾರತದಲ್ಲಿ ಅಹ್ಮದಿಯಾ ವಿರುದ್ಧ ಒಂದು ಪ್ರಧಾನ ಪಾತ್ರ ವಹಿಸಿದ ಪಂಗಡ ಅಹ್ರಾರಿ ಸಂಘಟನೆಯಾಗಿತ್ತು. ತಾವು ಭಾರತದಲ್ಲಿ ಹತ್ತು ಕೋಟಿ ಮುಸ್ಲಿಮರ ಪ್ರಾತಿನಿಧ್ಯ ವಹಿಸುವವರೆಂದು ವಾದಿಸುತ್ತಾ ಅಹ್ಮದಿಯಾ ಸಂಘಟನೆಯನ್ನು ಭೂಮುಖದಿಂದ ನಿರ್ಮೂಲನ ಮಾಡಲಿಕ್ಕಾಗಿ 1934ರಿಂದ ಅವರು ತಮ್ಮ ಅತ್ಯಂತ ಪರಿಶ್ರಮವನ್ನು ಆರಂಭಿಸಿದರು. ಅಕ್ರಮ ಮತ್ತು ಅನ್ಯಾಯಕರವಾದ ಎಲ್ಲಾ ಕ್ರಮಗಳನ್ನು ಅವರು ಅದಕ್ಕಾಗಿ ಪ್ರಯೋಗಿಸಿದರು. ಅವಿಭಕ್ತ ಭಾರತದಲ್ಲಿ ಮಾತ್ರವಲ್ಲ ಪಾಕಿಸ್ತಾನದಲ್ಲಿ ಆಶ್ರಯ ಪಡೆದ ಬಳಿಕ ಅಲ್ಲಿಯೂ ಅವರು ಈ ಭಯಂಕರವಾದ ವಿದ್ವೇಷವನ್ನೇ ಮುಂದುವರಿಸಿದರು. ಆದರೆ ಅಲ್ಲಾಹನ ಸಹಾಯ ಮತ್ತು ಅನುಗ್ರಹ ನಿಮಿತ್ತ ಅಹ್ಮದಿಯಾ ಸಂಘಟನೆ ದಿನೇ ದಿನೇ ಪ್ರಗತಿ ಗಳಿಸಿತು; ಅಹ್ರಾರಿಗಳು ತಮ್ಮ ಗುರಿ ತಲುಪದೆ ಸಂಪೂರ್ಣ ಪರಾಜಿತರಾದರು. ಇಂದು ಅಹ್ರಾರಿಗಳ ಸಂಘಟನೆ ನಾಮಾವಶೇಷವಾಗಿದೆ.

ಅಹ್ಮದಿಯತ್ತನ್ನು ನಾಶಪಡಿಸಲಿಕ್ಕಾಗಿ ಎಲ್ಲಾ ಕ್ರಮಗಳನ್ನು ಪ್ರಯೋಗಿಸಿಕೊಂಡು ನಾನಾ ತರದ ಶತ್ರುಗಳು ಯತ್ನಿಸಿದ್ದು ಹಾಗೂ ಈಗಲೂ ಅದೇ ಕ್ರಮ ಮುಂದುವರಿಯುತ್ತಿರುವುದು ಅದೊಂದು ದೈವಿಕವಾದ ಸತ್ಯ ಸಂಘಟನೆಯೆಂಬುದಕ್ಕೆ ಸ್ಪಷ್ಟ ಪುರಾವೆಯಾಗಿದೆ. ಈ ರೀತಿಯ ವಿರೋಧ ಒಬ್ಬ ಮಿಥ್ಯಾವಾದಿಯ ಹಾಗೂ ಆತನ ಸಂಘಟನೆಯ ಎದುರಾಗಿ ಎಂದೂ ಉಂಟಾಗಿಲ್ಲ. ತದ್ವಿರುದ್ಧವಾಗಿ, ದೈವನಿಯುಕ್ತರಾದ ಸತ್ಯಪ್ರವಾದಿಗಳ ಮತ್ತು ಅವರ ಅನುಯಾಯಿಗಳ ಎದುರಾಗಿ ಮಾತ್ರ ಇಂತಹ ವಿದ್ವೇಷವೂ ವಿರೋಧವೂ ಯಾವಾಗಲೂ ಪ್ರಕಟಗೊಳ್ಳುತ್ತಲಿತ್ತು. ಪವಿತ್ರ ಖುರ್‌ಆನನ್ನು ಒಮ್ಮೆಯಾದರೂ ಅರ್ಥಗ್ರಹಿಸಿಕೊಂಡು ಓದುವ ಯಾರಿಗೂ ಸುಲಭವಾಗಿ ಮನವರಿಕೆಯಾಗುವ ಒಂದು ವಾಸ್ತವಾಂಶವಾಗಿದೆ ಇದು. ಅಲ್ಲಾಹು ನಿಯೋಗಿಸಿದ ಎಲ್ಲಾ ಪ್ರವಾದಿಗಳನ್ನು ಸಹ ಕೇವಲ ಕೆಲವರು ಮಾತ್ರ ಅಂಗೀಕರಿಸುತ್ತಿದ್ದರು. ಬಹುಸಂಖ್ಯಾತ ಜನರು ಅವರನ್ನು ಕಳ್ಳವಾದಿಯೆಂದು ಕರೆದು ತಿರಸ್ಕರಿಸುತ್ತಲೂ ಅವರ ಸಂಘಟನೆಗಳನ್ನು ನಿರ್ಮೂಲನ ಮಾಡಲಿಕ್ಕೆ ಟೊಂಕಕಟ್ಟಿ ಶ್ರಮ ವಹಿಸುತ್ತಲೂ ಅವರನ್ನು ಹಲವಿಧ ಕಷ್ಟಗಳಿಗೂ ಯಾತನೆಗಳಿಗೂ ಗುರಿಪಡಿಸುತ್ತಲೂ ಅವರ ಮೇಲೆ ಸುಳ್ಳು ಆರೋಪಗಳನ್ನು ಹೊರಿಸುತ್ತಲೂ ಇದ್ದರು. ಈ

ಸಂಗತಿಯನ್ನು ಪವಿತ್ರ ಖುರ್‌ಆನಿನಲ್ಲಿ ಹಲವೆಡೆಗಳಲ್ಲಿ ಪದೇ ಪದೇ ಪ್ರಸ್ತಾವಿಸಲಾಗಿದೆ. ಇತರ ಪ್ರವಾದಿಗಳಿಗೆ ಮಾತ್ರವಲ್ಲ, ಪ್ರವಾದಿಶ್ರೇಷ್ಠರಾದ ಮುಹಮ್ಮದ್ ಪೈಗಂಬರರಿಗೆ ಅನುಭವವಾದದ್ದು ಸಹ ಇದೇ ಆಗಿತ್ತು. ಆದರೆ ಈ ರೀತಿಯ ವಿರೋಧ ಒಬ್ಬ ಮಿಥ್ಯಾವಾದಿಯ ಎದುರಾಗಿ ಉಂಟಾದುದು ಖುರ್‌ಆನಿನಿಂದಾಗಲಿ ಮತ ಚರಿತ್ರೆಯಿಂದಾಗಲಿ ಸಾಬೀತಾಗುವುದಿಲ್ಲ. ಆದ್ದರಿಂದಲೇ ದೈವನಿಯೋಗವಾದಿಗಳ ಸಂಘಟನೆ ಅಭಿವೃದ್ಧಿಗೊಳ್ಳುತ್ತಿರುವುದು ಅವರ ವಾದ ಸತ್ಯವೆಂಬುದಕ್ಕೆ ಸಾಕ್ಷ್ಯವೆಂದು ಖುರ್‌ಆನ್ ಪದೇ ಪದೇ ಹೇಳಿದೆ.

### ಮಿಥ್ಯಾ ಪ್ರವಾದಿಗಳು ವಿರೋಧಿಸಲ್ಪಡುವುದಿಲ್ಲ

ಲೋಕದಲ್ಲಿ ಹಲವು ಕಾಲಘಟ್ಟಗಳಲ್ಲಿ ಸುಳ್ಳುವಾದಿಗಳು ಆಗಮಿಸಿದ್ದಾರೆ. ಆದರೆ ಅವರಲ್ಲಿ ಯಾರೂ ಸಹ ದೈವನಿಯುಕ್ತರಾದ ಸತ್ಯವಾದಿಗಳಂತೆ ವಿರೋಧಿಸಲ್ಪಡಲೂ ಆಕ್ಷೇಪಿಸಲ್ಪಡಲೂ ಇಲ್ಲ. ಅವರನ್ನು ಸುಳ್ಳುವಾದಿಗಳೆಂದು ಸಮರ್ಥಿಸಲಿಕ್ಕಾಗಿ ಅವರಿಗೆದುರಾಗಿ ಮಿಥ್ಯವೂ ವಂಚನಾತ್ಮಕವೂ ಆದ ಆಕ್ಷೇಪಗಳೂ ಆರೋಪಗಳೂ ಎಲ್ಲೆಲ್ಲೂ ಪ್ರಚರಿಸಲ್ಪಟ್ಟಿರಲಿಲ್ಲ. ತದ್ವಿರುದ್ಧವಾಗಿ ಆ ಸುಳ್ಳುವಾದಿಗಳಲ್ಲಿ ಕೆಲವರಿಗೆ ಅಲ್ಪ ಕಾಲದಲ್ಲೇ ಅಸಾಧಾರಣ ರೀತಿಯ ವಿಜಯ ಪ್ರಾಪ್ತಿಯಾಗಿತ್ತು. ಆದರೆ ನೀರ್ಗುಳ್ಳೆಗಳಂತೆ ಕ್ಷಣಮಾತ್ರದಲ್ಲಿ ಅವರು ನಾಶಗೊಂಡು ಅವರ ಸಂಘಟನೆಗಳು ನಾಮಮಾತ್ರ ಶೇಷವಾದುವು. ಹಾಗೆ ಅಲ್ಲಾಹನ ಹೆಸರಿನಲ್ಲಿ ಸುಳ್ಳು ಹೇಳಿ ಮಿಥ್ಯಾವಾದ ಹೂಡಿದವರನ್ನು ಅಲ್ಲಾಹನು ನಾಶಪಡಿಸುವನೆಂಬ ಅವನ ಅನುಲ್ಲಂಘನೀಯ ನಿಯಮಕ್ಕೆ ಅವರು ಗುರಿಯಾಗಿ, ಅವರ ಪರ್ಯವಸಾನ ಅವರು ಸುಳ್ಳುವಾದಿಗಳಾಗಿದ್ದರೆಂಬುದಕ್ಕೆ ಕುರುಹಾಯಿತು.

ಅವರ ಪೈಕಿ ಕೆಲವರು ಸ್ಥಾಪಿತ ಆಡಳಿತೆಯನ್ನು ಬುಡಮೇಲು ಮಾಡಿ ಅಧಿಕಾರವನ್ನು ಕಸಿಯಲು ಯತ್ನಿಸಿದ್ದರು. ಅಂಥವರು ಸರಕಾರದ ಕೈಯಿಂದ ನಾಶಗೊಂಡರು. ಪೈಗಂಬರರ ಕಾಲದಲ್ಲಿ ವಾದಿಸಿದ ಮುಸೈಲಿಮತ್ ಮತ್ತು ಇತ್ತೀಚಿಗಿನ ಕಾಲದಲ್ಲಿ ವಾದಿಸಿದ ಅಲಿ ಮುಹಮ್ಮದ್ ಬಾಬ್ ಇವರಿಬ್ಬರ ಪರ್ಯವಸಾನ ಈ ಯಥಾರ್ಥತೆಯನ್ನು ಮನದಟ್ಟು ಮಾಡಿಕೊಡುತ್ತದೆ.

ಹೀಗೆ, ಸತ್ಯವಾದಿಗಳು ಭಯಾನಕವಾದ ವಿರೋಧಗಳಿಗೆ ಗುರಿಯಾಗುತ್ತಲೂ ನಾನಾ ತರದ ಶತ್ರುಗಳು ಅವರನ್ನೂ ಅವರ ಸಂಘಟನೆಯನ್ನೂ ನಿರ್ಮೂಲನ ಮಾಡಲು ಯತ್ನಿಸುತ್ತಲೂ ಇರುತ್ತಾರೆ. ಆದರೆ ಆ ಸತ್ಯಾತ್ಮರಂತೆ ಅವರ ಸಂಘಟನೆಗಳೂ ದಿನೇ ದಿನೇ ಅಭಿವೃದ್ಧಿ ಪಡೆದು ಮುನ್ನುಗ್ಗುತ್ತವೆ. ಕಾರಣವೇನೆಂದರೆ, ಅಲ್ಲಾಹುವಿನ ವಿಶೇಷವಾದ ಬೆಂಬಲ ಅವರಿಗಿರುತ್ತದೆ. ಅವನ ಬಲಿಷ್ಠ ಕೈ ಅವರನ್ನು ಆಧರಿಸುತ್ತದೆ. ಆದ್ದರಿಂದಲೇ ಅಲ್ಲಾಹನು ಪವಿತ್ರ ಖುರ್‌ಆನಿನ ಹಲವೆಡೆಗಳಲ್ಲಿ ಸತ್ಯವಾದಿಗಳಿಗೆ ಎಂತಹ ವಿರೋಧವಿದ್ದರೂ ಅವರು ಜಯಿಸಿಕೊಂಡೇ ಹೋಗುವರೆಂದೂ ಆ ವಿಜಯ ಅವರ ಸತ್ಯತೆಗೆ ಸಾಕ್ಷ್ಯವೆಂದೂ ಹಲವು ರೀತಿಯಲ್ಲಿ ಆವರ್ತಿಸಿ ಪ್ರಸ್ತಾವಿಸಿದ್ದಾನೆ.

ಅದೇ ಪ್ರಕಾರ ಅಲ್ಲಾಹನ ಪ್ರವಾದಿಗಳೆಲ್ಲರನ್ನೂ ನಂಬಬೇಕಾಗಿದೆಯೆಂದೂ ಅವರ ಪೈಕಿ ಯಾರನ್ನೂ ತಿರಸ್ಕರಿಸಬಾರದೆಂದೂ, ಯಾವೊಬ್ಬ ಪ್ರವಾದಿಯನ್ನಾಗಲಿ ನಿರಾಕರಿಸುವುದು ಎಲ್ಲಾ ಪ್ರವಾದಿಗಳನ್ನೂ ನಿರಾಕರಿಸುವುದಕ್ಕೆ ತುಲ್ಯವೆಂದೂ, ಅವರಿಗೆ (ತಿರಸ್ಕರಿಸುವವರಿಗೆ) ಇಹದಲ್ಲೂ ಪರದಲ್ಲೂ ಭಯಂಕರ ದೈವಿಕ ಶಿಕ್ಷೆ ಎರಗುವುದೆಂದೂ ಖುರ್'ಆನ್ ಸ್ಪಷ್ಟವಾಗಿ ಕಲಿಸುತ್ತದೆ. ತದ್ವಿರುದ್ಧವಾಗಿ, ನೀವು ಸುಳ್ಳುವಾದಿಯನ್ನು ನಂಬಿದರೆ ಇಹದಲ್ಲೂ ಪರದಲ್ಲೂ ಶಿಕ್ಷೆಯುಂಟಾದೀತೆಂದೂ ಅವರನ್ನು ವಿರೋಧಿಸಿ ನಾಶಪಡಿಸಲು ಸತ್ಯವಿಶ್ವಾಸಿಗಳು ಬದ್ಧರಾಗಬೇಕೆಂದೂ ಖುರ್‌ಆನ್ ಹೇಳುವುದಿಲ್ಲ.

ಮುಸ್ಲಿಂ ಮತಪಂಡಿತರೂ ಪಂಗಡಗಳೂ ಅಹ್ಮದಿಯತ್ ಮಿಥ್ಯಾ ಸಂಘಟನೆಯೆಂದು ಮಾಡಲಿಕ್ಕಾಗಿಯೂ ಅದನ್ನು ನಾಶಪಡಿಸಲಿಕ್ಕಾಗಿಯೂ ಬದ್ಧಕಂಕಣರಾಗಲೇಬೇಕಾಗಿದೆ. ಅವರ ಈ ಪರಿಶ್ರಮ ಅಹ್ಮದಿಯತ್ತಿನ ಸ್ಥಾಪಕರು ಸತ್ಯವಾದಿಯೆಂಬುದಕ್ಕೆ ವ್ಯಕ್ತವಾದ ಪುರಾವೆಯೆಂದು ಪವಿತ್ರ ಖುರ್‌ಆನಿನ ಪಾಠಗಳೂ ಅದರಲ್ಲಿ ಪ್ರಸ್ತಾವಿಸಲಾದ ಪ್ರವಾದಿಗಳ ವೃತ್ತಾಂತಗಳೂ ಸ್ಪಷ್ಟಪಡಿಸುತ್ತವೆ. ಉದಾಹರಣೆಗೆ ಖುರ್‌ಆನಿನಲ್ಲಿ ಹೇಳಲಾದ ಪ್ರವಾದಿಗಳಲ್ಲಿ ಕೆಲವರ ವೃತ್ತಾಂತಗಳನ್ನು ಸಂಕ್ಷಿಪ್ತವಾಗಿ ವಿವರಿಸ ಬಹುದು.

### ನೂಹ್ ನಬಿ (ಪ್ರವಾದಿ ನೋಹಾ)

ನೂಹ್‌ನಬಿಯನ್ನು ಅವರ ಜನಾಂಗ ಕಟುವಾಗಿ ವಿರೋಧಿಸಿದರು. ಅವರ ಮುಖ ನೋಡಿ ಆ ಎದುರಾಳಿಗಳು ಹೇಳಿದುದಾಗಿ ಖುರ್‌ಆನ್ ಹೀಗೆ ಪ್ರಸ್ತಾವಿ

ಸುತ್ತದೆ: "ನೀನು ಸ್ಪಷ್ಟವಾಗಿಯೂ ದಾರಿತಪ್ಪಿರುವೆ" (7:61) "ನೀನು ನಮ್ಮಂತಹ ಒಬ್ಬ ಮನುಷ್ಯ ಮಾತ್ರ. ನಿನ್ನನ್ನು ಅನುಸರಿಸಿದವರು ನಮ್ಮ ಪೈಕಿಯ ಅವಿವೇಕಿಗಳಾದ ಕೀಳುಜನರಾಗಿದ್ದಾರೆ. ನಮಗಿಂತ ಯಾವ ಶ್ರೇಷ್ಠತೆಯೂ ನಿಮಗಿರುವುದಾಗಿ ನಮಗೆ ಕಾಣುವುದಿಲ್ಲ. ಮಾತ್ರವಲ್ಲ, ನೀವು ಸುಳ್ಳು ಹೇಳುವವರೆಂದು ನಾವು ಭಾವಿಸುತ್ತೇವೆ. "ಓ ನೂಹ್, ನೀನು ನಮ್ಮೊಡನೆ ತುಂಬಾ ವಾದಿಸಿದಿಯಷ್ಟೇ. ನೀನು ಸತ್ಯವಂತನಾದರೆ ನಮಗೆ ಮುನ್ನೆಚ್ಚರಿಕೆಯಿತ್ತು ಭಯಪಡಿಸುವುದನ್ನು (ಶಿಕ್ಷೆ) ತಾ." "ಅವರು (ನೂಹ್ ನಬಿ) ನಾವೆಯನ್ನು ನಿರ್ಮಿಸುತ್ತಿದ್ದಾಗ ಅವರ ಎದುರಿನಿಂದ ದಾಟಿ ಹೋಗುತ್ತಿದ್ದ ಅವರ ಜನಾಂಗದ ಮುಖಂಡರು ಅವರನ್ನು ಅಪಹಾಸ್ಯಮಾಡುತ್ತಿದ್ದರು"(11:28,33,38). ವಿರೋಧಿಗಳು ಪರಸ್ಪರ ಹೇಳಿದರು: "ಇವನು ನಿಮ್ಮಂತಹ ಒಬ್ಬ ಮನುಷ್ಯ ಮಾತ್ರ; ಇವನು ನಿಮಗಿಂತ ಶ್ರೇಷ್ಠನಾಗಲಿಕ್ಕೆ ಇಚ್ಛಿಸುತ್ತಾನೆ; ಅಲ್ಲಾಹನು ಇಚ್ಛಿಸಿದ್ದರೆ ದೇವಚರರನ್ನು ಕಳುಹಿಸುತ್ತಿದ್ದನು. ನಮ್ಮ ಪೂರ್ವಜರಲ್ಲಿ ಇದು (ಈ ತರದ ವಾದ) ನಾವು ಕೇಳಿರಲಿಲ್ಲ. ಇವನು ಹುಚ್ಚು ಹಿಡಿದ ಒಬ್ಬ ಮನುಷ್ಯನೇ ಆಗಿದ್ದಾನೆ. ಇವನ ಸ್ಥಿತಿ ಏನಾಗುವುದೆಂದು ತಿಳಿಯಲು ಕೆಲವು ಕಾಲ ಕಾಯಿರಿ" (23;25,26).

"ಅವರು (ವಿರೋಧಿಗಳು) ಹೇಳಿದರು: ನಾವು ನಿನ್ನನ್ನು ಅನುಸರಿಸಬೇಕೇ? ನೀಚರಲ್ಲವೇ ನಿನ್ನನ್ನು ಅನುಸರಿಸಿದವರು?." "ನೂಹ್, ನೀನು ನಿನ್ನ ವಾದವನ್ನು ಹಿಂತೆಗೆಯದಿದ್ದ ಪಕ್ಷದಲ್ಲಿ ಖಂಡಿತವಾಗಿಯೂ ನಿನ್ನನ್ನು ಕಲ್ಲೆಸೆದು ಕೊಲ್ಲಲಾಗುವುದು" (26 : 112, 117). "ಅವರು (ನೂಹ್‌ನಬಿ) ತನ್ನ ನಾಥನೊಡನೆ ಪ್ರಾರ್ಥಿಸಿದರು: ನಾನಿದೋ ಪರಾಜಿತನಾಗಿದ್ದೇನೆ; ನೀನು ನನಗೆ ಸಹಾಯ ನೀಡಬೇಕು" (54:11). "ನಾನು ನನ್ನ ಜನರನ್ನು ರಾತ್ರಿಯೂ ಹಗಲೂ (ಸತ್ಯದೆಡೆಗೆ) ಕರೆದೆನು. ಆದರೆ ನನ್ನ ಕರೆ ನಿಮಿತ್ತ ಅವರು ಇನ್ನೂ ದೂರಕ್ಕೆ ಅಗಲಿ ಓಡಿದರು. ನೀನು ಅವರನ್ನು ಕ್ಷಮಿಸಲಿಕ್ಕಾಗಿ ನಾನು ಅವರನ್ನು ಕರೆದಾಗಲೆಲ್ಲಾ (ಅದು ಕೇಳದಿರಲಿಕ್ಕಾಗಿ) ಅವರು ತಮ್ಮ ಕೈಬೆರಳುಗಳಿಂದ ಕಿವಿಮುಚ್ಚಿ ತಮ್ಮ ವಸ್ತ್ರಗಳಿಂದ ಸ್ವಯಂ ಮುಖ ಮುಚ್ಚಿ, ಹಟ ಹಿಡಿದು ಕಠಿಣ ರೀತಿಯಲ್ಲಿ ಅಹಂಕಾರ ತೋರ್ಪಡಿಸಿದರು" (71:6-8). ತನ್ನ ಜನತೆಯ ಹೃದಯ ಕಾಠಿಣ್ಯ ಹಾಗೂ ಧಿಕ್ಕಾರಪೂರ್ವಕವಾದ ತಿರಸ್ಕಾರ ನಿಮಿತ್ತ ಅವರು ಅಲ್ಲಾಹುವಿನೊಡನೆ ಹೀಗೆ ಪ್ರಾರ್ಥಿಸಿದರು: "ನನ್ನ ನಾಥಾ; ಅವಿಶ್ವಾಸಿಗಳಲ್ಲಿ ಯಾರನ್ನೂ ಈ ಭೂಮಿಯಲ್ಲಿ ವಾಸ ಮಾಡಲು ಬಿಡಬೇಡ; ಏಕೆಂದರೆ ನೀನು ಅವರನ್ನು ಬಿಟ್ಟರೆ ನಿನ್ನ ದಾಸರನ್ನು ಅವರು ತಪ್ಪುಹಾದಿಗೆಳೆಯುವರು. ಅವರು ನೀಚ ಹಾಗೂ ಕೃತಘ್ನ ಸಂತತಿಗಳನ್ನು ಮಾತ್ರವೇ ಹುಟ್ಟಿಸುವರು" (71 : 21, 28). "ಅಲ್ಲಾಹು ನೂಹಿಗೆ ಹೀಗೆ ತಿಳಿಸಿದನು: ನಿನ್ನ ಜನರಲ್ಲಿ ಈ ತನಕ ನಂಬಿದವರ ಹೊರತು ಇನ್ನು ಯಾರೂ ನಂಬಲಾರರೆಂಬುದು ಖಂಡಿತ...... ಕೆಲವರು ಮಾತ್ರವೇ ನಂಬಿ ಅವರ ಜೊತೆಯಲ್ಲಿದ್ದರು" (11 : 37, 41).

## ಇಬ್ರಾಹಿಂ ನಬಿ (ಪ್ರವಾದಿ ಅಬ್ರಹಾಂ)

ಹಝ್‌ರತ್ ಇಬ್ರಾಹಿಂ ನಬಿಯನ್ನು ಸಹ ಅವರ ಜನರು ತಿರಸ್ಕರಿಸುತ್ತಲೂ ಕೊಲ್ಲಲಿಕ್ಕೆ ಯತ್ನಿಸುತ್ತಲೂ ಇದ್ದರು. ಕೊನೆಗೆ ತನ್ನ ಸ್ವದೇಶವಾದ ಇರಾಕಿನಿಂದ ಬಹಳ ದೂರವಿರುವ ಶಾಂ ಎಂಬಲ್ಲಿಗೆ ಹೋಗಿ ಅವರು ಆಶ್ರಯ ಪಡೆಯಬೇಕಾಯಿತು. ಅವರ ಪಿತ ಅವರೊಡನೆ ಹೇಳಿದ್ದು "ನೀನು ಸಾಕು ಮಾಡದಿದ್ದರೆ ಖಂಡಿತವಾಗಿಯೂ ನಿನ್ನನ್ನು ನಾನು ಕಲ್ಲೆಸೆದು ಕೊಲ್ಲುವೆನು" (ಖುರ್‌ಆನ್ 19:47) ಎಂದಾಗಿತ್ತು. ಅವರ ಜನರು ಹೀಗೆ ಹೇಳಿದರು: "ನೀನು ನಮ್ಮ ಬಳಿಗೆ ಸತ್ಯವನ್ನು ತಂದಿದ್ದೀಯೇ? ಅಥವಾ ಹಾಸ್ಯ ಮಾಡುತ್ತೀಯೇ ?... ಅವರು ಹೇಳಿದರು: "ನೀವು (ಆತನ ವಿಷಯದಲ್ಲಿ) ಏನಾದರೂ ಮಾಡಲು ಉದ್ದೇಶಿಸುವುದಾದರೆ, ಆತನನ್ನು (ಅಗ್ನಿಯಲ್ಲಿ ಹಾಕಿ) ಸುಡಿರಿ; ತನ್ಮೂಲಕ ನಿಮ್ಮ ದೈವಗಳಿಗೆ ನೆರವಾಗಿರಿ" (21 : 56, 69). "ಅವರು ಹೇಳಿದರು: ನೀವು ಅವನಿಗೆ (ಬೆಂಕಿಯಲ್ಲಿ ಹಾಕಿ ಸುಡಲಿಕ್ಕಾಗಿ) ಒಂದು ಅಗ್ನಿಕುಂಡವನ್ನು ನಿರ್ಮಿಸಿರಿ; ಮತ್ತೆ ಅವನನ್ನು ಜ್ವಲಿಸುವ ಬೆಂಕಿಯಲ್ಲಿ ಹಾಕಿರಿ" (37:98). "ಅವರ (ಉಪದೇಶಕ್ಕೆ) ಜನರಿಂದ ಲಭಿಸಿದ ಉತ್ತರ ಇಷ್ಟು ಮಾತ್ರವಾಗಿತ್ತು: ನೀವು ಅವನನ್ನು (ಇಬ್ರಾಹಿಂ ನಬಿಯನ್ನು) ಕೊಲ್ಲಿರಿ ಅಥವಾ ಬೆಂಕಿಯಲ್ಲಿ ಹಾಕಿ ಸುಡಿರಿ" (29:25). "ಅವರ ಪೈಕಿ ಬಹುಸಂಖ್ಯಾತರು ಅವರನ್ನು ನಂಬಲಿಲ್ಲ" (26:104). ತನ್ನ ಜನರ ತಿರಸ್ಕಾರವನ್ನೂ ಅಕ್ರಮಕರವಾದ ವರ್ತನೆಯನ್ನೂ

ಕಂಡು ಅವರು ಹೀಗೆ ಹೇಳುತ್ತಾ ತನ್ನ ರಾಜ್ಯವನ್ನು ತ್ಯಜಿಸಬೇಕಾಯಿತು: "ನಾನು ನನ್ನ ನಾಥನೆಡೆಗೆ ಪಲಾಯನ ಮಾಡುತ್ತೇನೆ. ಖಂಡಿತವಾಗಿಯೂ ಅವನು ಪ್ರತಾಪಶಾಲಿಯೂ ಸುಜ್ಞಾನಿಯೂ ಆಗಿದ್ದಾನೆ" (29:27).

### ಪ್ರವಾದಿ ಹೂದ್

ಹಝ್ರತ್ ಹೂದ್ ನಬಿಯನ್ನೂ ಅವರ ಜನರು ನಿರಾಕರಿಸಿದರು. ಅವರಲ್ಲಿ ಮುಖಂಡರು ಹೂದ್ ನಬಿಯೊಡನೆ ಹೇಳಿದರು: "ದಿಟವಾಗಿಯೂ ನಿನ್ನನ್ನು ಮೂರ್ಖ ಶಿಖಾಮಣಿಯೆಂದು ನಾವು ತಿಳಿದುಕೊಂಡಿದ್ದೇವೆ, ನೀನು ಸುಳ್ಳು ಹೇಳುತ್ತೀಯೆಂದು ನಾವು ಎಣಿಸುತ್ತೇವೆ" (7:67). ಅವರು ಹೇಳಿದರು: "ಓ ಹೂದ್, ನೀನು ನಮಗೆ ಸ್ಪಷ್ಟವಾದ ಯಾವ ಪುರಾವೆಯನ್ನೂ ನೀಡಲಿಲ್ಲ. ನೀನು ಹೇಳುವುದರಿಂದ ಮಾತ್ರ ನಾವು ನಮ್ಮ ದೈವಗಳನ್ನು ಉಪೇಕ್ಷಿಸಿ ನಿನ್ನನ್ನು ಅಂಗೀಕರಿಸಲಾರೆವು. ನಮ್ಮ ಕೆಲವು ದೈವಗಳು ನಿನಗೆ ಕೆಡುಕನ್ನುಂಟುಮಾಡಿವೆಯೆಂದು ನಾವು ಎಣಿಸುತ್ತೇವೆ" (11:54. 55). ಎಂದರೆ, ಅವರ ವಿಗ್ರಹಗಳನ್ನು ಹೂದ್‌ನಬಿ ಆಕ್ಷೇಪಿಸಿದ ಕಾರಣದಿಂದ ಅವರಿಗೆ ಆ ದೈವಗಳಿಂದ ಕೆಡುಕುಂಟಾದುದರ ಪರಿಣಾಮವಾಗಿ ಅವರಿಗೆ ಮತಿಭ್ರಮೆಯಾಗಿ ಹೀಗೆ ಏನೆಲ್ಲಾ ಹೇಳುತ್ತಿದ್ದಾರೆಂದು ತಾತ್ಪರ್ಯ. ಆ ವಿರೋಧಿಗಳು ಇನ್ನೂ ಹೇಳಿದರು: "ನೀನು ಉಪದೇಶಿಸುವುದೂ ಉಪದೇಶಿಸದೆ ಇರುವುದೂ ನಮಗೆ ಸಮಾನ (ನಿಷ್ಪ್ರಯೋಜಕವೆಂದು ತಾತ್ಪರ್ಯ). ನಿಶ್ಚಯವಾಗಿಯೂ ಇದು ಪೂರ್ವಿಕರ ವಾಡಿಕೆಯಾಗಿದೆ" (26:137, 13೦). ಎಂದರೆ, ಮೊದಲು ಸಹ ಇಂತಹ ಹಲವು ಸುಳ್ಳುವಾದಿಗಳು ಆಗಮಿಸಿದ್ದರು. ಅದೇ ರೀತಿ ನೀನು ಸಹ ಒಬ್ಬ ಮಿಥ್ಯಾವಾದಿ. "ಅವರಲ್ಲಿ (ಹೂದ್ ನಬಿಯ ಜನರಲ್ಲಿ) ಬಹುಸಂಖ್ಯಾತರು ನಂಬಲಿಲ್ಲ" (26 : 140).

### ಪ್ರವಾದಿ ಶುಐಬ್

ಹಝ್ರತ್ ಶುಐಬ್ ನಬಿಯ ವೃತ್ತಾಂತವನ್ನು ಖುರ್‌ಆನ್ ಹೀಗೆ ಮನವರಿಕೆ ಮಾಡಿಕೊಡುತ್ತದೆ: "ಅವರ ಜನರ ಪೈಕಿಯ ಅಹಂಕಾರಿಗಳಾದ ಮುಖಂಡರು ಹೇಳಿದರು, ಓ ಶುಐಬ್, ಖಂಡಿತವಾಗಿಯೂ ನಿನ್ನನ್ನೂ ನಿನ್ನಲ್ಲಿ ವಿಶ್ವಾಸವಿರಿಸಿದವರನ್ನೂ ನಮ್ಮ ರಾಜ್ಯದಿಂದ ನಾವು ಹೊರಹಾಕುತ್ತೇವೆ. ಅಲ್ಲವಾದರೆ ನೀವೆಲ್ಲ ನಮ್ಮ ಮತಕ್ಕೆ ಮರಳಿ ಬರಲೇಬೇಕು" (ಆ ಮುಖಂಡರು ಶುಐಬ್ ನಬಿಯ ಅನುಯಾಯಿಗಳೊಡನೆ ಹೀಗೆ ಹೇಳಿದ್ದರು): "ನೀವು ಶುಐಬನ್ನು ಅನುಸರಿಸುವುದಾದರೆ ನಿಶ್ಚಯವಾಗಿಯೂ ನೀವು ನಷ್ಟ ಅನುಭವಿಸುವಿರಿ" (7 ; 89, 91). ಅವರು ಹೇಳಿದರು: "ಓ ಶುಐಬ್, ನೀನು ಹೇಳುವ ಅಧಿಕಾಂಶ ಸಂಗತಿಗಳು ನಮಗೆ ಮನವರಿಕೆಯಾಗುವುದಿಲ್ಲ; ನಿರ್ಬಲನಾದ ಒಬ್ಬನಂತೆ ನಿನ್ನನ್ನು ನಾವು ಕಾಣುತ್ತೇವೆ; ನಿನ್ನ ಕುಟುಂಬದವರಿಲ್ಲದಿರುತ್ತಿದ್ದರೆ ಖಂಡಿತವಾಗಿಯೂ ನಾವು ನಿನ್ನನ್ನೂ ಕಲ್ಲೆಸೆದು ಕೊಲ್ಲುತ್ತಿದ್ದೆವು; ನೀನು ನಮ್ಮ ದೃಷ್ಟಿಯಲ್ಲಿ ಒಬ್ಬ ಮಹಾನ್ಯ ಮನುಷ್ಯನಲ್ಲ" (11:92). "ಅವರು ಹೇಳಿದರು: ಓ ಶುಐಬ್, ನಮ್ಮ ಪೂರ್ವಿಕರು ಆರಾಧಿಸುತ್ತಿರುವುದನ್ನು ನಾವು ಉಪೇಕ್ಷಿಸಬೇಕೆಂದೂ ನಮ್ಮ ಧನದಿಂದ ನಾವು ಇಷ್ಟ ಪ್ರಕಾರ ಖರ್ಚು ಮಾಡಬಾರದೆಂದೂ ಅಲ್ಲವೇ ನಿನ್ನ ಪ್ರಾರ್ಥನೆ ನಮ್ಮೊಡನೆ ಆಜ್ಞಾಪಿಸುವುದು! ದಿಟವಾಗಿಯೂ ನೀನು ಸಮರ್ಥನೂ ವಿವೇಕಿಯೂ ಆಗಿರುವೆ" (11 : 88). ಹೀಗೆ ಅವರು ಹೇಳಿದ್ದು ಅಪಹಾಸ್ಯ ಸ್ವರದಲ್ಲಾಗಿತ್ತು. ಅವರು ಇನ್ನೂ ಹೇಳಿದರು: "ನಿಶ್ಚಯವಾಗಿಯೂ ನಿನಗೆ ಮಾಟ ಮಾಡಲಾಗಿದೆ. (ತನ್ನಿಮಿತ್ತ ಮತಿಭ್ರಮೆಯುಂಟಾಗಿದೆ). ನೀನು ನಮ್ಮ ಹಾಗೆಯೇ ಒಬ್ಬ ಮನುಷ್ಯಮಾತ್ರ. ಖಂಡಿತವಾಯೂ ನೀನು ಸುಳ್ಳು ಹೇಳುವವನೆಂದು ನಾವು ನಂಬುತ್ತೇವೆ. ನೀನು ಸತ್ಯವಂತನೆಂದಾದರೆ ಆಕಾಶದಿಂದ ನಮ್ಮ ಮೇಲೆ ಶಿಕ್ಷೆ ಎರಗಲಿ" (26:186, 187, 188). "ಅವರ ಜನರಲ್ಲಿ ಬಹುಸಂಖ್ಯಾತರು ನಂಬಲಿಲ್ಲ" (26:191).

### ಮೂಸಾ ನಬಿ (ಪ್ರವಾದಿ ಮೋಸೆ)

ಇದೇ ಪ್ರಕಾರ ಮೂಸಾ ನಬಿಯನ್ನು ಆಕ್ಷೇಪಿಸಿ ಮಿಥ್ಯಾವಾದಿಯೆಂದು ವಿಧಿಸಲಾಗಿತ್ತು. ಖುರ್‌ಆನ್ ಹೀಗೆ ಹೇಳುತ್ತದೆ: "ಫಿರ್‌ಔನನ (ಫರೋಹನ) ಜನರ ಪೈಕಿಯ ಮುಖಂಡರು ಹೇಳಿದರು: ಖಂಡಿತವಾಗಿಯೂ ಇವನೊಬ್ಬ ನಿಪುಣ ಮಾಂತ್ರಿಕನಾಗಿದ್ದಾನೆ. ನಿಮ್ಮನ್ನು ನಿಮ್ಮ ಊರಿನಿಂದ ಹೊರ ಹಾಕಲಿಕ್ಕಾಗಿ ಇವನು ಉದ್ದೇಶಿಸುತ್ತಾನೆ" (7:110, 111). "ಮೂಸಾ ನಬಿಯನ್ನು ನಂಬಿದವರೊಡನೆ ಫಿರ್‌ಔನ್ ಹೇಳಿದನು: ನಿಮಗೆ ನಾನು ಅನುಮತಿ ನೀಡುವ ಮೊದಲೇ ನೀವು ಅವನನ್ನು

ನಂಬಿದ್ದೀರೋ? ನಿಶ್ಚಯವಾಗಿಯೂ ಈ ನಗರದಿಂದ ಇಲ್ಲಿನ ನಿವಾಸಿಗಳನ್ನು ಹೊರಹಾಕಲಿಕ್ಕಾಗಿ ನೀವು ಹೂಡಿದ ಒಂದು ತಂತ್ರವಾಗಿದೆ ಇದು. ಅದರ ಫಲ ಶ್ರುತಿ ದಿಟವಾಗಿಯೂ ನೀವು ತಿಳಿಯುವಿರಿ. ನಾನು ನಿಮ್ಮ ಕೈಕಾಲುಗಳನ್ನು ತುಂಡರಿಸಿದ ಬಳಿಕ ನಿಮ್ಮನ್ನೆಲ್ಲಾ ಶಿಲುಬೆಗೇರಿಸಿ ಕೊಲ್ಲುವೆನು" (7:124,125). "ಫಿರ್ ಔನನ ಜನತೆಯ ಮುಖಂಡರು (ಫಿರ್‌ಔನನೊಡನೆ) ಹೇಳಿದರು: ನೀನು ಮೂಸಾನನ್ನೂ ಅವನ ಅನುಯಾಯಿ ಗಳನ್ನೂ ರಾಜ್ಯದಲ್ಲಿ ಕಲಹವನ್ನುಂಟುಮಾಡಲಿಕ್ಕೂ ನಿನ್ನನ್ನು ಮತ್ತು ನಿನ್ನ ದೈವಗಳನ್ನು ಉಪೇಕ್ಷಿಸಲಿಕ್ಕೂ ಬಿಡು ವೆಯಾ? ಫಿರ್‌ಔನ್ ಹೇಳಿದನು: ಅವರ ಗಂಡು ಸಂತಾನ ಗಳನ್ನು ನಾವು ಕೊಂದು ಸ್ತ್ರೀಯರನ್ನು ಮಾತ್ರ ಬಾಕಿ ಯುಳಿಸುವೆವು. ನಿಶ್ಚಯವಾಗಿಯೂ ನಾವು ಅವರ ಮೇಲಧಿಕಾರಸ್ಥರು" (7:128). "ಅವರಿಗೆ ಆಪತ್ತೇನಾ ದರೂ ಬಂದರೆ ಅದು ಮೂಸಾ ಮತ್ತು ಆತನ ಸಂಗಡಿಗರ ಕಾರಣದಿಂದ ಆಯಿತೆಂದು ಅವರು ಹೇಳುತ್ತಿದ್ದರು" (7:132). "ಅವರು ಹೇಳಿದರು: ನೀನು ನಮ್ಮನ್ನು ವಶೀಕರಿಸಲಿಕ್ಕಾಗಿ ಯಾವ ಸೂಚಕಕಾರ್ಯವನ್ನು ತೋ ರಿಸಿದರೂ ನಾವು ನಿನ್ನನ್ನು ನಂಬಲಾರೆವು" (7:133) "ಇದು ಸ್ಪಷ್ಟವಾದ ಮಾಯಾಜಾಲವಾಗಿದೆ... ನಮ್ಮ ಪೂರ್ವಿಕರನ್ನು ಯಾವ ರೀತಿಯಲ್ಲಿ ನಾವು ಕಂಡಿದ್ದೇವೋ ಅದರಿಂದ ನಮ್ಮನ್ನು ವಿಮುಖರನ್ನಾಗಿ ಮಾಡಲಿಕ್ಕೂ ನಿಮಗೀರ್ವರಿಗೆ (ಮೂಸಾ, ಹಾರೂನ್) ರಾಜ್ಯದಲ್ಲಿ ನಾಯಕತ್ವ ಲಭಿಸಲಿಕ್ಕೂ ಅಲ್ಲವೇ ನೀವು ನಮ್ಮ ಬಳಿಗೆ ಬಂದಿರುವುದು. ನೀವಿಬ್ಬರನ್ನೂ ನಾವು ನಂಬಲಿಕ್ಕಿಲ್ಲ." (10:77,79). "ಫಿರ್‌ಔನ್ ಹೇಳಿದನು: ಓ ಮೂಸಾ ಖಂಡಿತವಾಗಿಯೂ ನಿನಗೆ ಮಾಟಮಾಡಲಾಗಿದೆಯೆಂದು ನಾನು ಎಣಿಸುತ್ತೇನೆ" (17:102)–ಅಂದರೆ, ಬುದ್ಧಿ ಭ್ರಮೆಯಾಗಿದೆಯೆಂದು. "ಅವರು (ವಿರೋಧಿಗಳು) ಹೇಳಿದರು: ಮೂಸಾ ಮಾಂತ್ರಿಕನೂ ಮಹಾ ಸುಳ್ಳು ಗಾರನೂ ಆಗಿದ್ದಾನೆ" (40:25). "ಅವರು (ಎದು ರಾಳಿಗಳು) ಹೇಳಿದರು: ಅವನ ಜೊತೆಗಿರುವ ವಿಶ್ವಾಸಿ ಗಳ ಪುತ್ರರನ್ನು ಕೊಂದು ಅವರ ಸ್ತ್ರೀಯರನ್ನು ಮಾತ್ರ ಸಜೀವ ಬಿಡಿರಿ... ಫಿರ್‌ಔನ್ ಹೇಳಿದನು: ಮೂಸನನ್ನು ಕೊಲ್ಲಲಿಕ್ಕಾಗಿ ನೀವು ನನ್ನನ್ನು ಬಿಡಿರಿ, ಅವನು ತನ್ನ ದೇವನೊಡನೆ ಪ್ರಾರ್ಥಿಸಲಿ, ಅವನು ನಿಮ್ಮ ಮತವನ್ನು ಪರಿವರ್ತಿಸುವನು ಅಥವಾ ರಾಜ್ಯದಲ್ಲಿ ಕಲಹವನ್ನುಂಟು ಮಾಡುವನೆಂದು ನಾನು ಭಯಪಡುತ್ತೇನೆ". (40:26, 27). "ಅವನು (ಫಿರ್‌ಔನ್) ಹೇಳಿದನು: ಮೂಸ ಒಂದೋ ಮಾಂತ್ರಿಕನು ಅಥವಾ ಹುಚ್ಚನು" (51:40) "ಅವರು (ಮೂಸಾ) ಅವರ ಬಳಿಗೆ ನಮ್ಮ ಕುರುಹುಗಳ ಸಹಿತ ಹೋದಾಗ ಅವರು ನಗೆಯಾಡಿದರು" (43:48) "(ಫಿರ್‌ಔನ್ ಹೇಳಿದನು) ನೀಚನೂ ಸರಿಯಾಗಿ ಮಾತ ನಾಡಲು ಅಶಕ್ತನೂ ಆದ ಇವನಿಗಿಂತ ಉತ್ತಮನು ನಾನಲ್ಲವೇ?" (43:53). ಫಿರ್‌ಔನ್ ಮತ್ತು ಪಕ್ಷ ದವರ ಅಕ್ರಮಕರವಾದ ಈ ಸ್ಥಿತಿಯನ್ನು ಕಂಡಾಗ ಮೂಸಾ (ಅ) ಅವರೊಡನೆ ಹೀಗೆ ಹೇಳಿದರು: "ನಾನು ನನ್ನ ಮತ್ತು ನಿಮ್ಮ ನಾಥನೊಡನೆ, ನೀವು ನನ್ನನ್ನು ಕಲ್ಲೆಸೆದು ಕೊಲ್ಲುವುದರಿಂದ ಅಭಯ ಬೇಡುತ್ತೇನೆ. ನೀವು ನನ್ನನ್ನು ನಂಬುವುದಿಲ್ಲವಾದರೆ ನನ್ನಿಂದ ದೂರ ವಿದ್ದುಕೊಳ್ಳಿರಿ" (44:21,22). ಮೂಸಾನಬಿ ತನ್ನ ಕೈಲಾದಷ್ಟು ಪ್ರಬೋಧಿಸಿದರು, ಜನರನ್ನು ಸತ್ಯದೆಡೆಗೆ ಕರೆದರು. ಆದರೂ ಸಹ, ಕೆಲವರು ಮಾತ್ರ ಅವರನ್ನು ಅಂಗೀಕರಿಸಿದರು. ಖುರ್‌ಆನ್ ಹೇಳುತ್ತದೆ: "ಮೂಸಾ ರನ್ನು ಅವರ ಜನರ ಪೈಕಿ ಕೆಲವು ಯೌವನಸ್ಥರು ಮಾತ್ರ ಅನುಸರಿಸಿದರು; ಫಿರ್‌ಔನ್ ಮತ್ತು ಮುಖಂಡರು ಅವರನ್ನು ಉಪದ್ರವಿಸುವರೆಂದು ಸಹ ಅವರು ಹೆದರಿ ಕೊಂಡಿದ್ದರು" (10:84). "ಅವರ ಪೈಕಿ ಅಧಿಕಾಂಶ ಜನರು ನಂಬಿರಲಿಲ್ಲ" (26:68).

## ಈಸಾನಬಿ (ಪ್ರವಾದಿ ಯೇಸು)

ಇಸ್ರಾಯೇಲರಿಗೆ ಪ್ರವಾದಿಯಾಗಿ ಆಗಮಿಸಿದ ಹಝ್ರತ್ ಈಸಾನಬಿಯನ್ನು ಅವರ ಜನರಾದ ಯಹೂದ್ಯರಲ್ಲಿ ಕೆಲವರು ಮಾತ್ರ ನಂಬಿದ್ದರೆಂಬುದು ಐತಿಹಾಸಿಕ ಸತ್ಯವಾಗಿದೆ. ಬಹುಸಂಖ್ಯಾತ ಜನರು ಮತ್ತು ಅವರ ಪಂಡಿತರು ಈಸಾನಬಿಯನ್ನು ವ್ಯಭಿಚಾರ ಪುತ್ರನೆಂದೂ ಸುಳ್ಳು ಪ್ರವಾದಿಯೆಂದೂ ವಿಧಿಸಿ ಅವರು ದೈವಶಾಪಕ್ಕೆ ತುತ್ತಾದ ಒಬ್ಬ ಮಿಥ್ಯಾವಾದಿಯೆಂದು ಮಾಡಲಿಕ್ಕಾಗಿ ಅವರನ್ನು ಶಿಲುಬೆಗೆ ಜಡಿದು ಕೊಲ್ಲಲು ಯತ್ನಿಸಿದರು. ಆದರೆ ಅಲ್ಲಾಹನು ತನ್ನ ವಿಶೇಷವಾದ ಅನುಗ್ರಹದಿಂದ ಅವರೊಡನೆ ಮಾಡಿದ ವಾಗ್ದಾನವನ್ನ ನುಸರಿಸಿ ಶಿಲುಬೆಯ ಮೇಲಿನ ಮರಣದಿಂದ ಅವರನ್ನು ರಕ್ಷಿಸಿದನು.

ಖುರ್‌ಆನ್ ಹೇಳುತ್ತದೆ: "ಅವರ (ಯಹೂದ್ಯರ) ಅವಿಶ್ವಾಸ ನಿಮಿತ್ತ, ಅವರು ಮರಿಯಮ್ ಹೆಸರಿನಲ್ಲಿ ಘೋರ ಅಪರಾಧವನ್ನು ಹೊರಿಸಿದ ನಿಮಿತ್ತ ಮತ್ತು ದೈವದೂತನಾದ ಮಸೀಹ್ ಈಸಬ್ನು ಮರಿಯಮನ್ನು (ಪ್ರವಾದಿ ಯೇಸುವನ್ನು) ತಾವು ಕೊಂದೆವು ಎಂದು ಅವರು ಹೇಳಿದ ನಿಮಿತ್ತ ನಾವು ಅವರನ್ನು ಶಪಿಸಿರುವೆವು" (4:157, 158). ಯಹೂದ್ಯರು ಅವರನ್ನು ಮಸೀಹ್ ಮತ್ತು ದೇವದೂತ ಎಂದು ಹೇಳಿದ್ದು ಅಪಹಾಸ್ಯ ಸ್ವರದಲ್ಲಾಗಿತ್ತು. ಖುರ್‌ಆನ್ ಇನ್ನೊಂದೆಡೆಯಲ್ಲಿ ಹೀಗೆ ಹೇಳುತ್ತದೆ: "ಅವರು (ಯಹೂದ್ಯರು) ತಂತ್ರ ಪ್ರಯೋಗಿಸಿದರು (ಈಸಾನಬಿಯನ್ನು ವಧಿಸಲಿಕ್ಕಾಗಿ). ಅಲ್ಲಾಹನು ಸಹ ಪ್ರತಿ ತಂತ್ರ ಪ್ರಯೋಗಿಸಿದನು" (3 : 55). ಅಂದರೆ, ಯಹೂದ್ಯರ ಮೋಸವನ್ನು ಅಲ್ಲಾಹನು ವಿಫಲಗೊಳಿಸಿ ಈಸಾನಬಿಯನ್ನು ರಕ್ಷಿಸಿದನು. ಅವರ ತಿರಸ್ಕಾರ ಭಾವನೆಯನ್ನು ಈಸಾನಬಿ ಮನವರಿತಾಗ ಹೀಗೆ ಹೇಳಿದರು: "ದೈವ ಮಾರ್ಗದಲ್ಲಿ ನನಗೆ ಸಹಾಯಕರು ಯಾರು?" (3:53). "ಇದರ ಸಂಬಂಧಿಸಿ ಈಸಾನಬಿಯೊಡನೆ ಅಲ್ಲಾಹು ಹೇಳುತ್ತಾನೆ: ಇಸ್ರಾಯೇಲ್ ಸಂತತಿಗಳಿಂದ ನಾನು ನಿನ್ನನ್ನು ರಕ್ಷಿಸಿದ್ದನ್ನು ಜ್ಞಾಪಿಸು; ನೀನು ಅವರ ಬಳಿಗೆ ಸ್ಪಷ್ಟವಾದ ಪುರಾವೆಗಳ ಸಹಿತ ಹೋದಾಗ ಅವರ ಪೈಕಿ ನಿರಾಕರಿಸಿದವರು ಹೇಳಿದರು: ಖಂಡಿತವಾಗಿಯೂ ಇದು ಸ್ಪಷ್ಟವಾದ ಮೋಸಗಾರಿಕೆಯಾಗಿದೆ" (5:111). ಯಹೂದ್ಯರು ಅವರನ್ನು ಆಕ್ಷೇಪಿಸುತ್ತಾ ವಧಿಸಲಿಕ್ಕೆ ಪ್ರಯತ್ನಿಸಿದಾಗ ಸ್ವದೇಶ ಬಿಡಲು ಅವರು ನಿರ್ಬಂಧಿತರಾದರು; ಅಲ್ಲಾಹು ಅವರನ್ನು ರಕ್ಷಿಸಿದನು. ಹಾಗೆ ಅವರು ಪೆಲಸ್ತೀನದಿಂದ ಪಲಾಯನ ಮಾಡಿ ಪೂರ್ವ ದೇಶಗಳ ಕಡೆಗೆ ಯಾತ್ರೆ ಹೊರಟರು. ಅದರ ಕುರಿತು ಅಲ್ಲಾಹು ಹೀಗೆ ಹೇಳುತ್ತಾನೆ: "ನಾವು ಇಬ್ನು ಮರಿಯಮನ್ನೂ (ಈಸಾನಬಿಯನ್ನು) ಅವರ ಮಾತೆಯನ್ನೂ ಒಂದು ಕುರುಹನ್ನಾಗಿ ಮಾಡಿ ಅವರೀರ್ವರಿಗೂ ವಾಸಯೋಗ್ಯ ಹಾಗೂ ಶುದ್ಧಜಲದಿಂದ ಕೂಡಿದ ಒಂದು ಉನ್ನತ ಪ್ರದೇಶದಲ್ಲಿ ಅಭಯ ನೀಡಿದೆವು" (23:51). ಇದರಲ್ಲಿ ಹೇಳಿದ ಉನ್ನತ ಪ್ರದೇಶ (ರಬುವತ್) ಕಾಶ್ಮೀರವೆಂದು ಇಂದು ಸಾಬೀತಾದ ಒಂದು ಸತ್ಯಸಂಗತಿಯಾಗಿದೆ. ಈಸಾನಬಿ ಪ್ರಬೋಧಿಸಬೇಕಾಗಿದ್ದ ಬನೀ ಇಸ್ರಾಯೀಲ್ ಜನಾಂಗದ ಒಂದು ದೊಡ್ಡ ಪಾಲು ಜನರು ಈಸಾನಬಿ ಆವಿರ್ಭವಿಸುವುದಕ್ಕಿಂತ ಕೆಲವು ನೂರು ವರ್ಷಗಳ ಮೊದಲು ಕಾಶ್ಮೀರ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬಂದು ನೆಲೆಸಿದ್ದರೆಂದು ಚರಿತ್ರೆಯಿಂದ ತಿಳಿದು ಬರುತ್ತದೆ. ಅವರೀರ್ವರಿಗೂ ಅಭಯ ನೀಡಲಾಯಿತೆಂದು ಖುರ್‌ಆನಿನಲ್ಲಿ ಹೇಳಿರುವುದರಿಂದ ಅವರಿಗೆ ಆಪತ್ಕರವಾದ ಪರಿಸ್ಥಿತಿಯನ್ನು ಎದುರಿಸಬೇಕಾಗಿ ಬಂದಿತ್ತೆಂದೂ ಅದರಿಂದ ಅವರನ್ನು ರಕ್ಷಿಸಿ ಈ ಅಭಯ ನೀಡಲಾಗಿತ್ತೆಂದೂ ವ್ಯಕ್ತವಾಗುತ್ತದೆ. ಪುತ್ರನಿಗೆ ಎದುರಿಸಬೇಕಾಗಿ ಬಂದಿದ್ದ ವಿಪತ್ತು ಮಾತೆಗೂ ವಿಪತ್ತೆಂಬುದು ಸ್ಪಷ್ಟವಷ್ಟೇ. ಆ ವಿಪತ್ತು, ಈಸಾನಬಿಯನ್ನು ಶಿಲುಬೆಗೇರಿಸಿ ಕೊಲ್ಲಲು ಯಹೂದ್ಯರು ಯತ್ನಿಸಿದ, ಮೇಲೆ ಹೇಳಿದ ಸಂಚು ಅಲ್ಲದೆ ಬೇರೇನೂ ಅಲ್ಲ.

ಕ್ರೈಸ್ತರ ಸುವಾರ್ತೆಗಳು ಸಹ ಈ ವಸ್ತುಸ್ಥಿತಿಯನ್ನು ಮನದಟ್ಟು ಮಾಡಿಕೊಡುತ್ತವೆ. ಯಹೂದ್ಯರಲ್ಲಿ ಹೆಚ್ಚಿನವರು ಅವರನ್ನು ಜರೆದು ಸುಳ್ಳುವಾದಿಯೆಂದು ಸಮರ್ಥಿಸಲಿಕ್ಕೆ ಯತ್ನಿಸಿದ್ದರು; ಮಾತ್ರವಲ್ಲ, ಅವರನ್ನು ಶಿಲುಬೆಗೇರಿಸಿ ಕೊಲ್ಲಲಿಕ್ಕೂ ಆ ಮೂಲಕ ಅವರನ್ನು ಶಾಪಗ್ರಸ್ತನೆಂದು ರುಜುಪಡಿಸಲಿಕ್ಕೂ ಹಲವು ರೀತಿಯಲ್ಲಿ ಪರಿಶ್ರಮಿಸಿದ್ದರು. ಅವರ ತಲೆಯ ಮೇಲೆ ಮುಳ್ಳಿನ ಕಿರೀಟವನ್ನಿಟ್ಟು ಯಹೂದ್ಯರ ರಾಜನೆಂದು ಆರ್ಭಟಿಸಿ ಅಪಹಾಸ್ಯ ಮಾಡಿದರು. ಇತರರನ್ನು ರಕ್ಷಿಸಲಿಕ್ಕೆ ಬಂದ ನಿನಗೆ ಸ್ವಯಂ ರಕ್ಷೆ ಹೊಂದಲು ಸಾಧ್ಯವಾಗುವುದಿಲ್ಲ ಅಲ್ಲವೇ ಎಂದು ಹೀನೈಸಿದರು. ಅವರನ್ನು ನಂಬಿದವರ ಕುರಿತು ಯೆಹೂದ್ಯ ಮತಪಂಡಿತರು ಹೇಳಿದ್ದು ಅವರು ಧರ್ಮದ ಕುರಿತು ಪರಿಜ್ಞಾನವಿಲ್ಲದವರೂ, ಶಾಪಗ್ರಸ್ತರೆಂದೂ ಆಗಿತ್ತು. ಅವರು ಹೇಳಿದರು : "ನೀವೂ ಮರುಳಾದಿರಾ? ಹಿರೀಸಭೆಯವರಲ್ಲಿಯಾಗಲಿ ಫರಿಸಾಯರಲ್ಲಿಯಾಗಲಿ ಯಾರಾದರೂ ಅವನನ್ನು ನಂಬಿದ್ದಾರೋ? ಧರ್ಮಶಾಸ್ತ್ರವನ್ನರಿಯದಂಥ ಈ ಹಿಂಡು ಶಾಪಗ್ರಸ್ತವಾದದ್ದೇ" (ಯೋಹಾನ 7 : 49)

ಮಾತ್ರವಲ್ಲ, ಈಸಾನಬಿಯ ಅನುಯಾಯಿಗಳನ್ನು ಪ್ರಾರ್ಥನಾಲಯದಲ್ಲಿ ಪ್ರಾರ್ಥನೆ ನಡೆಸಲಿಕ್ಕೆ ಯಹೂದ್ಯ ಮತಪಂಡಿತರೂ ಅವರ ಸಿಬ್ಬಂಧಿಗಳೂ ಅನುಮತಿಸುತ್ತಿರಲಿಲ್ಲ. ಸುವಾರ್ತೆ ಹೇಳುತ್ತದೆ: "ಯಾರಾದರೂ ಯೇಸುವನ್ನು (ಈಸಾನಬಿಯನ್ನು) ಕ್ರಿಸ್ತ (ಮಸೀಹ್)ನೆಂದು

ಒಪ್ಪಿಕೊಂಡು ಹೇಳಿದರೆ ಅಂಥವನಿಗೆ ಪ್ರಾರ್ಥನಾಲಯದಲ್ಲಿ ಬಹಿಷ್ಕಾರ ಹಾಕಬೇಕೆಂದು ಯೆಹೂದ್ಯರು ಅದಕ್ಕೆ ಮುಂಚೆ ಗೊತ್ತುಮಾಡಿಕೊಂಡಿದ್ದರು." (ಯೋಹಾನ 9 : 23).

ಇಷ್ಟು ಮಾತ್ರವಲ್ಲ. ಯೆಹೂದ್ಯ ಪಂಡಿತರೂ ಪುರೋಹಿತರೂ ಒಂದು ಕಡೆ ಈಸಾನಬಿಯು ಕುರಿತು ಅವರು ಅಂದಿನ ಆಡಳಿತೆಯ ಶತ್ರುವೆಂದು ಹೇಳಿಕೊಂಡು ಆಡಳಿತಾಧಿಕಾರಿಗಳು ಅವರ ವಿರುದ್ಧವಾಗಿ ಕ್ರಮ ಕೈಗೊಳ್ಳುವಂತೆ ಹಲವು ರೀತಿಯಲ್ಲಿ ಪ್ರಯತ್ನಿಸಿದರೆ, ಇನ್ನೊಂದು ಕಡೆಯಲ್ಲಿ ಅವರು ತೌರಾತಿ (ಹಳೆ ಒಡಂಬಡಿಕೆ)ನ ವಿಧಿಗಳಿಗೆ ವಿರುದ್ಧವಾಗಿ, ರಾಜ್ಯಾಡಳಿತೆಯ ನಿಯಮಗಳನ್ನು ಅನುಸರಿಸಲಿಕ್ಕೆ ಉಪದೇಶಿಸುತ್ತಾರೆಂದು ಹೇಳಿ ಜನಸಾಮಾನ್ಯರನ್ನು ಈಸಾನಬಿಯ ವಿರುದ್ಧವಾಗಿ ವರ್ತಿಸುವಂತೆ ಯತ್ನಿಸಿದ್ದರು.

## ಮುಹಮ್ಮದ್ ಪೈಗಂಬರ್

ಇನ್ನು, ಪ್ರವಾದಿ ಪ್ರಭು ಹಾಗೂ ಖಾತಮುನ್ನಬಿಯೀನ್ ಆದ ಮುಹಮ್ಮದ್ ನಬಿ(ಸ) ಅವರ ಕುರಿತು ಶತ್ರುಗಳ ವರ್ತನೆ ಯಾವ ರೀತಿಯಲ್ಲಾಗಿತ್ತೆಂದು ನೋಡೋಣ. ಅವರ ರಾಜ್ಯದವರಾದ ಮಕ್ಕಾ ನಿವಾಸಿಗಳು ಅವರನ್ನು ಸುಳ್ಳುವಾದಿಯೆಂದು ವಿಧಿಸಿದರು. ಅವರನ್ನೂ ಶಿಷ್ಯವೃಂದವನ್ನೂ ವಿವರಿಸಲಸಾಧ್ಯವಾದ ಯಾತನೆಗಳಿಗೂ ಅತಿ ಭಯಾನಕವಾದ ಹಿಂಸೆಗಳಿಗೂ ಗುರಿಪಡಿಸಿದರು. ಅವರ ತೇಜಃಪುಂಜ ಮುಖವನ್ನು ನೋಡಿ ಅವರು ಮಹಾ ಸುಳ್ಳುಗಾರನೆಂದೂ ನೀಚನೆಂದೂ ಹುಚ್ಚನೆಂದೂ ಮಾಟಮಾಡಲ್ಪಟ್ಟವನೆಂದೂ ಇತ್ಯಾದಿಯಾಗಿ ಅವಹೇಳನ ಮಾಡುತ್ತಿದ್ದರು. ಆ ಜನರಲ್ಲಿದ್ದ ಮುಖಂಡರೂ ಹೆಚ್ಚು ತಿಳುವಳಿಕೆಯಿದ್ದ ಮತ್ತು ಪದವಿ ಗಳಿಸಿದ್ದ ನೇತಾರರೂ ಈ ವಿಷಯದಲ್ಲಿ ಹೆಚ್ಚು ಕ್ರಿಯಾಶೀಲರಾಗಿದ್ದರು. ಆ ಸತ್ಯಾತ್ಮ ತನ್ನ ಶತ್ರುಗಳ ಭಯಂಕರ ವಿರೋಧ ಸಹಿಸಲಸಾಧ್ಯವಾದ ಹಂತವನ್ನು ತಲಪಿದಾಗ, ದೈವಾಜ್ಞೆಯನುಸಾರ ತನ್ನ ಪ್ರೀತಿಯ ಊರನ್ನು ಬಿಟ್ಟು ಮದೀನಕ್ಕೆ ಹೋಗಿ ಅಭಯ ಪಡೆದರು. ಅಲ್ಲಿ ಅಂದು ಮೂರು ಯೆಹೂದ್ಯ ಗೋತ್ರಗಳಿದ್ದುವು. ಆ ಕಾಲದಲ್ಲಿ ಅರಬಿ ರಾಜ್ಯದಲ್ಲಿ ವಿಗ್ರಹಾರಾಧಕರಿಗಿಂತಲೂ ಕ್ರೈಸ್ತರಿಗಿಂತಲೂ ತಿಳುವಳಿಕೆಯಲ್ಲೂ ನಾಗರಿಕತೆಯಲ್ಲೂ ಸಂಸ್ಕೃತಿಯಲ್ಲೂ ಮೇಲ್ಮಟ್ಟದಲ್ಲಿದ್ದವರು ಯೆಹೂದ್ಯರಾಗಿದ್ದರು. ಅವರ ಧರ್ಮಗ್ರಂಥದಲ್ಲಿ ಪೈಗಂಬರರ ಸಂಬಂಧಿಸಿ ಭವಿಷ್ಯೋಕ್ತಿಗಳು ಒಳಗೊಂಡಿದ್ದುವು. ಆದರೂ ಅವರು ಆ ದಿವ್ಯಾತ್ಮರ ಸತ್ಯತೆಯ ಕುರಿತು ಚಿಂತಿಸಿ ಅವರನ್ನು ಅಂಗೀಕರಿಸುವುದರ ಬದಲು ಸುಳ್ಳುವಾದಿಯೆಂದು ವಿಧಿಸಿದರು. ಮಾತ್ರವಲ್ಲ ಆ ದಿವ್ಯಾತ್ಮರನ್ನೂ ಅನುಚರ ಸಂಘವನ್ನೂ ಮದೀನದಲ್ಲಿ ಸ್ವೈರವಾಗಿ ಮತ್ತು ಸಮಾಧಾನದಿಂದ ಇರಲಿಕ್ಕೆ ಕೂಡ ಬಿಡದೆ ಸಹಿಸಲಸದಳವಾದ ಹಲವು ಕುತಂತ್ರಗಳಲ್ಲೂ ದುರ್ಬೋಧನೆಗಳಲ್ಲೂ ಆ ಯೆಹೂದ್ಯರು ನಿರಂತರ ನಿರತರಾಗಿದ್ದರು. ಅಕ್ರಮಕರವಾದ ಈ ಪ್ರವರ್ತನೆಗಳಿಗೆ ಶಿಕ್ಷೆಯನ್ನು ಅವರು ಅನುಭವಿಸಿದರೂ ಅವರು ಆ ದಿವ್ಯಾತ್ಮನನ್ನು ಅಲ್ಲಾಹನ ಸತ್ಯದೂತನೆಂದು ಅಂಗೀಕರಿಸಲು ಒಪ್ಪಲಿಲ್ಲ. ಅವರ ಈ ವರ್ತನೆಯ ಕುರಿತು ಪೈಗಂಬರರು ಅತೀವ ದುಃಖದಿಂದ ಹೀಗೆ ಪ್ರಸ್ತಾವಿಸಿದ್ದರು: "ಯೆಹೂದ್ಯರಲ್ಲಿ ಹತ್ತು ಮಂದಿಯಾದರೂ ನನ್ನನ್ನು ನಂಬುತ್ತಿದ್ದರೆ ಯೆಹೂದ್ಯ ಜನಾಂಗ ಸಂಪೂರ್ಣ ನನ್ನನ್ನು ನಂಬುತ್ತಿತ್ತು" (ಬುಖಾರಿ). ಅಂದರೆ, ಪಂಡಿತರೂ ಪ್ರಮುಖರೂ ಆಗಿರುವ ಹತ್ತು ಮಂದಿಯಾದರೂ ಆ ಸತ್ಯಾತ್ಮನನ್ನು ನಂಬಿದ್ದರೆ, ಇತರ ಯೆಹೂದ್ಯರೂ ನಂಬುತ್ತಿದ್ದರೆಂದು ತಾತ್ಪರ್ಯ. ಆದರೆ ಅಯ್ಯೋ ಪರಿತಾಪಕರ! ಆ ಪೈಗಂಬರರು, ಪ್ರವಾದಿತ್ವ ನಭೋಮಂಡಲದಲ್ಲಿ ಸೂರ್ಯನಂತೆ ಪ್ರಶೋಭಿಸುತ್ತಿದ್ದ ಒಂದು ಜ್ಯೋತಿರ್ಗೋಳವಾಗಿದ್ದೂ ಸಹ ಪಂಡಿತರೆಂದೂ ವೇದಗ್ರಂಥದ ವಾರೀಸುದಾರರೆಂದೂ ಹೆಮ್ಮೆ ಪಡುತ್ತಿದ್ದ ಆ ಯೆಹೂದ್ಯರು ಅವರನ್ನು ನಂಬಲಿಲ್ಲ!

ಆ ದಿವ್ಯಾತ್ಮನ ಕುರಿತು ಶತ್ರುಗಳು ಏನೆಲ್ಲಾ ಆಕ್ಷೇಪಿಸಿದರೆಂದು ನೋಡೋಣ. ಪವಿತ್ರ ಖುರ್‌ಆನ್ ಹೇಳುತ್ತದೆ : "ಅವರು ನಿನ್ನನ್ನು ಕಾಣುವಾಗ 'ಇವನನ್ನೋ ಅಲ್ಲಾಹು ಪ್ರವಾದಿಯಾಗಿ ಕಳುಹಿಸಿದ್ದು' ಎಂದು ಹೇಳುತ್ತಾ ನಿನ್ನನ್ನು ಅಪಹಾಸ್ಯ ಮಾತ್ರ ಮಾಡುತ್ತಾರೆ" (25 : 42). "ಅಲ್ಲಾಹು ಒಬ್ಬ ಮನುಷ್ಯನನ್ನೋ ದೂತನಾಗಿ ನಿಯೋಗಿಸಿದ್ದು?" (17 : 95). "ಈ ಖುರ್‌ಆನ್ ಎರಡು ಪಟ್ಟಣಗಳ ವ್ಯಕ್ತಿಗಳಲ್ಲಿ ಪ್ರಮುಖನಾದ ಒಬ್ಬನಿಗೆ ಯಾಕೆ ಅವತೀರ್ಣವಾಗಲಿಲ್ಲ?" (43 : 31) ಅಂದರೆ, ಖುರ್‌ಆನ್ ಅಲ್ಲಾಹನಿಂದ ಅವತೀರ್ಣಗೊಳಿಸಲ್ಪಟ್ಟಿದ್ದರೆ "ಮಕ್ಕಾ, ತಾಇಫ್" ಎಂಬೀ

ಪಟ್ಟಣಗಳ ನಿವಾಸಿಗಳ ಪೈಕಿ ಕೀರ್ತಿಶಾಲಿಯಾದ ಯಾವನಾದರೊಬ್ಬ ಪ್ರಮುಖ ವ್ಯಕ್ತಿಗೆ ಅವತೀರ್ಣಗೊಳ್ಳಬೇಕಾಗಿತ್ತಲ್ಲವೇ; ಖ್ಯಾತಿಯಾಗಲಿ ಯೋಗ್ಯತೆಯಾಗಲಿ ಇಲ್ಲದ ಒಬ್ಬನಿಗೆ ಅವತೀರ್ಣಗೊಂಡಿತು ಎಂಬುದೇ ಅದು ದೇವನ ಕಡೆಯದ್ದಲ್ಲವೆಂಬುದಕ್ಕೆ ಪುರಾವೆಯಷ್ಟೆ!– ಇದಾಗಿತ್ತು ಅವರ ಆಕ್ಷೇಪದ ಉದ್ದೇಶ. ಪೈಗಂಬರರನ್ನು ಹೀನೈಸುತ್ತಾ ಅವರು ಹೀಗೆ ಹೇಳಿದರು: "ಓ ತನಗೆ ಉಪದೇಶ ಗ್ರಂಥ ಅವತೀರ್ಣವಾಗಿದೆಯೆಂದು ವಾದಿಸುವವನೇ, ನಿಶ್ಚಯವಾಗಿಯೂ ನೀನೊಬ್ಬ ಹುಚ್ಚನಾಗಿರುವೆ. ನೀನು ಸತ್ಯವಾದಿಯಾಗಿದ್ದರೆ ನಮ್ಮ ಬಳಿಗೆ ದೇವಚರರನ್ನು (ಮಲಾಯಿಕ್) ಕರೆ ತರಬಾರದೇ?" (15:7, 8). ಖುರ್‌ಆನ್ ಹೇಳುತ್ತದೆ: "ಅವರ ಪೈಕಿ ಒಬ್ಬ ಮುನ್ನೆಚ್ಚರಿಕೆ ನೀಡುವಾತ ಅವರ ಬಳಿಗೆ ಬಂದನೆಂಬ ವಿಚಾರದಲ್ಲಿ ಅವರು ಆಶ್ಚರ್ಯಪಟ್ಟರು. ಆ ಅವಿಶ್ವಾಸಿಗಳು ಹೇಳಿದರು: ಇವನು ಜಾದುಗಾರನೂ ಮಹಾ ಸುಳ್ಳು ನುಡಿಯುವವನೂ ಆಗಿದ್ದಾನೆ...... ಖಂಡಿತವಾಗಿಯೂ ಇದು (ಈ ವಾದ) ಉದ್ದೇಶಪೂರ್ವಕ ನಿರ್ಮಿಸಿದ್ದಾಗಿದೆ. ಈ ಬಗೆಯ ಒಂದು ವಾದವನ್ನು ಮುಂಚಿನ ಮತಗಳಲ್ಲಿ ನಾವು ಕೇಳಿಲ್ಲ. ನಿಶ್ಚಯವಾಗಿಯೂ ಇದು ಕೃತ್ರಿಮವಲ್ಲದೆ ಬೇರೇನೂ ಅಲ್ಲ. ನಮ್ಮ ಪೈಕಿ ಇವನಿಗೋ ಪ್ರಬೋಧನ ಗ್ರಂಥ ಅವತೀರ್ಣವಾದದ್ದು?" (38:5-9). ಆ ಅವಿಶ್ವಾಸಿಗಳು ಪೈಗಂಬರರನ್ನು ಹೀಗೆ ಸಹ ಆಕ್ಷೇಪಿಸಿದರು: "ಇವನು ನಿಮ್ಮಂತಹ ಒಬ್ಬ ಮನುಷ್ಯನು ಮಾತ್ರವಲ್ಲವೇ? ಆದರೂ ತಿಳಿದುಕೊಂಡು ನೀವು ಈ ಜಾಲ ವಿದ್ಯೆಯನ್ನು ಅಂಗೀಕರಿಸುವುದೇ?...... ಮಾತ್ರವಲ್ಲ, ಅವರು ಹೇಳಿದರು: ಇದು (ಖುರ್‌ಆನ್) ಕಂಗೆಡಿಸುವ ಸ್ವಪ್ನಗಳಂತಿವೆ. ಅಲ್ಲ, ಅವನು ಅದನ್ನು ಕೃತ್ರಿಮವಾಗಿ ರಚಿಸಿದ್ದಾನೆ. ಮಾತ್ರವಲ್ಲ ಅವನೊಬ್ಬ ಕವಿ ಸಹ. (ಸುಳ್ಳು ಮತ್ತು ಮೋಹಕ ಮಾತುಗಳನ್ನಾಡಿ ಮರುಳುಗೊಳಿಸುವವನು). ಪೂರ್ವಿಕ ಪ್ರವಾದಿಗಳು ಕುರುಹು ಸಮೇತ ಕಳುಹಿಸಲ್ಪಟ್ಟಂತೆ ಇವನು ಸಹ ನಮಗಾಗಿ ಒಂದು ಕುರುಹನ್ನು ತರಲಿ" (21:4,6). ಪವಿತ್ರ ಖುರ್‌ಆನಿನ ಕುರಿತು ಆ ವಿರೋಧಿಗಳು ಹೇಳಿದರು: ನಾವು "ಉದ್ದೇಶಿಸಿದ್ದರೆ ಇದೇ ರೀತಿ ನಾವು ಸಹ ಹೇಳುತ್ತಿದ್ದೇವು. ಖಂಡಿತವಾಗಿಯೂ ಇದು ಪೂರ್ವಿಕರ ಕಟ್ಟುಕತೆಗಳು ಮಾತ್ರ" (8:32). ಪೈಗಂಬರರ ಕುರಿತು ಅವರು ಹೇಳಿದರು: "ಅವನಿಗೆ ತನ್ನ ನಾಥನಿಂದ ಒಂದು ಚಿಹ್ನೆ ಯಾಕೆ ಕಳುಹಿಸಲ್ಪಡಲಿಲ್ಲ" (6:38). ನಂಬಬೇಕಾದರೆ, ಅವರು ಅಸಂಭವನೀಯ ಕೆಲವು ಉಪಾಧಿಗಳನ್ನು ಪೈಗಂಬರರ ಮುಂದಿಟ್ಟಿದ್ದರು. ಆ ಬಗ್ಗೆ ಖುರ್‌ಆನ್ ಹೇಳುತ್ತದೆ: "ನೀನು ನಮಗೆ ಭೂಮಿಯಿಂದ ಒಸರನ್ನು ಹರಿಸಿ ತೋರಿಸದ ಹೊರತು ಖಂಡಿತವಾಗಿಯೂ ನಾವು ನಿಮ್ಮನ್ನು ನಂಬಲಿಕ್ಕಿಲ್ಲ; ಅಲ್ಲದಿದ್ದರೆ ನಿನಗೆ ಖರ್ಜೂರ ಮತ್ತು ದ್ರಾಕ್ಷೆಯ ಒಂದು ತೋಟವಿದ್ದು, ಅದರ ಮಧ್ಯದಿಂದ ಹೊಳೆಯೊಂದು ಹರಿಯಬೇಕು; ಅಲ್ಲದಿದ್ದರೆ ನೀನು ನುಡಿಯುತ್ತಿರುವಂತೆ ಆಕಾಶ ತುಂಡು ತುಂಡಾಗಿ ನಮ್ಮ ಮೇಲೆ ಬೀಳುವಂತೆ ಮಾಡು; ಅಲ್ಲದಿದ್ದರೆ, ಅಲ್ಲಾಹನನ್ನೂ ದೇವಚರರನ್ನೂ ಮುಂದೆ ತಂದು ನಿಲ್ಲಿಸು; ಅಲ್ಲದಿದ್ದರೆ, ನಿನಗೆ ಸ್ವರ್ಣ ನಿರ್ಮಿತವಾದ ಒಂದು ಭವನ ಉಂಟಾಗಲಿ; ಅಲ್ಲದಿದ್ದರೆ ನೀನು ಆಕಾಶಾರೋಹಣ ಮಾಡು; ನಾವು ಓದುವಂತಹ ಒಂದು ಗ್ರಂಥವನ್ನು ನೀನು (ಆಕಾಶದಿಂದ) ನಮಗಾಗಿ ತಾರದ ಹೊರತು ನಿನ್ನ ಆಕಾಶಾರೋಹಣವನ್ನು ನಾವು ಒಪ್ಪಲಿಕ್ಕಿಲ್ಲ" (17:91–94), ವಿರೋಧಿಗಳ ಅನ್ಯಾಯಕರವಾದ ಬೇಡಿಕೆಗಳಿಗೆ ಉತ್ತರ ಹೇಳಲು ಅಲ್ಲಾಹು ಪೈಗಂಬರರಿಗೆ ಆದೇಶಿಸಿದ್ದು ಹೀಗೆ: "ಹೇಳು, ನನ್ನ ನಾಥ ಪವಿತ್ರನು; ನಾನಾದರೋ, ಪ್ರವಾದಿಯಾದ ಒಬ್ಬ ಮನುಷ್ಯ ಮಾತ್ರ" (17:94). ಅಲ್ಲಾಹು ನುಡಿಯುತ್ತಾನೆ: "ಅವಿಶ್ವಾಸಿಗಳು ಹೇಳುತ್ತಾರೆ: ಇದು (ಖುರ್‌ಆನ್) ಅವನು (ಮುಹಮ್ಮದ್) ಕೃತ್ರಿಮವಾಗಿ ನಿರ್ಮಿಸಿದ ಸುಳ್ಳು ಕೃತಿ ಮಾತ್ರವಾಗಿದೆ; ಬೇರೆಯವರು ಈ ಕಾರ್ಯದಲ್ಲಿ ಅವನಿಗೆ ನೆರವಿತ್ತಿದ್ದಾರೆ...... ಇದು ಪೂರ್ವಿಕರ ಕಟ್ಟುಕತೆಗಳಾಗಿವೆ. ಅವನ್ನು ಅವನು ಬರೆಸಿದ್ದಾನೆ; ಹಾಗೆ ಪ್ರಭಾತದಲ್ಲೂ ಸಾಯಾಹ್ನದಲ್ಲೂ ಅದನ್ನು ಅವನಿಗೆ ಓದಿ ಹೇಳಲಾಗುತ್ತದೆ...... ಈ ಪ್ರವಾದಿಗೆ ಏನಾಗಿದೆ! ಇವನು ತಿನ್ನುತ್ತಲೂ ಬೀದಿಗಳಲ್ಲಿ ವಿಹರಿಸುತ್ತಲೂ ಇದ್ದಾನಲ್ಲವೇ? ಇವನ ಜತೆಯಲ್ಲಿ ಮುನ್ನೆಚ್ಚರಿಕೆ ನೀಡಲಿಕ್ಕಾಗಿ ಒಬ್ಬ ದೇವಚರನನ್ನು ಕಳುಹಿಸಬಾರದೇ? ಅಲ್ಲದಿದ್ದರೆ ಅವನಿಗೆ ನಿಧಿಯೇನಾದರೂ ಲಭಿಸಬೇಕಿತ್ತಲ್ಲವೇ? ಅದೂ ಅಲ್ಲದಿದ್ದರೆ, ಅವನಿಗೆ ಒಂದು ತೋಟವಿದ್ದು ಅದರಿಂದ ಅವನು ಭಕ್ಷಿಸಬೇಕಿತ್ತಲ್ಲವೇ?

ಆ ಅಕ್ರಮಿಗಳು ಹೇಳಿದರು; (ಓ ಜನರೇ) ಖಂಡಿತವಾಗಿಯೂ ನೀವು ಮಾಟಮಾಡಲಾದ ಒಬ್ಬನನ್ನು ಹಿಂಬಾಲಿಸುತ್ತೀರಿ" (25:5-9). "ತಮಗೆ ಒಂದು ಕುರುಹಾದರೂ ಲಭಿಸಿದ ಪಕ್ಷದಲ್ಲಿ ಖಂಡಿತವಾಗಿಯೂ ತಾವು ಅದನ್ನು ನಂಬುವೆವೆಂದು ಅವರು ಅಲ್ಲಾಹನ ಹೆಸರಿನಲ್ಲಿ ದೃಢಸ್ವರದಲ್ಲಿ ಪ್ರಮಾಣ ಮಾಡಿದರು" (6 : 110). "ನಂತರ ಅವರು ಆತನಿಂದ (ಪೈಗಂಬರರಿಂದ) ಹಿಂತಿರುಗಿ (ಇವನು) ಕಲಿತವನಾದ ಒಬ್ಬ ಹುಚ್ಚ ಎಂದು ಹೇಳಿದರು" (44:15). ಮುಹಮ್ಮದ್ ಪೈಗಂಬರರು ಸುಳ್ಳುವಾದಿಯೆಂದು ಆ ಅವಿಶ್ವಾಸಿಗಳಿಗೆ ಪೂರ್ಣ ವಿಶ್ವಾಸವಿತ್ತೆಂದು ಖುರ್‌ಆನ್ ಮನದಟ್ಟು ಮಾಡಿಕೊಡುತ್ತದೆ. ಅಲ್ಲಾಹು ಹೇಳುತ್ತಾನೆ: "ಅವರು ಹೇಳಿದ್ದನ್ನು ಜ್ಞಾಪಿಸಿರಿ: ಅಲ್ಲಾಹನೇ, ಇದು (ಮುಹಮ್ಮದ್ ಪೈಗಂಬರರ ದೌತ್ಯ) ನಿನ್ನ ಕಡೆಯಿಂದಿರುವ ಸತ್ಯವೇ ಆಗಿದ್ದರೆ ನಮ್ಮ ಮೇಲೆ ಆಕಾಶದಿಂದ ಕಲ್ಲುಗಳ ವೃಷ್ಟಿಯುಂಟಾಗಲಿ, ಅಲ್ಲದಿದ್ದರೆ ನಮಗೆ (ಬೇರೆ ವಿಧದ) ವೇದನಾಜನಕವಾದ ಶಿಕ್ಷೆ ಕೊಡು" (8:33)

ಪವಿತ್ರ ಖುರ್‌ಆನ್ ಮತ್ತು ಪೈಗಂಬರರ ಉಪದೇಶಗಳು ಕಿವಿಕೊಟ್ಟು ಕೇಳಲಿಕ್ಕೂ ಅಂಗೀಕರಿಸಲಿಕ್ಕೂ ಅರ್ಹವಾದುದಲ್ಲವೆಂದು ಅವರು ಎಣಿಸಿದ್ದರು. ಖುರ್‌ಆನ್ ಹೇಳುತ್ತದೆ: "ಅವರಲ್ಲಿ ಬಹುಪಾಲು ಜನರು ಮುಖ ತಿರುಗಿಸಿದರು. ಒಟ್ಟಾರೆ ಅವರು ಕಿವಿಗೊಡುವುದಿಲ್ಲ. ಅವರು ಹೇಳಿದರು: ನೀನು ನಮ್ಮನ್ನು ಯಾವುದರ ಕಡೆಗೆ ಕರೆಯುತ್ತೀಯೋ, ಆ ವಿಷಯದ ಸಂಬಂಧಿಸಿ ನಮ್ಮ ಹೃದಯಗಳು ಮರೆಯಲ್ಲಿವೆ; ನಮ್ಮ ಕಿವಿಗಳಲ್ಲಿ ಕಿವುಡು ಇದೆ. ನಮಗೂ ನಿನಗೂ ಮಧ್ಯೆ ಒಂದು ತಡೆ ಇದೆ. ಒಟ್ಟಿನಲ್ಲಿ ನೀನು ನಿನ್ನ ಪ್ರವರ್ತನೆ ನಡೆಸು. ನಾವು ಸಹ ಪ್ರವರ್ತಿಸುತ್ತೇವೆ" (41:5, 6). ಮಾತ್ರವಲ್ಲ, ಆ ವಿರೋಧಿಗಳು ಪರಸ್ಪರ ಹೀಗೆ ಉಪದೇಶಿಸಿದರು: "ನೀವು ಈ ಖುರ್‌ಆನನ್ನು ಕೇಳಬೇಡಿರಿ; (ಅದು ಓದಲ್ಪಡುವಾಗ) ನೀವು ಗದ್ದಲ ಮಾಡಿರಿ" (14:27). ಪೈಗಂಬರರು ಉಪದೇಶಿಸಿ ಮುಗಿಸಿದಾಗ ಶತ್ರುಗಳು ತಮ್ಮ ಪೈಕಿಯ ತಿಳುವಳಿಕೆ ಇರುವವರೊಡನೆ ವ್ಯಂಗ್ಯ ಸ್ವರದಲ್ಲಿ ಹೀಗೆ ಪ್ರಶ್ನಿಸುತ್ತಿದ್ದರು: "ಅವನು (ಮುಹಮ್ಮದ್) ತುಸು ಮೊದಲು ಹೇಳಿದ್ದು ಏನಾಗಿತ್ತು?" (47:17).

ಇಷ್ಟು ಮಾತ್ರವಲ್ಲ, ಆ ಶತ್ರುಗಳು ಪೈಗಂಬರರನ್ನು ಉಪದ್ರವಿಸಲಿಕ್ಕೆ ಅನೇಕ ಉಪಾಯಗಳನ್ನು ಪ್ರಯೋಗಿಸಿದ್ದರು. ಖುರ್‌ಆನ್ ಹೀಗೆ ಹೇಳುತ್ತದೆ: "ಅವಿಶ್ವಾಸಿಗಳು ನಿನ್ನನ್ನು ಬಂಧಿಸಲಿಕ್ಕೂ ವಧಿಸಲಿಕ್ಕೂ ಹೊರ ಅಟ್ಟಲಿಕ್ಕೂ ಗೂಢಾಲೋಚನೆ ಮಾಡಿದುದರ ಕುರಿತು ಜ್ಞಾಪಿಸು" (8 : 31).

ಹೀಗೆ ಆ ವಿಶ್ವಾಸಿಗಳು ಪೈಗಂಬರರನ್ನೂ ಪೈಗಂಬರರ ದೌತ್ಯವನ್ನೂ ಹಲವು ವಿಧದಲ್ಲಿ ಆಕ್ಷೇಪಿಸುತ್ತಲೂ ಅಪಹಾಸ್ಯ ಮಾಡುತ್ತಲೂ ಇದ್ದರಲ್ಲದೆ ಆ ದಿವ್ಯಾತ್ಮರನ್ನೂ ಅನುಚರರನ್ನೂ ನಾನಾ ವಿಧವಾಗಿ ಉಪದ್ರವಿಸುತ್ತಿದ್ದರು.

ವಿರೋಧಿಗಳ ಆಕ್ಷೇಪಗಳಿಗೆ ಪವಿತ್ರ ಖುರ್‌ಆನಿನ ಅನೇಕ ಕಡೆಗಳಲ್ಲಿ ವಿವಿಧ ರೀತಿಯ ಉತ್ತರ ಕೊಡಲಾಗಿದೆ. ಅಲ್ಲಾಹು ಹೇಳುತ್ತಾನೆ: "ನಿನಗಿಂತ ಮೊದಲಿನ ಪ್ರವಾದಿಗಳ ಕುರಿತು ಹೇಳಲಾದ ಆಕ್ಷೇಪಗಳ ಹೊರತು ಬೇರೇನೂ ನಿನ್ನ ಸಂಬಂಧಿಸಿ ಹೇಳಲಾಗಿಲ್ಲ" (41:44). "ಇವರಿಗೆ ಮುಂಚಿನ ಜನರ ಬಳಿಗೆ, ಐಂದ್ರಜಾಲಿಕನೆಂದೂ ಹುಚ್ಚನೆಂದೂ ಅವರು ಆಕ್ಷೇಪಿಸದೆ ಒಬ್ಬ ಪ್ರವಾದಿಯೂ ಬಂದಿರಲಿಲ್ಲ. ಅವರು ಹೀಗೆ (ಎಲ್ಲಾ ಪ್ರವಾದಿಗಳನ್ನು ಸಹ ಆಕ್ಷೇಪಿಸಬೇಕೆಂದು) ತಲತಲಾಂತರವಾಗಿ ಉಪದೇಶಿಸಿರುವರೇ? ಯಥಾರ್ಥದಲ್ಲಿ ಇವರು ಅತಿಕ್ರಮಕಾರಿಗಳಾಗಿದ್ದಾರೆ" (51:53, 54). "ಅವರು ಆಕ್ಷೇಪಿಸಿ ಹೇಳುವುದು ನಿನಗೆ ದುಃಖವನ್ನುಂಟುಮಾಡುತ್ತದೆಂದು ನಮಗೆ ಗೊತ್ತು. ಆದರೆ ಅವರು ತಿರಸ್ಕರಿಸುವುದು ನಿನ್ನನ್ನಲ್ಲ. ಬದಲಾಗಿ, ಈ ದ್ರೋಹಿಗಳು ಅಲ್ಲಾಹನ ವಚನಗಳನ್ನು ನಿರಾಕರಿಸುತ್ತಾರೆ. ನಿಜವಾಗಿಯೂ ನಿನಗೆ ಮುಂಚೆ ಸಹ ಪ್ರವಾದಿಗಳನ್ನು ಸುಳ್ಳುವಾದಿಗಳೆಂದು ವಿಧಿಸಲಾಗಿತ್ತು. ಆದರೆ ಅವರು ಮಿಥ್ಯಾವಾದಿಗಳೆಂದು ಧಿಕ್ಕರಿಸಲ್ಪಟ್ಟು ಹಿಂಸಿಸಲ್ಪಟ್ಟಿದ್ದರೂ ಸಹ ಅವರು ಅವನ್ನೆಲ್ಲಾ ಸಹಿಸಿದ್ದರು: ಕೊನೆಗೆ ನಮ್ಮ ಸಹಾಯ ಅವರಿಗೆ ಒದಗಿತು. ಅಲ್ಲಾಹನ ವಚನಗಳನ್ನು ಬದಲಾಯಿಸುವವನು ಯಾರೂ ಇಲ್ಲ. ದಿಟವಾಗಿಯೂ ಆ ಪ್ರವಾದಿಗಳ ವೃತ್ತಾಂತ ನಿನಗೂ ಬಂದೊದಗಿದೆ" (6:34, 35). ಇದೇ ಪ್ರಕಾರ ಎಲ್ಲಾ ಪ್ರವಾದಿಗಳಿಗೂ 'ಇನ್ಸ್' ಮತ್ತು 'ಜಿನ್ನ್'ಗಳಿಗೆ ಸೇರಿದ ಸೈತಾನರನ್ನು (ದುಷ್ಟ ವ್ಯಕ್ತಿಗಳನ್ನು) ನಾವು ಶತ್ರುಗಳನ್ನಾಗಿ

ಮಾಡಿದ್ದೇವೆ. (ಜನರನ್ನು) ವಂಚಿಸಲಿಕ್ಕಾಗಿ ಅವರು ಪರಸ್ಪರ ಮೋಹಕ ಮಾತುಗಳನ್ನು ಸೂಚಿಸುತ್ತಾರೆ. ನಿನ್ನ ನಾಥ ಉದ್ದೇಶಿಸಿದ್ದರೆ ಅವರು ಹಾಗೆ ಮಾಡುತ್ತಿರಲಿಲ್ಲ. ಒಟ್ಟಿನಲ್ಲಿ ಅವರನ್ನೂ ಅವರ ಮಿಥ್ಯಾರೋಪಗಳನ್ನೂ ನೀನು ಅಲಕ್ಷ್ಯ ಮಾಡಿಬಿಡು" (6:113). "ಇವರು ನಿನ್ನನ್ನು ಸುಳ್ಳುವಾದಿಯೆಂದು ತಳ್ಳಿ ಬಿಟ್ಟರೆ (ಆ ಬಗ್ಗೆ ಆಶ್ಚರ್ಯಪಡಬೇಕಾಗಿಲ್ಲ. ಏಕೆಂದರೆ) ಇವರಿಗಿಂತ ಮೊದಲು ನೂಹನ ಜನಾಂಗವೂ, ಆದ್, ಸಮೂದ್ ಜನಾಂಗಗಳೂ ಇಬ್ರಾಹಿಮ್ ಮತ್ತು ಲೂತ್ ಅವರ ಜನಾಂಗಗಳೂ ಮದ್‌ಯನದವರೂ (ತಮ್ಮ ಪ್ರವಾದಿಗಳನ್ನು) ಮಿಥ್ಯಾವಾದಿಗಳೆಂದು ತೆಗಳಿದ್ದರು. ಮೂಸಾನನ್ನು ಸಹ ಸುಳ್ಳುವಾದಿಯೆಂದು ಆಪಾದಿಸಲಾಗಿತ್ತು. ಆ ಅವಿಶ್ವಾಸಿಗಳಿಗೆ ನಾನು ಕಾಲಾವಧಿ ನೀಡಿದೆನು, ನಂತರ ಅವರನ್ನು ನಾನು ಶಿಕ್ಷೆಗೆ ಗುರಿಪಡಿಸಿದೆನು" (22:43-45). ಇನ್ನೂ ಅಲ್ಲಾಹು ಹೇಳುತ್ತಾನೆ: "ಇವರಿಗಿಂತ ಮುಂಚೆ ನೂಹನ ಜನರು (ಅವರನ್ನು) ಸುಳ್ಳುವಾದಿಯೆಂದು ಆರೋಪಿಸಿದರು; ಅವರ ನಂತರದ ಜನಾಂಗಗಳೂ (ತಮ್ಮ ಪ್ರವಾದಿಗಳನ್ನು ಧಿಕ್ಕರಿಸಿದರು). ಪ್ರತಿಯೊಂದು ಜನಾಂಗವೂ ತಮ್ಮ ಪ್ರವಾದಿಯನ್ನು ಆಕ್ರಮಿಸಲು ಪ್ರಯತ್ನಿಸುತ್ತಲೂ ಸತ್ಯವನ್ನು ಖಂಡಿಸಲಿಕ್ಕಾಗಿ ಕುತರ್ಕ ಮಾಡುತ್ತಲೂ ಇದ್ದರು. ಆ ಬಳಿಕ ನಾನು ಅವರನ್ನು ಶಿಕ್ಷಿಸಿದೆನು. ನನ್ನ ಆ ಪ್ರತಿಕ್ರಿಯೆ ಯಾವ ರೀತಿಯದ್ದಾಗಿತ್ತು?" (40:6). "ಮನುಷ್ಯರ ನಿರ್ಭಾಗ್ಯ! ಅವರಿಂದ ಅಪಹಾಸ್ಯಕ್ಕೆ ತುತ್ತಾಗದೆ ಯಾವ ಪ್ರವಾದಿಯೂ ಅವರ ಬಳಿಗೆ ಬರುವುದಿಲ್ಲ" (36:31). "ಇದೇ ಪ್ರಕಾರವೇ ನಿನಗಿಂತ ಮುಂಚೆ ಯಾವ ರಾಜ್ಯದಲ್ಲೂ ಯಾವ ಪ್ರವಾದಿಯನ್ನೂ ನಾವು ಕಳುಹಿಸಲಿಲ್ಲ – ಅಲ್ಲಿನ ಮುಖಂಡರು ಹೀಗೆ ಹೇಳದ ಹೊರತು: 'ನಾವು ನಮ್ಮ ಪೂರ್ವಿಕರನ್ನು ಒಂದು ಮಾರ್ಗದಲ್ಲಿ ಕಂಡಿದ್ದೇವೆ; ನಾವು ಅವರ ಹೆಜ್ಜೆಗಳನ್ನು ಹಿಂಬಾಲಿಸಿ ನಡೆಯುವೆವು'" (43 : 24).

ಅವಿಶ್ವಾಸಿಗಳ ಸ್ಥಿತಿಯ ಬಗ್ಗೆ ಅಲ್ಲಾಹು ಹೇಳುತ್ತಾನೆ: "ನಮ್ಮ ವಚನಗಳನ್ನು ಅವನಿಗೆ ಓದಿ ಹೇಳುವಾಗ ಅದು ಕೇಳಿಸಿಲ್ಲವೆಂಬಂತೆ ಅಹಂಭಾವದಿಂದ ಅವನು ಮುಖ ತಿರುಗಿಸುತ್ತಾನೆ. ಅವನ ಎರಡು ಕಿವಿಗಳಲ್ಲೂ ತಡೆಯಿರುವಂತೆ ಭಾಸವಾಗುತ್ತದೆ" (31:8).

ಪ್ರವಾದಿಗಳನ್ನು ತಿರಸ್ಕರಿಸುವ ವಿಷಯದಲ್ಲಿ ಸದಾ ಮುಂಚೂಣಿಯಲ್ಲಿ ನಿಂತವರು ಪಂಡಿತರೂ ಮೌಲಾನಾಗಳೂ ಆಗಿದ್ದರೆಂಬ ವಿಚಾರವನ್ನು ಸಹ ಪವಿತ್ರ ಖುರ್‌ಆನ್ ತಿಳಿಸಿಕೊಡುತ್ತದೆ. ಆ ಪವಿತ್ರ ಗ್ರಂಥ ಹೀಗೆ ಹೇಳುತ್ತದೆ: "ಅವರ ಬಳಿಗೆ ಪ್ರವಾದಿಗಳು ಸ್ಪಷ್ಟವಾದ ಪುರಾವೆಗಳ ಸಹಿತ ಆಗಮಿಸಿದಾಗ ಅವರು ತಮಗಿದ್ದ ತಿಳುವಳಿಕೆಯ ಬಗ್ಗೆ ಅಹಂಭಾವ ತೋರಿಸಿದರು:" (40:84). "ನಾವು ಅವರಿಗೆ ಈ ವಿಷಯಕ್ಕೆ ಸಂಬಂಧಪಟ್ಟ ಸ್ಪಷ್ಟ ಕುರುಹುಗಳನ್ನು ನೀಡಿದೆವು. ಅವರಿಗೆ ತಿಳುವಳಿಕೆಯುಂಟಾದ ನಂತರ ಮಾತ್ರವೇ ಅವರು ಪರಸ್ಪರ ಪೈಪೋಟಿ ನಿಮಿತ್ತ ಭಿನ್ನಮತ ಹೊಂದಿದರು." (45:18)

ಜನರು ಪ್ರವಾದಿಗಳನ್ನು ನಂಬದಿರಲಿಕ್ಕೆ ಒಂದು ಕಾರಣ, ಮೊದಲೇ ಅವರು ಸುಳ್ಳುವಾದಿಯೆಂದು ತೀರ್ಮಾನಿಸಿರುವುದೆಂಬ ವಸ್ತು ಸ್ಥಿತಿಯನ್ನು ಸಹ ಖುರ್‌ಆನ್ ಮನದಟ್ಟು ಮಾಡಿಕೊಡುತ್ತದೆ. "ದಿಟವಾಗಿಯೂ, ಅವರ ಪ್ರವಾದಿಗಳು ಸ್ಪಷ್ಟ ಪುರಾವೆಗಳ ಸಹಿತ ಅವರ ಬಳಿಗೆ ಬಂದರು, ಆದರೆ ಮೊದಲೇ (ಪ್ರವಾದಿಗಳನ್ನು) ಅವರು ನಿರಾಕರಿಸಿದ ಕಾರಣದಿಂದ ಅವರಿಗೆ ನಂಬಲಿಕ್ಕಾಗಲಿಲ್ಲ, ಹೀಗೆ ಅಲ್ಲಾಹು ತಿರಸ್ಕರಿಸುವವರ ಹೃದಯದಲ್ಲಿ ಮುದ್ರೆಯಿಡುತ್ತಾನೆ" (7:102). ಅಂದರೆ, ಸತ್ಯ ಪ್ರವಾದಿಗಳ ಸಂಬಂಧಿಸಿ, ಅವರು ಸುಳ್ಳುವಾದಿಗಳೆಂದು ಜನರಿಂದ ತಪ್ಪಾದ ವಿಧಿಯುಂಟಾದರೆ, ನಂತರ ಆ ಪ್ರವಾದಿಗಳ ಸತ್ಯತೆಯ ಕುರಿತು ಚಿಂತನ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ.

ಪವಿತ್ರ ಖುರ್‌ಆನಿನಲ್ಲಿ ಹೆಸರಿಸಲಾದ ಪ್ರವಾದಿಗಳಲ್ಲಿ ಹಲವರ ಶತ್ರುಗಳು ಆ ಪ್ರವಾದಿಗಳ ವಿರುದ್ಧವಾಗಿ ತೋರಿಸಿದ ದುರ್ನೀತಿಯ ಕುರಿತೂ ಹಾಗೆಯೇ ಮುಹಮ್ಮದ್ ಪೈಗಂಬರರ ವೈರಿಗಳು ಆ ದಿವ್ಯಾತ್ಮರ ವಿರುದ್ಧವಾಗಿ ತೋರಿಸಿದ ದುರ್ವರ್ತನೆ ಯಾವ ರೀತಿಯದ್ದಾಗಿತೆಂಬುದರ ಕುರಿತೂ ಮೇಲೆ ವಿವರಿಸಲಾಯಿತಷ್ಟೇ. ಈ ಬಗ್ಗೆ ಪವಿತ್ರ ಖುರ್‌ಆನಿನಲ್ಲಿ ಇನ್ನೂ ಸಹ ಧಾರಾಳ ಪ್ರಸ್ತಾವನೆಗಳಿವೆ. ಅವನ್ನೆಲ್ಲಾ ವಿವರಿಸಲಿಕ್ಕೆ ಸಾಧ್ಯವಿಲ್ಲದಷ್ಟೇ. ಆದರೆ ಮೇಲಿನ ವಿವರಣೆಗಳನ್ನು ಸತ್ಯ ಮತ್ತು ನಿಷ್ಠೆಯಿಂದ ಓದುವ ಯಾರಿಗೂ ಸತ್ಯಪ್ರವಾದಿಗಳಿಗೆ ಜನರಿಂದ ಅನುಭವಿಸಬೇಕಾಗಿ ಬಂದ ಕಷ್ಟ ಏನೆಲ್ಲಾ ಆಗಿತ್ತೆಂದು ಧಾರಾಳವಾಗಿ ಮನದಟ್ಟು

ಮಾಡಿಕೊಳ್ಳಬಹುದು. ಅಲ್ಪಸಂಖ್ಯಾತ ಜನರು ಮಾತ್ರ ಆ ಪ್ರವಾದಿಗಳನ್ನು ನಂಬಿದ್ದರು; ಬಹು ಸಂಖ್ಯಾತ ಜನರು ಅವರನ್ನು ನಿರಾಕರಿಸಿ ಸುಳ್ಳುವಾದಿಗಳೆಂದು ಜರೆದು ತಳ್ಳಿಬಿಟ್ಟಿದ್ದರು. ಮಾತ್ರವಲ್ಲ, ನಿರಾಕರಿಸಿದ ಆ ಬಹುಸಂಖ್ಯೆಯ ಜನರು ಪ್ರವಾದಿಗಳನ್ನೂ ಅವರ ಅನುಚರರನ್ನೂ ಅತ್ಯಂತ ಹೀನಾಯವಾಗಿ ಎದುರಿಸುತ್ತಲೂ ಅವಹೇಳನ ಮಾಡುತ್ತಲೂ ಆಕ್ಷೇಪಿಸುತ್ತಲೂ ಹಲವಿಧ ಕಷ್ಟಗಳಿಗೆ ಅವರನ್ನು ತುತ್ತುಮಾಡಿ ಅವರ ಸಂಘಟನೆಗಳನ್ನು ನಿರ್ಮೂಲ ಮಾಡಲು ತೀವ್ರಯತ್ನ ಮಾಡುತ್ತಲೂ ಇದ್ದರು. ಮುಹಮ್ಮದ್ ಪೈಗಂಬರರ ವಿರುದ್ಧವಾಗಿ ಅವರ ಶತ್ರುಗಳು ಇದೇ ರೀತಿ ವರ್ತಿಸಿದಾಗ ಅಲ್ಲಾಹು ಅವರಿಗೆ ಆಶ್ವಾಸನೆಯಿತ್ತನು. ಎಲ್ಲಾ ಪ್ರವಾದಿಗಳೊಡನೆ ಸಹ ಅವರ ಶತ್ರುಗಳು ಈ ರೀತಿಯಲ್ಲಿ ವರ್ತಿಸಿದ್ದರು; ಆದರೆ ಕೊನೆಗೆ ಆ ಪ್ರವಾದಿಗಳೇ ವಿಜಯಿಗಳಾದರು. ಇದು ಅಲ್ಲಾಹುವಿನ ಅನುಲ್ಲಂಘನೀಯ ನಿಯಮವಾಗಿದೆ. ಮೇಲೆ ಉದ್ಧರಿಸಲಾದ ಖುರ್‌ಆನ್ ವಾಕ್ಯಗಳಿಂದ ಈ ವಸ್ತುಸ್ಥಿತಿ ಸೂರ್ಯಪ್ರಕಾಶದಂತೆ ವ್ಯಕ್ತವಾಗುತ್ತದೆ.

ಮುಹಮ್ಮದ್ ಪೈಗಂಬರರನ್ನು ನಿರಾಕರಿಸಿ ವಿರೋಧಿಸಿದವರು ಪರಾಜಿತರಾಗುವರೆಂದು ಪ್ರಸ್ತಾವಿಸುತ್ತಾ ಅಲ್ಲಾಹು ಹೇಳುತ್ತಾನೆ: "ಅವರು ಅಲ್ಲಾಹನ ಹೆಸರಿನಲ್ಲಿ ದೃಢವಾಗಿ ಪ್ರಮಾಣ ಮಾಡಿ ಹೇಳಿದರು– ತಮ್ಮ ಬಳಿಗೆ ಒಬ್ಬ ಪ್ರವಾದಿ ಆಗಮಿಸಿದರೆ ಬೇರೆ ಯಾವುದೇ ಸಮುದಾಯಕ್ಕಿಂತ ಅಧಿಕವಾಗಿ ಸನ್ಮಾರ್ಗ ಹೊಂದಿದವರಾಗಬಹುದು ತಾವೆಂದು. ಆದರೆ ಅವರ ಬಳಿಗೆ ಪ್ರವಾದಿ ಬಂದಾಗ ಅಹಂಭಾವ ತೋರಿಸಿ ಕುತಂತ್ರಮಾಡಿ ಅವರು ತೀವ್ರ ವಿರಕ್ತಿ ಪ್ರಕಟಿಸಿ ಅಗಲಿ ಹೋದರು. ಕುತಂತ್ರ ಪ್ರಯೋಗದ ವಿಪತ್ತು ಪ್ರಯೋಗಿಸಿದವರನ್ನೇ ಬಾಧಿಸುವುದು ಹೊರತು ಬೇರೆ ಯಾರನ್ನೂ ಅಲ್ಲ. ಅಲ್ಲಾಹನ ನಿಯಮದಲ್ಲಿ ಯಾವ ಬದಲಾವಣೆಯಾಗಲಿ ವ್ಯತ್ಯಾಸವಾಗಲಿ ನೀನು ಕಾಣಲಾರೆ" (35 : 43, 44). ಹಲವು ಪ್ರವಾದಿಗಳ ವೃತ್ತಾಂತಗಳನ್ನು ವಿವರಿಸುತ್ತಾ, ಅವರನ್ನು ಆಕ್ಷೇಪಿಸುತ್ತಲೂ ಉಪದ್ರವಿಸುತ್ತಲೂ, ಅವರು ಪೂರ್ವ ಮತಕ್ಕೆ ಮರಳಿ ಬಾರದಿದ್ದ ಪಕ್ಷದಲ್ಲಿ ಅವರನ್ನು ಸ್ವದೇಶದಿಂದ ಹೊರ ಅಟ್ಟಲಾಗುವುದೆಂದು ಬೆದರಿಕೆ ಹಾಕುತ್ತಲೂ ಇದ್ದ ಶತ್ರುಗಳ ಕುರಿತು ಅಲ್ಲಾಹು ಆ ಪ್ರವಾದಿಗಳೊಡನೆ ಹೀಗೆ ಹೇಳಿದುದಾಗಿ ಖುರ್‌ಆನ್ ಪ್ರಸ್ತಾವಿಸುತ್ತದೆ: "ಖಂಡಿತವಾಗಿಯೂ ನಾವು ಅಕ್ರಮಿಗಳನ್ನು ನಾಶಮಾಡಿಯೇ ಬಿಡುವೆವು" (14 : 14).

ಪವಿತ್ರ ಖುರ್‌ಆನಿನ ಮೇಲಿನ ಪ್ರಸ್ತಾವನೆಗಳ ಬೆಳಕಿನಲ್ಲಿ ಹಝ್ರತ್ ಅಹ್ಮದ್‌ರವರ ಸತ್ಯತೆ ಸಾಬೀತಾಗುತ್ತದೆ. ಏಕೆಂದರೆ ಮೊದಲು ಆಗಮಿಸಿದ್ದ ಸತ್ಯಪ್ರವಾದಿಗಳ ವಿರುದ್ಧವಾಗಿ ಅವರ ಶತ್ರುಗಳು ಯಾವ ರೀತಿ ವರ್ತಿಸಿದ್ದರೋ ಅದೇ ರೀತಿಯಲ್ಲೇ ಇವರ ವೈರಿಗಳು ಸಹ ವರ್ತಿಸಿದರು. ಆ ಪ್ರವಾದಿಗಳನ್ನು ಸುಳ್ಳುವಾದಿಗಳೆಂದು ಸಾಧಿಸಲಿಕ್ಕೂ ಅವರ ಸಂಘಟನೆಗಳನ್ನು ನಿರ್ಮೂಲನ ಮಾಡಲಿಕ್ಕೂ ಆ ಶತ್ರುಗಳು ಏನೆಲ್ಲಾ ಉಪಾಯಗಳನ್ನು ಹೂಡಿದರೋ ಅವನ್ನೆಲ್ಲಾ ಇವರ ವಿರೋಧಿಗಳು ಸಹ ಪ್ರಯೋಗಿಸಿದರು. ಈಗಲೂ ಪ್ರಯೋಗಿಸುತ್ತಿದ್ದಾರೆ.

ಆ ಪ್ರವಾದಿಗಳ ಶತ್ರುಗಳಾದ ಮತಪಂಡಿತರು ಅವರ ಕುರಿತು ಏನೆಲ್ಲಾ ಆರೋಪಿಸಿದರೋ ಅದೇ ಪ್ರಕಾರ ಈ ಕಾಲದ ಮತಪಂಡಿತರು ಸಹ ಹಝ್‌ರತ್ ಅಹ್ಮದ್‌ರವರ ಬಗ್ಗೆ ಆಪಾದಿಸಿದರು. ಆದರೆ ಒಂದು ವ್ಯತ್ಯಾಸ ಮಾತ್ರ ಕಾಣಲಿಕ್ಕೆ ಸಾಧ್ಯವಿದೆ. ಈ ಮಹಾಪುರುಷನ ಕುರಿತು ಈ ಕಾಲದಲ್ಲಿ ಮತಪಂಡಿತರು ಎಷ್ಟರ ಮಟ್ಟಿಗೆ ಮಿಥ್ಯಾರೋಪ ಹೊರಿಸಿದರೋ, ಯಾವ ರೀತಿಯ ಅವಾಚ್ಯ ನುಡಿಗಳನ್ನು ಆಡಿದರೋ, ಅಷ್ಟು ಕಟುವಾಗಿ ಪೂರ್ವ ಪ್ರವಾದಿಗಳ ಶತ್ರುಗಳು ಮಾಡಿದುದಾಗಿ ಸಾಬೀತಾಗುವುದಿಲ್ಲ. ಒಟ್ಟಿನಲ್ಲಿ ಅಹ್ಮದಿಯಾ ವಿರುದ್ಧ ಮುಲ್ಲಾಗಳ ಚಟುವಟಿಕೆಗಳನ್ನೂ, ಆ ಸತ್ಯವಾದಿಯನ್ನು ಮಿಥ್ಯಾವಾದಿಯೆಂದು ಸಾಧಿಸಲಿಕ್ಕೆ ಮಾಡುವ ಪರಿಶ್ರಮಗಳನ್ನೂ ಪವಿತ್ರ ಖುರ್‌ಆನಿನ ಮೇಲಿನ ಪ್ರಸ್ತಾವನೆಗಳ ಬೆಳಕಿನಲ್ಲಿ ನೋಡುವುದಾದರೆ ಹಝ್‌ರತ್ ಅಹ್ಮದ್‌ರವರನ್ನು ಒಬ್ಬ ಸತ್ಯವಾದಿಯೆಂದು ಸಮ್ಮತಿಸದೆ ನಿರ್ವಾಹವಿಲ್ಲ.

ಸತ್ಯಪ್ರವಾದಿಗಳನ್ನು ಅವರ ಬಹುಸಂಖ್ಯಾತ ಶತ್ರುಗಳು ತೀವ್ರವಾಗಿ ವಿರೋಧಿಸುತ್ತಲೂ ಉಪದ್ರವಿಸುತ್ತಲೂ ಅವರನ್ನು ಸುಳ್ಳುವಾದಿಗಳೆಂದು ಸಾಧಿಸಲಿಕ್ಕಾಗಿ ಅತ್ಯಂತ ಶ್ರಮವಹಿಸಿದ್ದರೆಂದು ಖುರ್‌ಆನ್ ಹೇಳುತ್ತದೆ. ಸತ್ಯವಾದಿಯನ್ನು ವೈರಿಗಳು ಕಟುವಾಗಿ ವಿರೋಧಿಸುತ್ತಲೂ ಅವರನ್ನು ನಾಮಾವಶೇಷ ಮಾಡ

ಲಿಕ್ಕೆ ಯತ್ನಿಸುತ್ತಲೂ ಇದ್ದಂತೆ ಒಬ್ಬ ಸುಳ್ಳುವಾದಿಯ ವಿರುದ್ಧವಾಗಿ ಮಾಡಿಲ್ಲವೆಂಬುದು ಪರಮ ಸತ್ಯ. ಯಾವ ಸುಳ್ಳುವಾದಿಗಳನ್ನಾದರೂ ಜನರು ವಿರೋಧಿಸಿದ್ದರೆ, ಅವರು ವಿಪ್ಲವವನ್ನುಂಟುಮಾಡಿದ, ಅಕ್ರಮವಾಗಿ ವರ್ತಿಸಿದ, ಸರಕಾರವನ್ನು ಬುಡಮೇಲುಮಾಡಲು ಯತ್ನಿಸಿದ ಕಾರಣದಿಂದ ಮಾತ್ರವೆಂದು ಕಾಣಬಹುದು. ಸತ್ಯವಾದಿ ಜಯಗಳಿಸುವುದು ಆತನ ಸತ್ಯತೆಗೆ ಪುರಾವೆಯೆಂದು ಪವಿತ್ರ ಖುರ್‌ಆನ್ ಪದೇ ಪದೇ ಪ್ರಸ್ತಾವಿಸಿದೆ. ಭೌತಿಕವಾಗಿ ಯಾವ ಶಕ್ತಿ ಸಾಮರ್ಥ್ಯವಿಲ್ಲದ ಅವರನ್ನು ಶತ್ರುಗಳು ಒಗ್ಗಟ್ಟಾಗಿ ವಿರೋಧಿಸಿದರೂ ಅವರನ್ನು ನಾಶಪಡಿಸುವುದು ಹೋಗಲಿ, ಪರಾಜಿತಗೊಳಿಸಲಿಕ್ಕಾಗಲಿ ಅಸಾಧ್ಯವಾಗುವುದೇ ಅಲ್ಲಾಹನ ವಿಶೇಷ ಸಹಾಯ ಅವರ ಜೊತೆ ಇದೆಯೆಂಬುದಕ್ಕೆ ರುಜುವಾತು. ಆದರೆ ಸುಳ್ಳುವಾದಿಯನ್ನು ಲೋಕ ವಿರೋಧಿಸಿದುದಾಗಿ ಖುರ್‌ಆನ್ ಹೇಳುವುದಿಲ್ಲ, ಹಾಗೆ ವಿರೋಧಿಸುವ ಅಗತ್ಯವೂ ಇಲ್ಲ. ಏಕೆಂದರೆ, ಅಲ್ಲಾಹನ ಭಯಂಕರ ಶಿಕ್ಷಾ ನಿಯಮ ಅವರನ್ನು ನಾಮಶೇಷ ಮಾಡಿಬಿಡುವುದು. ಆದ್ದರಿಂದಲೇ ಮಿಥ್ಯಾವಾದಿಗಳ ಕುರಿತಾಗಲಿ ಅವರ ಅನುಯಾಯಿಗಳ ಕುರಿತಾಗಲಿ ಖುರ್‌ಆನಿನಲ್ಲಿ ಏನೂ ಪ್ರಸ್ತಾವಿಸಲಾಗಿಲ್ಲ. ಸಂಕ್ಷಿಪ್ತವಾಗಿ, ಸತ್ಯಪ್ರವಾದಿಗಳ ಕುರಿತುಳ್ಳ ಪವಿತ್ರ ಖುರ್‌ಆನಿನ ಪ್ರಸ್ತಾವನೆಗಳು ಹಝ್ರತ್ ಅಹ್ಮದ್ (ಅ) ದೈವನಿಯುಕ್ತರಾದ ಸತ್ಯವಾದಿಯೆಂದು ಸ್ಪಷ್ಟಪಡಿಸುತ್ತವೆ. ಹಾಗಿರುವಾಗ ಮತಪಂಡಿತರೂ ಅವರ ಪಂಗಡಗಳೂ ಆ ಮಹಾತ್ಮರನ್ನು ಮಿಥ್ಯಾವಾದಿಯೆಂದು ಸಾಧಿಸಲಿಕ್ಕಾಗಿ ಯತ್ನಿಸಲೇ ಬೇಕಾಗಿದೆ. ಅವರ ಪರಿಶ್ರಮ ಎಷ್ಟು ತೀವ್ರವಾಗುವುದೋ ಅಷ್ಟೇ ಹೆಚ್ಚು ಆ ಮಹಾತ್ಮರ ಸತ್ಯತೆ ಸಾಬೀತಾಗುತ್ತದೆ. ಪವಿತ್ರ ಖುರ್‌ಆನಿನ ಅಧ್ಯಾಪನೆಗಳ ಕುರಿತು ಚಿಂತಿಸುವವರಿಗೆ ಇದು ಸುಲಭಗ್ರಾಹ್ಯವಾದೊಂದು ಸಂಗತಿಯಾಗಿದೆ.

★


# ಅಹ್ಮದಿಯಾ ಸಂದೇಶ

**ಮುಸ್ಲಿಮರನ್ನು ಸಂಬೋಧಿಸಿ ಬರೆದ ಒಂದು ಉಪನ್ಯಾಸ**

ಗ್ರಂಥಕರ್ತ: ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹಮೂದ್ ಅಹ್ಮದ್

ಪುಟ: 60 ಬೆಲೆ: ಒಂದು ರೂಪಾಯಿ ಅಂಚೆ ವೆಚ್ಚ: ಉಚಿತ

ಬರೆಯಿರಿ: The Editor, YUGARASHMI Kannada Quarterly,
10-23/1008, Ansari Road, Bunder, Mangalore-575001.

# ★ ಸಂಪಾದಕರಿಗೆ ಪತ್ರ ★

ಇತ್ತೀಚೆಗಿನ "ಯುಗರಶ್ಮಿ" ಓದಿದೆ. ವಿಚಾರಪ್ರದವಾದ ಲೇಖನದಿಂದ ಕೂಡಿದ ಏಕೈಕ ಧಾರ್ಮಿಕ ಪತ್ರಿಕೆ ಇದಾಗಿದೆ. ಕೇವಲ ಹೊಗಳಿಕೆಗಾಗಿ ಈ ಮಾತನ್ನಾಡುತ್ತಾ ಇಲ್ಲ. ಪತ್ರಿಕೆಯನ್ನು ಎರಡೆರಡು ಬಾರಿ ಕೂಲಂಕುಷವಾಗಿ ಓದಿ ಈ ನಿರ್ಣಯ ಕೈಗೊಂಡಿದ್ದೇನೆ.

ಮುಲ್ಕಿ. —ರಾಜ್ ಸುಜನ್ ಉಳ್ಳಾಲ್

●

ತಮ್ಮ ಎಪ್ರಿಲ್ 81ರ ಸಂಚಿಕೆಯಲ್ಲಿ ಮೂಡಿ ಬಂದ "ದೇವನೊಡನೆ ಯಾಚಿಸಿರಿ" ಎಂಬ ಲೇಖನ ನಿಜಕ್ಕೂ ನಮ್ಮ ಮನಸ್ಸನ್ನೇ ಸೆರೆಹಿಡಿಯಿತು. ಇದನ್ನೋದುತ್ತಿದ್ದಂತೆಯೇ ದೇವನೊಡನೆ ಮಾನವರಾದ ನಾವು ಖಂಡಿತ ಯಾಚಿಸಬೇಕು ಎಂಬುದು ಗಮನಾರ್ಹ ಸಂಗತಿಯಾಗಿ ನಿಲ್ಲುತ್ತದೆ. ಅಲ್ಲದೆ 'ನೇರವಾಗಿ ದೇವನ ಸಮೀಪಕ್ಕೆ ತಲುಪುವ ಮಾರ್ಗವನ್ನು ಕೈಗೊಂಡು, ನನ್ನ ನಾಥಾ, ನಾನು ನಿನ್ನ ಪಾಪಿಯೂ ಪತಿತನೂ ಆದ ದಾಸ, ನೀನು ನನಗೆ ಮಾರ್ಗದರ್ಶನ ಮಾಡು' ಎಂದು ಪ್ರಾರ್ಥಿಸಿರಿ ಎಂಬ ವಾಕ್ಯ ಸದಾ ಜ್ಞಾನ ದೀವಿಗೆಯಾಗಿದೆ. ಇಂಥ ಲೇಖನಗಳು "ಯುಗರಶ್ಮಿ"ಯಲ್ಲಿ ನಿಜಕ್ಕೂ ಸ್ವಾಗತಾರ್ಹ, ಜೊತೆಗೆ ಗಮನಾರ್ಹ. ಮುಂದೆಯೂ ಇಂಥ ಲೇಖನಗಳು ಪ್ರಕಟವಾಗಿ ಈ ಪಾಪಿ ಮಾನವ ಕುಲಕೋಟಿಗೆ ದಾರಿ ದೀವಿಗೆಯಾಗಿ ಬಾಳು ಬೆಳಗಲೆಂದು ಶುಭ ಹಾರೈಸುತ್ತೇನೆ.

ಇಂಡಿ. —ರಾಮನಾಥ್

●

ನಾನು ಕೇಳಿರುವ ಪ್ರಶ್ನೆಗೆ ತಡಮಾಡದೆ ನಿಮ್ಮ ಪತ್ರಿಕೆಯಲ್ಲಿ ಉತ್ತರ ನೀಡಿದುದಕ್ಕೆ ನನ್ನ ಹೃತ್ಪೂರ್ವಕ ಧನ್ಯವಾದಗಳು. ನಾನು ತಿಳಿಸಿದ ಶರ್ತವನ್ನು ಪಾಲಿಸಿದುದರಲ್ಲಿ ನನಗುಂಟಾದ ಸಂತೋಷವನ್ನು ಈ ಪತ್ರ ಮೂಲಕ ವ್ಯಕ್ತಪಡಿಸುತ್ತಿದ್ದೇನೆ. ಬರೆದ ಲೇಖಕರಿಗೂ ಪ್ರಕಟಿಸಿದ "ಯುಗರಶ್ಮಿ"ಗೂ ಅಲ್ಲಾಹನು ತಕ್ಕ ಪ್ರತಿಫಲವನ್ನು ನೀಡಲಿಯೆಂದು ಪ್ರಾರ್ಥಿಸುತ್ತೇನೆ.

ಮುಸ್ಲಿಮರ ಆ ಅನಾಚಾರ ಕರ್ಮ (ಔಲಿಯಗಳೊಡನೆ ಅಭಯಯಾರ್ಥನೆ)ವನ್ನು ಪವಿತ್ರ ಖುರ್‌ಆನಿನ ವಾಕ್ಯಗಳಿಂದ ಖಂಡಿಸಿ ಸತ್ಯವನ್ನು ವ್ಯಕ್ತಪಡಿಸಿದ್ದು ಒಂದು ಧೀರ ಹೆಜ್ಜೆಯಾಗಿದೆ ಯುಗರಶ್ಮಿ ತನ್ನ 6ನೇ ಸಂಪುಟದ 4ನೇ ಸಂಚಿಕೆಯಲ್ಲಿ ಗೈಯ್ದಿರುವುದೆಂದು ಹೇಳಿದರೆ ಅದು ತಪ್ಪಾಗಲಾರದು. ಉರೂಸ್ ಸಮಾರಂಭಗಳನ್ನು ನಡೆಸುವ ಮುಸ್ಲಿಮರು ಇನ್ನು ಮುಂದೆ ಚಿಂತಿಸಿ ಕಾರ್ಯವೆಸಗಬೇಕಾಗಿದೆ. ಈ ದಿಸೆಯಲ್ಲಿಯೇ ಯುಗರಶ್ಮಿ ಚಲಿಸಿ ಲಕ್ಷಾಂತರ ಜನರು ಯಥಾರ್ಥವನ್ನು ತಿಳಿಯುವಂತೆ ಆ ಮೂಲಕ ಸಹಕಾರಿಯಾಗಲಿ ಎಂದು ಪ್ರಾರ್ಥಿಸುತ್ತಾ ಇನ್ನೊಮ್ಮೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

—ಮುಹಮ್ಮದ್ ಅಲಿ

●

ಯುಗರಶ್ಮಿ ಬಹು ಸತ್ಯವುಳ್ಳ ಪತ್ರಿಕೆ ಎಂದು ಅದನ್ನು ಆಳವಾಗಿ ಅಧ್ಯಯನ ಮಾಡಿದಲ್ಲಿ ಅರಿಯದಿರಲಾರದು. ಪ್ರತಿ ಸಂಚಿಕೆಯೂ ಮಾನವನನ್ನು ಸತ್ಯ ಶಾಂತಿಗಳ ಕಡೆಗೆ ಒಯ್ಯುವ ಲೇಖನಗಳಿಂದ ತುಂಬಿ ಬರುತ್ತಿದೆ. ಏಕದೇವನನ್ನೇ ಪ್ರತಿಪಾದಿಸುವ ಈ ಪತ್ರಿಕೆ ಮುಂದಾದರೂ ವಿಸ್ತಾರವಾಗಿ ಪ್ರಸಾರಗೊಳ್ಳುವುದೆಂದು ನಮ್ಮ ನಂಬಿಕೆ.

ಬೆಣ್ಣೆಹಳ್ಳಿ. —ಡಾ। ಬಿ. ಪಿ. ಯಮನೂರ್

●

ಯುಗರಶ್ಮಿ ಪತ್ರಿಕೆ ಧಾರ್ಮಿಕ ರಂಗದಲ್ಲಿ ಹೊಸ ಒಂದು ಕ್ರಾಂತಿಯನ್ನು ಮಾಡಿದೆ. ಹಿಂದು ಸಹೋದರರಿಗೆ ಇಸ್ಲಾಮಿನ ನೈಜ ರೂಪವನ್ನು ತಿಳಿಯುವರೆ ಅಸಾಧ್ಯವಾಗಿತ್ತು. ಯುಗರಶ್ಮಿಯು ಮೂಲಕ ಆ ಕೊರತೆ ನೀಗುತ್ತಿದೆ. ಅಲ್ಲಾಹನು ತಕ್ಕ ಪ್ರತಿಫಲ ನೀಡಲಿ.

ಚಿಕ್ಕಮಗಳೂರು. —ಎಫ್. ಮುಹಮದ್ ಅಲಿ

# ಪ್ರೊಫೆಸರ್ ಅಬ್ದುಸ್ಸಲಾಂ ಅವರ ಭಾರತ ಸಂಚಾರ-2



ನೋಬೆಲ್ ಪ್ರಶಸ್ತಿ ವಿಜೇತ ಅಹ್ಮದಿ ಭೌತಶಾಸ್ತ್ರ ವಿಜ್ಞಾನಿ ಪ್ರೊಫೆಸರ್ ಅಬ್ದುಸ್ಸಲಾಮರು ಇಂಡಿಯನ್ ಫಿಸಿಕ್ಸ್ ಸೊಸೈಟಿಯ ಆಮಂತ್ರಣದ ಮೇರೆಗೆ ಭಾರತದ ವಿವಿಧ ಕಡೆಗಳ ಸಂಚಾರ ಕೈಗೊಳ್ಳಲಿಕ್ಕೋಸ್ಕರ ಜನವರಿ 8ರಂದು ಬೊಂಬಾಯಿಗೆ ಆಗಮಿಸಿದರು. ವಿಮಾನ ನಿಲ್ದಾಣದಲ್ಲಿ ಅವರನ್ನು ಸ್ವಾಗತಿಸಲು ಇಂಡಿಯನ್ ಫಿಸಿಕ್ಸ್ ಸೊಸೈಟಿಯ ಉನ್ನತಾಧಿಕಾರಿಗಳಲ್ಲದೆ ಬೊಂಬ್ಯಾ ಅಹ್ಮದಿಯಾ ಘಟಕದ ಕೆಲವು ಸಹೋದರರು ಸಹ ಉಪಸ್ಥಿತರಿದ್ದರು. ವಿಮಾನ ನಿಲ್ದಾಣದಿಂದ ಅವರು ಭಾಭಾ ಅಣು ಸಂಶೋಧನ ಕೇಂದ್ರವನ್ನು ಸಂದರ್ಶಿಸಲಿಕ್ಕಾಗಿ ಹೊರಟರು.

ದಿನಾಂಕ 9ರಂದು ಸಂಜೆ ಹೋಮಿ ಭಾಭಾ ಅಣು ಸಂಶೋಧನ ಕೇಂದ್ರದ ಸಭಾಂಗಣದಲ್ಲಿ ಅವರಿಗೆ ಆರ್. ಡಿ. ಬಿರ್ಲಾ ಸ್ಮಾರಕ ಬಿರುದನ್ನು ನೀಡಲಾಯಿತು. ಇದು ಭಾರತೀಯ ಭೌತಶಾಸ್ತ್ರ ಸಂಸ್ಥೆಯು ನೀಡಿದ ಪ್ರಥಮ ಬಿರುದಾಗಿದೆ.

ತಾರೀಕು 11ರಂದು ಅಪರಾಹ್ನ ಬೊಂಬಾಯಿ ಅಹ್ಮದಿಯಾ ಕೇಂದ್ರ "ಅಲ್‌ಹಕ್" ಬಿಲ್ಡಿಂಗಿನಲ್ಲಿ ಅಹ್ಮದಿಯಾ ಘಟಕದ ವತಿಯಿಂದ ಪ್ರೊ| ಸಲಾಮರ ಗೌರವಾರ್ಥ ಸನ್ಮಾನ ಸಮಾರಂಭ ಏರ್ಪಡಿಸಲಾಗಿತ್ತು. ಅಲ್ಲಿ ಅವರಿಗೆ ಭವ್ಯ ಸ್ವಾಗತ ನೀಡಲಾಯಿತು. ಮುಸ್ಲಿಂ ಯುವಜನರು ವೈಜ್ಞಾನಿಕ ರಂಗದಲ್ಲಿ ಮುಂದೆ ಬರಬೇಕೆಂದು ಅವರು ತನ್ನ ಭಾಷಣದಲ್ಲಿ ಸಲಹೆಯಿತ್ತರು, ಜನತೆಯ ಸೇವೆಗಾಗಿ ತಾನು ಸದಾ ಸಿದ್ಧನೆಂದು ಅವರು ಘೋಷಿಸಿದರು.

ಅಲ್ಲಿಂದ ಅವರು ಸಯ್ಯದ್ ಶಹಾಬ್ ಅಹ್ಮದರ ಜೊತೆಯಲ್ಲಿ ಸಿ. ಸಿ. ಐ. ಕ್ಲಬ್ಬಿಗೆ ಆಗಮಿಸಿದರು. ಅಲ್ಲಿ ಬೊಹ್ರಾ ಪಂಥದ ನೇತಾರ ಸಯ್ಯದ್ನಾ ಬುರ್ಹಾನುದ್ದೀನ್ ಸಾಹೇಬರು ಪ್ರೊ| ಸಲಾಮರನ್ನು ಆದರದಿಂದ ಸ್ವಾಗತಿಸಿದರು. ಅಲ್ಲಿ ನೆರೆದಿದ್ದ ಬೊಹ್ರಾ ಪಂಥಕ್ಕೆ ಸೇರಿದ ಸುಮಾರು ಹತ್ತು ಸಾವಿರ ಮಂದಿಯನ್ನು ಉದ್ದೇಶಿಸಿ ಅವರು ಭಾಷಣ ಮಾಡಿದರು. ಮುಸ್ಲಿಂ ಮಕ್ಕಳು ವಿಜ್ಞಾನದ ಕಡೆಗೆ ಹೆಚ್ಚಿನ ಗಮನ ಕೊಡಬೇಕೆಂದೂ ಅವರಿಗೆ ಎಲ್ಲಾ ಸವಲತ್ತುಗಳನ್ನು ಮುಸ್ಲಿಂ ಸಮುದಾಯ ಒದಗಿಸಿಕೊಡಬೇಕೆಂದೂ ಅವರು ಸೂಚಿಸಿದರು. ಪ್ರೊ| ಸಲಾಮರ ಸಲಹೆಯನ್ನು ಕಾರ್ಯಗತಿಗೊಳಿಸುವರೆ ಪ್ರಯತ್ನಿಸುವೆವೆಂದು ಸಯ್ಯದ್ನಾ ಬುರ್ಹಾನುದ್ದೀನ್ ಸಾಹೇಬರು ಆಶ್ವಾಸನೆಯಿತ್ತರು.

### ಭುವನೇಶ್ವರದಲ್ಲಿ

ಡಾಕ್ಟರ್ ಅಬ್ದುಸ್ಸಲಾಮ್ ಅವರು ವಿಮಾನ ಮಾರ್ಗವಾಗಿ ಭುವನೇಶ್ವರಕ್ಕೆ ತಲುಪಿದಾಗ ಅವರನ್ನು ಸ್ವಾಗತಿಸಲು ಒರಿಸ್ಸಾದ ವಿವಿಧ ಅಹ್ಮದಿಯಾ ಶಾಖೆಗಳ ಸದಸ್ಯರೂ, ಒರಿಸ್ಸಾದ ಗವರ್ನರರ ಸೆಕ್ರೆಟರಿ, ಹಲವಾರು ಸುರಕ್ಷಾ ಅಧಿಕಾರಿಗಳೂ ಫಿಸಿಕ್ಸ್ ಸೊಸಾಯಿಟಿ ಡೈರೆಕ್ಟರರೂ ಹಾಜರಿದ್ದರು. ಅಲ್ಲಿಂದ ಡಾ| ಅಬ್ದುಸ್ಸಲಾಮ್ ಗವರ್ನರ್ ಹೌಸಿಗೆ ತೆರಳಿದರು.

ಡಾಕ್ಟರ್ ಸಲಾಮರಿಗೆ ಅಹ್ಮದಿಯಾ ಜಮಾಅತಿನ ವತಿಯಿಂದ ಅಹ್ಮದಿಯಾ ಮಸೀದಿಯಲ್ಲಿ ಸನ್ಮಾನ ಸಮಾರಂಭ ಏರ್ಪಡಿಸಲಾಗಿತ್ತು. ಅನಂತರ ಅವರು ಒರಿಸ್ಸಾದ ಮುಖ್ಯಮಂತ್ರಿಯನ್ನು ಭೇಟಿಯಾದರು. ಆ ಬಳಿಕ ಫಿಸಿಕ್ಸ್ ಸೊಸಾಯಿಟಿಯ ಸದಸ್ಯರ ಜೊತೆ ವಿಚಾರ ವಿನಿಮಯ ನಡೆಸಿದರು. ಅನಂತರ ಯುನಿವರ್ಸಿಟಿಯಲ್ಲಿ ಏರ್ಪಡಿಸಲಾದ ಒಂದು ಪತ್ರಿಕಾ ಸಮ್ಮೇಳನದಲ್ಲಿ ಭಾಗವಹಿಸಿದರು. ಅವರು ಮಂತ್ರಿಗಳನ್ನೂ ಉನ್ನತಾಧಿಕಾರಿಗಳನ್ನೂ ಭೇಟಿಯಾಗಿದ್ದರು.

### ಅಮೃತಸರದಲ್ಲಿ

ತಾ. 25ರಂದು ಅಪರಾಹ್ನ 2-20ಕ್ಕೆ ಡೆಲ್ಲಿಯಿಂದ ವಿಮಾನ ಮೂಲಕ ತಲುಪಿದರು. ವಿಮಾನ ನಿಲ್ದಾಣದಲ್ಲಿ ಮಿರ್ಝಾ ವಸೀಮ್ ಅಹ್ಮದ್ (ನಾಝಿರ್ ಆಲಾ ಖಾದಿಯಾನ್) ಸಾಹೇಬರ ನೇತೃತ್ವದಲ್ಲಿ ಅಹ್ಮದಿಯರೂ ಅಮೃತಸರದ ಗುರು ನಾನಕ್ ಯೂನಿವರ್ಸಿಟಿಯ ಪರವಾಗಿ ಅದರ ರಿಜಿಸ್ಟ್ರಾರ್‌ರವರ ನೇತೃತ್ವದಲ್ಲಿ ಕೆಲ ಉದ್ಯೋಗಸ್ಥರೂ ಸ್ವಾಗತಿಸಿದರು. ವಿಮಾನ ನಿಲ್ದಾಣದಿಂದ ಪ್ರೊಫೆಸರ್ ಸಲಾಮ್‌ರನ್ನು ಯೂನಿವರ್ಸಿಟಿಗೆ ಕರೆದುಕೊಂಡು ಹೋಗಲಾಯಿತು. ಅಲ್ಲಿ ಗುರು ನಾನಕ್ ವಿಶ್ವವಿದ್ಯಾಲಯದ ಚಾನ್ಸಿಲರ್ (ಕುಲಪತಿ) ಶ್ರೀ ಜೈಸುಖ್‌ಲಾಲ್ ಹಾಥಿ (ಇವರು ಪಂಜಾಬಿನ ಗವರ್ನರರೂ ಆಗಿದ್ದಾರೆ) ಒಂದು ವಿಶೇಷ ಬಿರುದುದಾನ ಸಮಾರಂಭದಲ್ಲಿ "ಡಾಕ್ಟರ್ ಆಫ್ ಸೈನ್ಸ್" ಬಿರುದನ್ನು ನೀಡಿದರು.

ಡಾಕ್ಟರ್ ಸಲಾಮರ ಅಪೇಕ್ಷೆ ಪ್ರಕಾರ ಈ ಸಮಾರಂಭದಲ್ಲಿ ಅವರ ಹಿಂದಿನ ಅಧ್ಯಾಪಕರಾದ ಶ್ರೀ ಲಾಲಾ ಹನ್ಸ್‌ರಾಜ ಬಟ್ಲಾ ಮತ್ತು ಲಾಲಾ ಇಷ್‌ಕುಮಾರ್ ಅವರಿಬ್ಬರನ್ನೂ ವೇದಿಕೆಯಲ್ಲಿ ಕುಳ್ಳಿರಿಸಿ ವಿಶೇಷ ಪ್ರಶಸ್ತಿಗಳನ್ನು ನೀಡಲಾಯಿತು. ಡಾಕ್ಟರ್ ಸಲಾಮ್ ತನ್ನ ಆದರಣೀಯ ಅಧ್ಯಾಪಕರನ್ನು ಪ್ರಶಂಸಿಸಿ ಮಾತನಾಡಿದರು. ಅವರು ಸರಳ ಸುವ್ಯಕ್ತ ಪಂಜಾಬಿಯಲ್ಲಿ ಮಾಡಿದ ಭಾಷಣವನ್ನು ಶ್ರೋತೃಗಳು ತಲ್ಲೀನರಾಗಿ ಆಲಿಸಿದರು.

ಬಿರುದುದಾನ ಸಮಾರಂಭದ ಕೊನೆಗೆ ಪಂಜಾಬಿನ ಗವರ್ನರ್ ಶ್ರೀ ಜೈಸುಖ್‌ಲಾಲ್ ಹಾಥಿ ಮತ್ತು ಡಾಕ್ಟರ್ ಸಲಾಮ್ ಒಟ್ಟಿಗೆ ಕುಳಿತು ಚಾ ಸತ್ಕಾರದಲ್ಲಿ ಭಾಗವಹಿಸುತ್ತಾ ಹಲವಾರು ಸಂಗತಿಗಳ ಕುರಿತು ವಿಚಾರ ವಿನಿಮಯ ನಡೆಸಿದರು. ಆ ಸಂದರ್ಭದಲ್ಲಿ ಪಂಜಾಬಿನ ಗವರ್ನರರು ಪವಿತ್ರ ಖುರ್‌ಆನಿನ ಒಂದು ಭಾಗದ ಕುರಿತು ತನ್ನ ವಿಶೇಷ ಆಸಕ್ತಿ ವ್ಯಕ್ತಗೊಳಿಸಿದರು. ಗವರ್ನರರಿಗೆ ಪವಿತ್ರ ಖುರ್‌ಆನಿನ ಇಂಗ್ಲಿಷ್ ಭಾಷಾಂತರದ ಒಂದು ಪ್ರತಿಯಲ್ಲಿ ಈ ಭಾಗವನ್ನು ಗುರುತುಮಾಡಿ ಡಾಕ್ಟರ್ ಸಲಾಮರ ಸಹಿ ಹಾಕಿಸಿ ಅನಂತರ ಖಾದಿಯಾನದಿಂದ ಕಳುಹಿಸಲಾಯಿತು. ಪವಿತ್ರ ಖುರ್‌ಆನಿನ ಇನ್ನೊಂದು ಪ್ರತಿಯನ್ನು ಗುರು ನಾನಕ್ ಯೂನಿವರ್ಸಿಟಿಯ ವೈಸ್ ಚಾನ್ಸಿಲರ್ ಶ್ರೀ ಕೆ. ಎಸ್. ಗಿಲ್‌ರವರಿಗೂ ಕಳುಹಿಸಲಾಯಿತು.

ತಾ. 26ರಂದು ಡೆಲ್ಲಿಗೆ ಹಿಂತೆರಳಲಿಕ್ಕಾಗಿ ಅಮೃತಸರಕ್ಕೆ ಬಂದಾಗ ಅಮೃತಸರದ ಗೋಲ್ಡನ್ ಟೆಂಪಲ್‌ನಲ್ಲಿ ಅವರಿಗೆ ಸಿಖ್ ಮತದ ಸಂಪ್ರದಾಯದ ಪ್ರಕಾರ "ಸರೋಪ" ನೀಡಲಾಯಿತು. ಅನಂತರ ವಿಮಾನ ನಿಲ್ದಾಣದಲ್ಲಿ ಗುರು ನಾನಕ್ ಯೂನಿವರ್ಸಿಟಿಯ ವೈಸ್ ಚಾನ್ಸಿಲರ್, ಡೆಪ್ಯುಟಿ ರಿಜಿಸ್ಟ್ರಾರ್ ಮತ್ತಿತರ ಅಧಿಕಾರಿಗಳೂ ಅಹ್ಮದಿಯಾ ಜಮಾಅತಿನ ಹಿರಿಯ ವ್ಯಕ್ತಿಗಳೂ ಆದರದಿಂದ ಬೀಳ್ಕೊಟ್ಟರು.

### ಅಲಿಗಢದಲ್ಲಿ

ತಾ. 24ರಂದು ಬೆಳಿಗ್ಗೆ ರೈಡಿಂಗ್ ಕ್ಲಬ್‌ನ ವೈಭವದಿಂದ ಕೂಡಿದ ಪೆರೇಡ್ ಮತ್ತು ನೆರೆದ ಜನಸಮೂಹದ ಆದರದ ಸ್ವಾಗತವನ್ನು ಸ್ವೀಕರಿಸುತ್ತಾ ಪ್ರೊ। ಸಲಾಂ ವೈಸ್ ಚಾನ್ಸಿಲರ್ ನಿವಾಸವನ್ನು ತಲುಪಿದರು. ಅಲ್ಲಿ ಹಿರಿಯ ಪ್ರಾಧ್ಯಾಪಕರ ಜೊತೆ ಬೆಳಗ್ಗಿನ ಫಲಾಹಾರವನ್ನು ಮಾಡಿದ ನಂತರ ಡಾಕ್ಟರ್ ಸಲಾಮರನ್ನು ರಂಗುರಂಗಿನ ಉಡುಗೆ-ತೊಡುಗೆ ಧರಿಸಿದ ಕುದುರೆ ಸವಾರರು ಇಬ್ಬದಿಗಳಲ್ಲಿ ಸಾಲಾಗಿ ನಿಂತಿರಲು ಮಧ್ಯದಲ್ಲಿ ಕೆಂಪು ಬಣ್ಣದ ರತ್ನಗಂಬಳಿಗಳನ್ನು ಹಾಸಿರಲು ಅದರ ಮೇಲೆ ಇಂಫಾಲಾ ಕಾರಿನಲ್ಲಿ ಸರ್ ಸಯ್ಯದ್ ಹಾಲಿಗೆ ಕೊಂಡೊಯ್ಯಲಾಯಿತು. ಡಾಕ್ಟರ್ ಸಲಾಮ್ ಮೊತ್ತಮೊದಲು ಯೂನಿವರ್ಸಿಟಿಯ ಮಸೀದಿಯಲ್ಲಿ ಕೃತಜ್ಞತೆಯ ನಮಾಜನ್ನು ಮಾಡಿ ಅನಂತರ ಸ್ಟಾಫ್ ಅಸೋಸಿಯೇಷನ್ ಏರ್ಪಡಿಸಿದ ಸ್ವಾಗತ ಸಮಾರಂಭದಲ್ಲಿ ಭಾಗವಹಿಸಿದರು. ಅನಂತರ ಲೈಬ್ರರಿಯನ್ನು ಸಂದರ್ಶಿಸಿದರು. ಆ ಬಳಿಕ ಕೆನೆಡಿ ಹಾಲ್ ಎಂಬ ಕಟ್ಟಡದ ಬಹಳ ಅಂದವಾಗಿ ಅಲಂಕರಿಸಲಾದ ಸಭಾಂಗಣದಲ್ಲಿ ಯೂನಿವರ್ಸಿಟಿಯ ಪರ

ವಾಗಿ ಉಡುಗೊರೆಯಾಗಿ ನೀಡಲಾದ ಶೆರ್ವಾನಿಯನ್ನು ಧರಿಸಿ ಪ್ರವೇಶಿಸಿದಾಗ ನೆರೆದ ಸಭಿಕರು ಆದರದಿಂದ ಎದ್ದುನಿಂತು ಸ್ವಾಗತಿಸಿದರು. ಅದೊಂದು ವಿಶೇಷ ಬಿರುದುದಾನ ಸಮಾರಂಭವಾಗಿತ್ತು. ಅಲ್ಲಿ ಅವರಿಗೆ "ಡಾಕ್ಟರ್ ಆಫ್ ಸಯನ್ಸ್" ಬಿರುದು ನೀಡಲಾಯಿತು. ಡಾಕ್ಟರ್ ಸಲಾಂ ಆರಂಭದಲ್ಲಿ ಪವಿತ್ರ ಖುರ್‌ಆನಿನ ವಚನಗಳನ್ನು ಓದುತ್ತಾ ತನ್ನ ಸಿದ್ಧಾಂತಗಳ ಕುರಿತು ಭಾಷಣ ಮಾಡಿದರಲ್ಲದೆ ಎಪಿಡಿಯೋ ಸ್ಕೋಪ್(Epidioscope) ಮತ್ತು ಪ್ರೊಜೆಕ್ಟರ್‌ಗಳ ಸಹಾಯದಿಂದ ತನ್ನ ಭಾಷಣವನ್ನು ಸುವ್ಯಕ್ತಗೊಳಿಸಿದರು. ಆ ಸಭೆಯಲ್ಲಿ ರೇಡಿಯೋ, ಟೆಲಿವಿಷನ್ ಮತ್ತು ಪತ್ರಿಕೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

ಮಧ್ಯಾಹ್ನ ಸ್ಟೂಡೆಂಟ್ಸ್ ಯೂನಿಯನ್ ಪರವಾಗಿ ಸನ್ಮಾನ ಸಮಾರಂಭ ಏರ್ಪಡಿಸಲಾಗಿತ್ತು. ಅಲ್ಲಿ ವಿದ್ಯಾರ್ಥಿಗಳ ಯೂನಿಯನ್ ಪ್ರೆಸಿಡೆಂಟ್ ಇರ್ಫಾನುಲ್ಲಾ ಖಾನ್ ಸ್ವಾಗತ ಭಾಷಣ ಮಾಡುತ್ತಾ ಯುನಿವರ್ಸಿಟಿಯ "ಲೈಫ್ ಮೆಂಬರ್‌ಶಿಫ್" ಕೊಡುಗೆ ನೀಡಿದರು. ಡಾಕ್ಟರ್ ಅಬ್ದುಸ್ಸಲಾಮ್ ಈ ಕೊಡುಗೆಗೆ ಕೃತಜ್ಞತೆ ವ್ಯಕ್ತಗೊಳಿಸಿದರು. ಅವರು ವಿದ್ಯಾರ್ಥಿಗಳ ಜೊತೆ ದೀರ್ಘ ಸಮಯ ಸೌಹಾರ್ದ – ಸ್ನೇಹದಿಂದ ವಿಚಾರ ವಿನಿಮಯ ಮಾಡುತ್ತಾ ಕಳೆದರು. ಅನಂತರ ಡಿಪಾರ್ಟ್‌ಮೆಂಟ್ ಆಫ್ ಫಿಸಿಕ್ಸ್ ಮತ್ತು ಡಿಪಾರ್ಟ್‌ಮೆಂಟ್ ಆಫ್ ಥಿಯೋಲಜಿಯ ವತಿಯಿಂದಲೂ ಸ್ವಾಗತ ಸಮಾರಂಭಗಳನ್ನು ಏರ್ಪಡಿಸಲಾಗಿತ್ತು.

## ಹೈದರಾಬಾದ್‌ನಲ್ಲಿ

ತಾ. 28ರಂದು ಸಂಜೆ ಪ್ರೊ। ಸಲಾಂ ಡೆಲ್ಲಿಯಿಂದ ಬಂದು ತಲುಪಿದಾಗ ಅಹ್ಮದಿಯಾ ಜಮಾಅತಿನ ಸದಸ್ಯರೂ ಇತರ ಗಣ್ಯರೂ ಸ್ವಾಗತಿಸಿದರು. ಆ ದಿನ ಅಹ್ಮದಿಯಾ ಸಂಘಟನೆಯ ಪರವಾಗಿ ಸನ್ಮಾನ ಸಮಾರಂಭ ಏರ್ಪಡಿಸಲಾಗಿತ್ತು.

ತಾ. 29ರಂದು ನೇಶನಲ್ ಜಿಯೋ ಫಿಸಿಕಲ್ ರೀಸರ್ಚ್ ಇನ್‌ಸ್ಟಿಟ್ಯೂಟ್, ಆಂಧ್ರ ಪ್ರದೇಶ್ ಅಕಾಡೆಮಿ ಆಫ್ ಸಾಯನ್ಸ್ ಮತ್ತು ರೀಜನಲ್ ರೀಸರ್ಚ್ ಲೆಬೊರೇಟರಿ ವತಿಯಿಂದ ಏರ್ಪಡಿಸಲಾದ ಸಮಾರಂಭಗಳಲ್ಲಿ ಅವರು ಭಾಗವಹಿಸಿದರು. ಅದೇ ದಿನ ಸಂಜೆಗೆ ಸೇಟ್ ಮುಹಮ್ಮದ್ ಇಲ್ಯಾಸ್ ಸಾಹೇಬರ "ಬೈತುನ್ನೂರು" ಎಂಬ ಬಂಗಲೆಯಲ್ಲಿ "ಯುನೈಟೆಡ್ ಹಿಂದೂ ಮುಸ್ಲಿಮ್ ಫ್ರಂಟ್" ನೇತೃತ್ವದಲ್ಲಿ ಅವರಿಗೆ ಸನ್ಮಾನವನ್ನೇರ್ಪಡಿಸಲಾಗಿತ್ತು. ಅಲ್ಲಿ ಭೋಜನ ಸತ್ಕಾರವೂ ಇದ್ದಿತು.

ಅನಂತರ ಹಲವಾರು ಮುಸ್ಲಿಮ್ ಮತ್ತು ಅಮುಸ್ಲಿಮ್ ಸಂಘ-ಸಂಸ್ಥೆಗಳೂ ವಿಶ್ವವಿದ್ಯಾಲಯಗಳೂ ಒಟ್ಟಿಗೆ ಸೇರಿ ಏರ್ಪಡಿಸಿದ ಒಂದು ಸತ್ಕಾರ ಸಮಾರಂಭದಲ್ಲಿ ಭಾಗವಹಿಸಿದರು. ಈ ಸಮಾರಂಭದಲ್ಲಿ ಸಂಘ-ಸಂಸ್ಥೆಗಳ ಪರವಾಗಿ ಹಾರಗಳನ್ನೂ ಪ್ರಶಂಸಾ ಪತ್ರಗಳನ್ನೂ ನೀಡಲಾಯಿತು. ಆಂಧ್ರಪ್ರದೇಶದ ಮುಖ್ಯಮಂತ್ರಿಯ ವತಿಯಿಂದ ಚಾರ್‌ಮಿನಾರ್‌ನ ಪ್ರತಿಕೃತಿಯನ್ನು ಉಡುಗೊರೆಯಾಗಿ ನೀಡಲಾಯಿತು.

## ಖಾದಿಯಾನಿನಲ್ಲಿ

ಪ್ರೊಫೆಸರ್ ಸಲಾಮರು ತಾ. 25ರಂದು ರಾತ್ರಿ ಖಾದಿಯಾನಿಗೆ ಕಾರು ಮೂಲಕ ತಲುಪಿದಾಗ ಅವರ ಸ್ವಾಗತಕ್ಕಾಗಿ ನೆರೆದಿದ್ದ ಖಾದಿಯಾನಿನ ಅಹ್ಮದಿಯರೂ ಕಾಶ್ಮೀರ, ಉತ್ತರ ಪ್ರದೇಶ, ಬಿಹಾರ್, ಒರಿಸ್ಸಾ ಮತ್ತಿತರ ಪ್ರದೇಶದಿಂದ ಆಗಮಿಸಿದ ಅಹ್ಮದಿಯರೂ ಮಸ್ಜಿದ್ ಮುಬಾರಕ್ ಸಮೀಪ ಸ್ನೇಹಭರಿತ ಹರ್ಷೋದ್ಗಾರಗಳಿಂದ ಸ್ವಾಗತಿಸಿದರು. ಡಾಕ್ಟರ್ ಸಲಾಮರು ಸಾಲಾಗಿ ನಿಂತ ಅಹ್ಮದಿಯರೆಲ್ಲರಿಗೆ ಹಸ್ತಲಾಘವ ನೀಡಿ, ಅವರ ಸಂಕ್ಷಿಪ್ತ ಪರಿಚಯ ಪಡೆದರು. ಅನಂತರ ಮಿರ್ಝಾ ವಸೀಂ ಅಹ್ಮದ್ ಸಾಹೇಬರ ನಿವಾಸಕ್ಕೆ ತೆರಳಿ ವಿಶ್ರಮಿಸಿದರು. ಮರುದಿವಸ ಬೆಳಿಗ್ಯೆ ಫಜರ್ ಪ್ರಾರ್ಥನೆಯ ನಂತರ ಮಸ್ಜಿದ್ ಮುಬಾರಕ್‌ನಲ್ಲಿ ಒಂದು ಚಿಕ್ಕ ಭಾಷಣ ಮಾಡಿದರು. ತನಗೆ ದೊರೆತ ವಿಶ್ವವಿಖ್ಯಾತ ಪ್ರಶಸ್ತಿಗಾಗಿ ಅಲ್ಲಾಹನನ್ನು ಸ್ತುತಿಸಿ ಅಹ್ಮದಿಯರು ತನಗಾಗಿ ಮಾಡಿದ ಪ್ರಾರ್ಥನೆಗಳಿಗಾಗಿ ಕೃತಜ್ಞತೆ ವ್ಯಕ್ತಗೊಳಿಸಿದರು. ಅಹ್ಮದಿಯ ವಿದ್ಯಾರ್ಥಿಗಳು ವಿಜ್ಞಾನದ ಸಂಶೋಧನೆಯಲ್ಲಿ ಗಾಢಾಸಕ್ತರಾಗಬೇಕೆಂದು ಕರೆ ನೀಡಿದರು. ಅಹ್ಮದಿಯಾ ತಂದೆ ತಾಯಂದಿರು ತಮ್ಮ ಮಕ್ಕಳು ವೈಜ್ಞಾನಿಕ ವಿದ್ಯೆಯಲ್ಲಿ ಪಾರಂಗತರಾಗಲು ಎಲ್ಲಾ ವಿಧದ ಸಹಾಯ ಸಹಕಾರಗಳನ್ನು ನೀಡಬೇಕೆಂದು ಹೇಳಿದರು. ಭಾಷಣದ ನಂತರ "ಇಜ್ತಿಮಾಯಿ ದುಆ" (ಎಲ್ಲರೂ ಜೊತೆ ಸೇರಿ ಕೈಯೆತ್ತಿ ಪ್ರಾರ್ಥನೆ) ಮಾಡಿದರು. ಅನಂತರ ಅಹ್ಮದಿಯಾ

ಜಮಾಅತಿನ ಸ್ಥಾಪಕರ ಸಮಾಧಿಯ ಸಂದರ್ಶನ ನಡೆಸಿ ಪ್ರಾರ್ಥಿಸಿದರು. ಆ ಬಳಿಕ ಖಾದಿಯಾನಿನ ವಿವಿಧ ಸ್ಥಳಗಳಲ್ಲಿರುವ, ಹಿಂದೆ ತನ್ನ ಹಿರಿಯರೂ ಸಮೀಪದ ಸಂಬಂಧಿಗಳೂ ವಾಸಿಸಿದ್ದ ಮನೆಗಳನ್ನು ನೋಡಲು ತೆರಳಿದರು.

ಪೂರ್ವಾಹ್ನ 10-30ಕ್ಕೆ ಖಾದಿಯಾನಿನ ತಅಲೀಮುಲ್ ಇಸ್ಲಾಮ್ ಹೈಸ್ಕೂಲಿನಲ್ಲಿ ಡಾಕ್ಟರ್ ಸಲಾಮ್ ಸಾಹೇಬರಿಗೆ ಒಂದು ಚಹಾ ಸತ್ಕಾರ ಏರ್ಪಡಿಸಲಾಗಿತ್ತು. ಈ ಸಮಾರಂಭದಲ್ಲಿ ಗುರುನಾನಕ್ ಯುನಿವರ್ಸಿಟಿ ಮತ್ತು ಹಿಮಾಚಲ್ ಯುನಿವರ್ಸಿಟಿಯ ಭೌತಿಕಶಾಸ್ತ್ರದ ಇಲಾಖಾ ಮುಖ್ಯಸ್ಥರೂ ಕಾಲೇಜು ಪ್ರಾಧ್ಯಾಪಕರೂ ನಗರದ ಮಾನ್ಯರಾದ ಅಮುಸ್ಲಿಮ್ ಸಹೋದರರೂ ವಿದ್ಯಾರ್ಥಿ ವಿದ್ಯಾರ್ಥಿನಿಯರೂ ಪತ್ರಿಕೆ, ರೇಡಿಯೋ ಮತ್ತು ಟೆಲಿವಿಷನ್‌ಗಳ ಪ್ರತಿನಿಧಿಗಳೂ ಹೊರಗಿನಿಂದ ಬಂದ ಅತಿಥಿಗಳೂ ಸ್ಥಳೀಯ ಅಹ್ಮದಿಯರೂ ಭಾಗವಹಿಸಿದ್ದರು.

ಚಾ ಸತ್ಕಾರದ ನಂತರ ಡಾಕ್ಟರ್ ಸಲಾಮರನ್ನು ಹೈಸ್ಕೂಲಿನ ಆವರಣದಲ್ಲೇ ಏರ್ಪಡಿಸಲಾಗಿದ್ದ ಭಾಷಣದ ವೇದಿಕೆಗೆ ಕರೆದೊಯ್ಯಲಾಯಿತು. ಅಲ್ಲಿ ಅಹ್ಮದಿಯರೂ ಇತರರೂ ಭಾರೀ ಸಂಖ್ಯೆಯಲ್ಲಿ ನೆರೆದಿದ್ದರು. ಅಹ್ಮದಿಯಾ ಜಮಾಅತಿನ ಪರವಾಗಿ ಡಾಕ್ಟರ್ ಸಲಾಮರಿಗೆ ಮಾನಪತ್ರವನ್ನು ಸಭೆಯಲ್ಲಿ ಮಿರ್ಝಾ ವಸೀಮ್ ಅಹ್ಮದ್ ಸಾಹೇಬರು ನೀಡಿದರು. ಅದರ ಪ್ರತಿಗಳನ್ನು ನೆರೆದಿದ್ದ ಸಭಿಕರಿಗೆ ಹಂಚಲಾಯಿತು. ಡಾಕ್ಟರ್ ಸಲಾಮರನ್ನು ಅಭಿನಂದಿಸಿ ಶ್ರೀ ಸರ್ದಾರ್ ಸತ್ ನಾಮ್ ಸಿಂಗ್ ಬಾಜ್ವ, ಶ್ರೀ ಸರ್ದಾರ್ ಗುರುಬಚನ್ ಸಿಂಗ್ ಬಾಜ್ವ, ಶ್ರೀ ರಾಮ್ ಪ್ರಕಾಶ್ ಪ್ರಭಾಕರ್, ಮಿಸ್ಟರ್ ಹಿದಾಯತುಲ್ಲಾ ಹುಬ್‌ಶ್ (ಜರ್ಮನಿಯ ಅಹ್ಮದಿ), ಪ್ರೊಫೆಸರ್ H. S. ವಿರ್ಕ್, ಪ್ರೊಫೆಸರ್ ಥಾಮಸ್ ಮೊದಲಾದವರು ಭಾಷಣ ಮಾಡಿದರು.

ಡಾಕ್ಟರ್ ಅಬ್ದುಸ್ಸಲಾಮ್ ತನ್ನ ಭಾಷಣದಲ್ಲಿ ಆ ದಿನ ಪ್ರಜಾಪ್ರಭುತ್ವ ದಿನವನ್ನು ಆಚರಿಸುತ್ತಿರುವ ಭಾರತೀಯರಿಗೆ ಪಾಕಿಸ್ತಾನದ ಪ್ರತಿನಿಧಿಯಾಗಿ ಶುಭಾಶಯ ನೀಡಿದರು. ಅನಂತರ ತನ್ನನ್ನು ಅಭಿನಂದಿಸಿದ ಸರ್ವರಿಗೂ ಕೃತಜ್ಞತೆ ವ್ಯಕ್ತಗೊಳಿಸಿ ತನ್ನ ವಿದ್ಯಾಭ್ಯಾಸದ ಕುರಿತು ಮೇಲ್ನೋಟ ವಹಿಸಿದ್ದ ಅಹ್ಮದಿಯಾ ಜಮಾಅತಿನ ಎರಡನೆಯ ಖಲೀಫರಾದ ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್‌ರ ಸ್ಮರಣೆ ಮಾಡಿದರು. ತನಗೆ ವಿಶ್ವವಿಖ್ಯಾತವಾದ ಪ್ರಶಸ್ತಿ ದೊರೆತ ಮೂಲಕ ಅಹ್ಮದಿಯಾ ಜಮಾಅತಿನ ಸ್ಥಾಪಕರ ಒಂದು ಭವಿಷ್ಯವಾಣಿ ಮಹತ್ತರವಾದ ರೀತಿಯಲ್ಲಿ ಪೂರ್ತಿಗೊಂಡುದರ ಕುರಿತು ವಿವರಿಸಿದರು. ಭಾರತ ಮತ್ತು ಪಾಕಿಸ್ತಾನದ ವಿಜ್ಞಾನಿಗಳು ಭೌತಶಾಸ್ತ್ರದಲ್ಲಿ ಸಂಶೋಧನೆ ಕೈಗೊಳ್ಳಲು ಒತ್ತಾಯಿಸಿದರು. ಭಾಷಣದ ನಂತರ ಡಾಕ್ಟರ್ ಅಬ್ದುಸ್ಸಲಾಮರು ಸಭಿಕರ ಮತ್ತು ಪತ್ರಿಕಾ ಪ್ರತಿನಿಧಿಗಳ ಪ್ರಶ್ನೆಗಳಿಗೆ ಸಮಂಜಸವಾದ ಉತ್ತರಗಳನ್ನು ನೀಡಿದರು. ಈ ಸಮಾರಂಭದ ನಂತರ ತಅಲೀಮುಲ್ ಇಸ್ಲಾಂ ಹೈಸ್ಕೂಲಿನ ಸೈನ್ಸ್ ಬ್ಲೋಕನ್ನು ಸಂದರ್ಶಿಸಿದರು.

ಮಸ್ಜಿದ್ ಮುಬಾರಕ್‌ನಲ್ಲಿ ಝುಹರ್ ಮತ್ತು ಅಸರ್ ಪ್ರಾರ್ಥನೆಯಲ್ಲಿ ಭಾಗವಹಿಸಿದ ನಂತರ ಡಾಕ್ಟರ್ ಸಲಾಮ್ ಕಾರ್ ಮೂಲಕ ಅಮೃತಸರ್‌ಗೆ ಹಿಂತಿರುಗಿದರು.

## ಖಾದಿಯಾನಿನಲ್ಲಿ ಕೃತಜ್ಞತಾ ಪ್ರಾರ್ಥನೆಗಳು

ಪ್ರೊಫೆಸರ್ ಸಲಾಮರು ಖಾದಿಯಾನಿಗೆ ಆಗಮಿಸುವ ಮೊದಲು ಮಿರ್ಝಾ ವಸೀಮ್ ಅಹ್ಮದ್ ಸಾಹೇಬರಿಗೆ ಬರೆದ ಪತ್ರದಲ್ಲಿ "ಅಲ್ಲಾಹನ ಮಹತ್ತಾದ ಅನುಗ್ರಹದಿಂದ ಮಾತ್ರ ಲಭ್ಯವಾದ ಈ ಜಾಗತಿಕ ಪ್ರಶಸ್ತಿಯನ್ನು ಗಳಿಸಿದುದಕ್ಕೆ ಅಲ್ಲಾಹನಿಗೆ ಕೃತಜ್ಞತೆಯನ್ನು ಸೂಚಿಸಲಿಕ್ಕಾಗಿ ಖಾದಿಯಾನಿನ "ಬೈತುದ್ದುಆ"ದಲ್ಲಿ ಕೃತಜ್ಞತಾ ಸಾಷ್ಟಾಂಗಗಳನ್ನು ಮಾಡಲು ಉತ್ಸುಕನಾಗಿದ್ದೇನೆ" ಎಂದು ಬರೆದಿದ್ದರು. ಅಹ್ಮದಿಯಾ ಜಮಾಅತಿನ ಸ್ಥಾಪಕರು ಹಗಲಿರುಳು ಪ್ರಾರ್ಥನೆಗಳನ್ನು ಮಾಡುತ್ತಿದ್ದ ಚಿಕ್ಕ ಕೋಣೆಗೆ "ಬೈತುದ್ದುಆ" (ಪ್ರಾರ್ಥನೆಯ ಮನೆ) ಎಂದು ಹೆಸರು. ಡಾಕ್ಟರ್ ಸಲಾಮ್ ಖಾದಿಯಾನಿನಲ್ಲಿದ್ದ ಅಲ್ಪಾವಧಿಯಲ್ಲಿ ಅಧಿಕ ಸಮಯವನ್ನು ಬೈತುದ್ದುಆದಲ್ಲಿ ಪ್ರಾರ್ಥಿಸುತ್ತಾ ವಿನಿಯೋಗಿಸಿದರು. ಸ್ವಾಗತ ಸಮಾರಂಭ ನಡೆದ ಕೂಡಲೇ ಬೈತುದ್ದುಆಕ್ಕೆ ಹೋಗಿ ಕೃತಜ್ಞತೆಯ ನಮಾಜನ್ನು ಮಾಡಿದರು. ಅನಂತರ ರಾತ್ರಿಯಲ್ಲಿ ಹಲವಾರು ಸಾರಿ ಬೈತುದ್ದುಆಕ್ಕೆ ಹೋಗಿ ನಮಾಜನ್ನು ಮಾಡಿದರಲ್ಲದೆ ಹಲವಾರು ಇತರ ಪ್ರಾರ್ಥನೆಗಳನ್ನು

ಮತ್ತು ಝಿಕ್ರ್ (ದೇವ ಸ್ಮರಣೆ) ಮಾಡುತ್ತಿದ್ದರು. ತಾ. 26ರಂದು ಫಜರ್ ಪ್ರಾರ್ಥನೆಯ ನಂತರ ಅಹ್ಮದಿಯಾ ಜಮಾಅತಿನ ಸ್ಥಾಪಕರ ಸಮಾಧಿಯ ಬಳಿ ಮಾಡಿದ ದೀರ್ಘವಾದ ಹೃದಯಸ್ಪರ್ಶಿ ಪ್ರಾರ್ಥನೆಯನ್ನು ನೋಡಿ ಪತ್ರಿಕಾ ವರದಿಗಾರರೂ ಇತರ ಮಹನೀಯರೂ ಬಹಳ ಪ್ರಭಾವಿತರಾಗಿದ್ದರು. ಅನಂತರ ಅವರು ತನ್ನ ಕೆಲವು ಹಿರಿಯರ ಸಮಾಧಿಯ ಬಳಿ ನಿಂತು ಸಹ ಪ್ರಾರ್ಥಿಸಿದರು. ಅವರು ಖಾದಿಯಾನಿನಲ್ಲಿ ಅಹ್ಮದಿಯಾ ಪ್ರಚಾರ ವಿಭಾಗದ ಶೋ ರೂಮನ್ನೂ ಅಲ್ಲಿನ ಮಸ್ಜಿದ್ ಅಕ್ಸಾವನ್ನೂ ಸಂದರ್ಶಿಸಿದರು.

### ಪ್ರಧಾನ ಮಂತ್ರಿಯ ಭೇಟಿ

ಜನವರಿ 27ರಂದು ಪ್ರೊ| ಸಲಾಂ ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾ ಗಾಂಧಿಯನ್ನು ಭೇಟಿಮಾಡಿ ಕೆಲಹೊತ್ತು ಸಂಭಾಷಣೆ ನಡೆಸಿದರು.

## ಪೋಪರಿಂದ ಪ್ರೊ| ಸಲಾಮರ ನೇಮಕ

ನೋಬೆಲ್ ಪ್ರಶಸ್ತಿ ವಿಜೇತ ಪಾಕಿಸ್ತಾನಿ ವಿಜ್ಞಾನಿ ಪ್ರೊಫೆಸರ್ ಅಬ್ದುಸ್ಸಲಾಮರನ್ನು ಪೋಪ್ ಪಾಲ್ ಅವರು ಚರ್ಚಿನ ಅಧೀನದಲ್ಲಿರುವ ವೈಜ್ಞಾನಿಕ ಅಕಾಡೆಮಿಯಲ್ಲಿ ಅಂಗವಾಗಿ ನೇಮಕಮಾಡಿರುವರು. ಹಂಗರಿ, ಅಮೇರಿಕ, ಸ್ವಿಟ್ಜರ್ಲೆಂಡ್, ಜರ್ಮನಿ, ಇಂಡಿಯಾ, ಕೆನ್ಯಾ, ಆಸ್ಟ್ರೇಲಿಯಾ ಎಂಬೀ ದೇಶಗಳ 12 ವಿಜ್ಞಾನಿಗಳನ್ನು ಸಹ ನಿಯಮಿಸಲಾಗಿದೆ.

(ಪ್ರಬೋಧನಂ ವಾರಪತ್ರಿಕೆ, 6–6–81)

## ಪ್ರೊ| ಸಲಾಂ ಮನೆ ರಾಷ್ಟ್ರೀಯ ಸ್ಮಾರಕ

ಇಸ್ಲಾಮಾಬಾದ್, ಜುಲಾಯಿ 5: ಪಾಕಿಸ್ತಾನದ ನೊಬೆಲ್ ವಿಜೇತ ವಿಜ್ಞಾನಿ ಪ್ರೊ| ಅಬ್ದುಸ್ ಸಲಾಂ ಅವರು ಜನಿಸಿದ ಎರಡು ಕೊಠಡಿಗಳ ಇಟ್ಟಿಗೆ ಮನೆಯನ್ನು ಪಾಕ್ ಸರಕಾರ ರಾಷ್ಟ್ರೀಯ ಸ್ಮಾರಕವೆಂದು ಘೋಷಿಸಿದೆ.

ಇಲ್ಲಿಂದ 270 ಕಿ. ಮೀ. ದಕ್ಷಿಣಕ್ಕಿರುವ ಝಾಂಗ್ ಪಟ್ಟಣದಲ್ಲಿದೆ ಆ ಮನೆ. ಅದನ್ನು ಬಲಪಡಿಸಲು 51,000 ಡಾಲರುಗಳನ್ನೂ ಅದರ ಸುಸ್ಥಿತಿಯನ್ನು ನೋಡಿಕೊಳ್ಳಲು ತಿಂಗಳಿಗೆ 1,000 ರೂ. ಗಳನ್ನೂ ವೆಚ್ಚಮಾಡಲು ಪಾಕ್ ಸರಕಾರ ನಿರ್ಧರಿಸಿದೆ.

ಪ್ರೊ| ಅಬ್ದುಸ್ ಸಲಾಂ ಈ ಮನೆಯಲ್ಲಿ 1926 ರಲ್ಲಿ ಜನಿಸಿದ್ದರು.

(ಉದಯವಾಣಿ, ಜುಲಾಯಿ 6, 1981).

[ವರದಿ ಸಂಗ್ರಹ: M. U., M. Y.]


ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್‌ರವರ

# ಮೈತ್ರಿ ಸಂದೇಶ

"……ಹಿಂದೂ ಮುಸ್ಲಿಂ ಮೈತ್ರಿಗಾಗಿ ನೀಡಿದ ಈ ಸಂದೇಶ ತುಂಬಾ ಮಹತ್ವದ್ದು, ಹಿಂದೂಗಳೂ ಮುಸ್ಲಿಮರೂ ಸಮಾನವಾಗಿ ಪರಿಶೀಲಿಸಬೇಕಾದ ಗ್ರಂಥವಿದು……" —ಉದಯವಾಣಿ.

"……ಭಿನ್ನ ಧರ್ಮೀಯರಲ್ಲಿ ಮೈತ್ರಿ ಬೆಸೆಯಬಲ್ಲ ಲೇಖನ……" —ನವಭಾರತ

ಪುಟಗಳು: 48 ಬೆಲೆ: ಒಂದು ರೂಪಾಯಿ ಅಂಚೆ ವೆಚ್ಚ: ಉಚಿತ

ಬರೆಯಿರಿ: The Editor, YUGARASHMI Kannada Quarterly,
10-23/1008, Ansari Road, Bunder, Mangalore–575 001.

# ಖುರ್‌ಆನ್ ಭಾಷಾಂತರಕ್ಕೆ ಮುಟ್ಟುಗೋಲು! —

## ಅನುಚಿತ ಕ್ರಮ

ಪಾಕಿಸ್ತಾನದ ಪಂಜಾಬ್ ಪ್ರಾಂತೀಯ ಸರಕಾರ ಅಹ್ಮದಿಯಾ ಜಮಾಅತಿನ ಎರಡನೆಯ ಖಲೀಫ ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್ ಅವರಿಂದ ವಿರಚಿತವಾದ ಪವಿತ್ರ ಖುರ್‌ಆನಿನ ಉರ್ದು ಭಾಷಾಂತರಕ್ಕೆ ಮುಟ್ಟುಗೋಲು ಹಾಕಿದುದು ವರದಿಯಾಗಿದೆ. ಆ ಭಾಷಾಂತರ ಹಿಂದಿನ ಭಾಷಾಂತರಕಾರರನ್ನು ಅನುಸರಿಸದೆ ಹೊಸ ಅರ್ಥಗಳಿಂದ ಕೂಡಿದ್ದು ಪಾಕಿಸ್ತಾದನ ಮುಸ್ಲಿಮರನ್ನು ತಪ್ಪುದಾರಿಗೆಳೆಯುವುದು ಈ ಮುಟ್ಟುಗೋಲಿಗೆ ಕಾರಣವೆಂದು ಸರಕಾರಿ ಅಧಿಕಾರಿಗಳ ಅಂಬೋಣ.

ಪವಿತ್ರ ಖುರ್‌ಆನ್ ತನ್ನ ಕುರಿತು ಲಾ ಯಮಸ್ಸಹೂ ಇಲ್ಲಲ್ ಮುತಹ್ಹರೂನ್ (ಪರಿಶುದ್ಧಾತ್ಮರಾಗಿ ದೈವಿಕ ಸಾಮೀಪ್ಯವನ್ನು ಗಳಿಸಿದವರಿಗೆ ಮಾತ್ರ ಅದರ ಜ್ಞಾನ ದೊರಕುತ್ತದೆ) ಎಂದು ಹೇಳುತ್ತಿರುವಾಗ, ಕೆಲವು ಗತಿಸಿಹೋದ ಮಹಾತ್ಮರು ಪವಿತ್ರ ಖುರ್‌ಆನಿಗೆ ನೀಡಿದ ಅರ್ಥವ್ಯಾಖ್ಯಾನಗಳಲ್ಲಿ ಎಲ್ಲವೂ ಮುಗಿದು ಪರಿಪೂರ್ಣವಾಯಿತೆಂದು ಭಾವಿಸುವುದು ತಪ್ಪು.

ಅಹ್ಮದಿಯಾ ಜಮಾಅತಿನ ಎರಡನೆಯ ಖಲೀಫರು ಬರೆದ ಅರ್ಥ ಅರಬಿ ಭಾಷೆಯ ನುಡಿಗಟ್ಟುಗಳಿಗೆ ವಿರುದ್ಧವೂ ಸಂದರ್ಭೋಚಿತವೂ ಆಗಿಲ್ಲದಿದ್ದರೆ ಮೇಲಿನ ಆಕ್ಷೇಪ ಸರಿಯೆಂದು ಭಾವಿಸಬಹುದಿತ್ತು. ಇದಕ್ಕೆ ತಕ್ಕುದಾದ ಉದಾಹರಣೆ ಕೊಟ್ಟು ವಿವರಿಸಬೇಕಾಗಿತ್ತು. ಆದರೆ ಆ ರೀತಿಯ ಯಾವುದೇ ಉದಾಹರಣೆ ಮೇಲಿನ ಸರಕಾರಿ ಪ್ರಕಟಣೆಯಲ್ಲಿ ನೀಡಿಲ್ಲ. ಪ್ರಸ್ತುತ ಭಾಷಾಂತರದಿಂದ ಹಿಂದಿನ ಪ್ರವಾದಿಗಳ ಅವಹೇಳನವಾಗಿದ್ದರೆ ಅದರ ಉದಾಹರಣೆ ಸಹ ಕೊಡಬಹುದಿತ್ತು. ಕೆಲವು ಪ್ರವಾದಿಗಳು ಸುಳ್ಳು ಹೇಳಿದರೆಂದೂ ವ್ಯಭಿಚಾರಕ್ಕೆ ಮನಸ್ಸು ಮಾಡಿದರೆಂದೂ ಪರಸ್ತ್ರೀಯರನ್ನು ಮೋಹಿಸಿದರೆಂದೂ ಬರೆದ ಎಷ್ಟೋ ಭಾಷಾಂತರಗಳು ಚಾಲ್ತಿಯಲ್ಲಿರುವಾಗ, ಪ್ರವಾದಿಗಳೆಲ್ಲರನ್ನೂ ಆದರಪೂರ್ವಕವಾಗಿ ಕಂಡು ಅವರ ಮೇಲೆ ಹೊರಿಸಲಾದ ಎಲ್ಲಾ ಆರೋಪಗಳನ್ನು ಖಂಡಿಸಿರುವ ಈ ಭಾಷಾಂತರಕ್ಕೆ ಮುಟ್ಟುಗೋಲು ಹಾಕಿದುದು ನಿಜವಾಗಿಯೂ ಬಹಳ ಅತಿರೇಕ ವರ್ತನೆಯಾಯಿತು.

ಮೇಲಿನ ಪವಿತ್ರ ಖುರ್‌ಆನ್ ಭಾಷಾಂತರ ರಚಿಸಿದ ಮಹಾತ್ಮರ ಕುರಿತು ಅಹ್ಮದೀಯರಲ್ಲದ ಅನೇಕ ಮುಸ್ಲಿಂ ವಿದ್ವಾಂಸರು ಅಭಿಪ್ರಾಯಗಳನ್ನು ವ್ಯಕ್ತಗೊಳಿಸಿರುವರು. ಉದಾಹರಣೆಗಾಗಿ :—

1. ಪ್ರಸಿದ್ಧ ಉರ್ದು ಕವಿ ಅಲ್ಲಾಮ ಇಕ್ಬಾಲ್ ಅವರ ಅಧ್ಯಕ್ಷತೆಯಲ್ಲಿ ಮಾರ್ಚ್ 3, 1927 ರಂದು ಜರಗಿದ ಒಂದು ಸಭೆಯಲ್ಲಿ "ಧರ್ಮ ಮತ್ತು ವಿಜ್ಞಾನ" ಎಂಬ ವಿಷಯದ ಬಗ್ಗೆ ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್ ಸಾಹೇಬರ ಭಾಷಣ ಕೇಳಿದ ನಂತರ ಅಲ್ಲಾಮ ಇಕ್ಬಾಲ್ ತನ್ನ ಅಧ್ಯಕ್ಷ ಭಾಷಣದಲ್ಲಿ ಹೀಗೆ ಹೇಳಿದರು: "ಇಂತಹ ಜ್ಞಾನಪ್ರದವಾದ ಭಾಷಣ ಬಹಳ ಕಾಲದ ನಂತರ ಲಾಹೋರಿನಲ್ಲಿ ಕೇಳುವ ಸುಸಂದರ್ಭ ದೊರೆಯಿತು. ಮಿರ್ಝಾ ಸಾಹೇಬರು ಪವಿತ್ರ ಖುರ್‌ಆನಿನ ವಚನಗಳನ್ನು ಉಲ್ಲೇಖಿಸಿ ಮಾಡಿದ ವಿವರಣೆಗಳು ಉತ್ತಮವಾಗಿದ್ದುವು... ನಾನು ನನ್ನ ಭಾಷಣವನ್ನು ಹೆಚ್ಚು ದೀರ್ಘಗೊಳಿಸಲು ಇಚ್ಛಿಸುವುದಿಲ್ಲ. ಈ ಭಾಷಣದಿಂದ ನನಗೆ ದೊರಕಿದ ಹುಮ್ಮಸ್ಸು ಬೇಗನೆ ಮಾಯವಾಗದಿರಲೆಂಬ ಉದ್ದೇಶದಿಂದ ನಾನು ನನ್ನ ಭಾಷಣವನ್ನು ಮುಗಿತಾಯಗೊಳಿಸುತ್ತೇನೆ". (ಅಲ್‌ಫಝ್ಲ್ 15-3-1927)

2. ಇಂಗ್ಲಿಷ್ ಭಾಷೆಯಲ್ಲಿ ಪವಿತ್ರ ಖುರ್‌ಆನಿನ ಅರ್ಥವನ್ನೂ ವ್ಯಾಖ್ಯಾನವನ್ನೂ ಬರೆದ, "ಸಿದ್‌ಕೆ ಜದೀದ್" ಎಂಬ ಉರ್ದು ವಾರಪತ್ರಿಕೆಯ ಸಂಪಾದಕರಾಗಿದ್ದ ಮೌಲಾನ ಅಬ್ದುಲ್ ಮಾಜಿದ್ ಸಾಹೇಬ್ ದರಿಯಾಬಾದಿ ಈ ರೀತಿ ಬರೆದಿರುತ್ತಾರೆ :

"ಅವರ ಬೇರೆ ವಿಶ್ವಾಸಗಳು ಏನೇ ಆಗಿದ್ದರೂ ಖುರ್‌ಆನ್ ಮತ್ತು ಖುರ್‌ಆನಿನ ಜ್ಞಾನದ ಜಾಗತಿಕ ಪ್ರಚಾರಕ್ಕಾಗಿ ಹಾಗೂ ಇಸ್ಲಾಮನ್ನು ಜಗತ್ತಿನಾದ್ಯಂತ ಪ್ರಚಾರಗೊಳಿಸುವ ಸದುದ್ದೇಶದಿಂದ ಅವರು

ತನ್ನ ದೀರ್ಘಕಾಲದ ಜೀವನದಲ್ಲಿ ಕೈಗೊಂಡ ಪರಿಶ್ರಮ ಗಳ ಪ್ರತಿಫಲವನ್ನು ಅಲ್ಲಾಹನು ಅವರಿಗೆ ನೀಡಲಿ; ಅವರ ಈ ಸೇವೆಯ ಪ್ರತಿಫಲವಾಗಿ ಅವರ ನ್ಯೂನತೆ ಗಳನ್ನು ಕ್ಷಮಿಸಲಿ. ಅವರು ಪವಿತ್ರ ಖುರ್‌ಆನಿನ ಕುರಿತು ಮಾಡಿರುವ ವ್ಯಾಖ್ಯಾನಗಳೂ ಅರ್ಥ ವಿವರಣೆಗಳೂ ಉನ್ನತ ಜ್ಞಾನಮಟ್ಟವನ್ನು ಹೊಂದಿದ್ದು ಅವು ವಿಶಿಷ್ಟ ಸ್ಥಾನ ಗಳಿಸಿವೆ."

3. "ನಿಗಾರ್" ಉರ್ದು ಮಾಸಪತ್ರಿಕೆಯ ಸಂಪಾದಕ ಮತ್ತು ಮಹಾಪಂಡಿತರಾಗಿದ್ದ ನಿಯಾಝ್ ಫತಹ್‌ಪುರಿ ತನ್ನ 5-10-1957ರ ಪತ್ರದಲ್ಲಿ ಅಹ್ಮದಿಯಾ ಜಮಾಅತಿನ ಎರಡನೆಯ ಖಲೀಫರ ಪವಿತ್ರ ಖುರ್‌ಆನ್ ವ್ಯಾಖ್ಯಾನವಾದ "ತಫ್ಸೀರ್ ಕಬೀರ್" ಗ್ರಂಥದ ಒಂದು ಸಂಪುಟವನ್ನು ಓದಿದ ನಂತರ ಅದರ ಲೇಖಕರ ಕುರಿತು ಈ ರೀತಿ ಬರೆದಿರುತ್ತಾರೆ :—

"ಪವಿತ್ರ ಖುರ್‌ಆನಿನ ಅಧ್ಯಯನದ ಕುರಿತು ಹೊಸತಾದೊಂದು ಚಿಂತನಾ ಮಾರ್ಗವನ್ನು ಅವರು ತೆರೆದಿರುವರೆಂಬುದರಲ್ಲಿ ಯಾವುದೇ ಸಂಶಯವಿಲ್ಲ. ಬುದ್ಧಿಯನ್ನೂ ವರ್ತನೆಯನ್ನೂ ಬಹಳ ಚಲೋದಾಗಿ ಸಮನ್ವಯಗೊಳಿಸಿ ವಿವರಿಸಲಾದ ಸರ್ವ ಪ್ರಥಮ ವ್ಯಾಖ್ಯಾನ ಗ್ರಂಥ ಇದಾಗಿದೆ. ಅವರ ಬೃಹತ್ತಾದ ಜ್ಞಾನ, ಅವರ ವಿಶಾಲ ದೃಷ್ಟಿ, ಅವರ ಅನ್ಯಾದೃಶವಾದ ಜಾಣ್ಮೆ, ಅವರ ವಿವರಣಾ ನೈಪುಣ್ಯತೆಯ ಸೌಂದರ್ಯ, ಅದರ ಒಂದೊಂದು ಶಬ್ದಗಳಿಂದಲೂ ವ್ಯಕ್ತವಾಗುತ್ತಲಿವೆ."

ಮೇಲಿನ ಪ್ರಶಂಸೆಗಳಿಗೆ ಪಾತ್ರರಾದ ಮಹಾತ್ಮರ ನಿಧನದ 16 ವರ್ಷಗಳ ನಂತರ ಕೇವಲ ಅಹ್ಮದೀಯರ ಮನಸ್ಸನ್ನು ಘಾಸಿಗೊಳಿಸುವ ಏಕಮಾತ್ರ ಉದ್ದೇಶದಿಂದ ಅನ್ಯಾಯವಾಗಿ ಈ ಮುಟ್ಟುಗೋಲು ಹಾಕಲಾಗಿದೆ.

ಪವಿತ್ರ ಖುರ್‌ಆನಿನ ಕೆಲವು ಪದಗಳ ಕುರಿತು ಅಹ್ಮದಿ ಮುಸ್ಲಿಮ್ ಮತ್ತು ಇತರ ಮುಸ್ಲಿಂ ಪಂಗಡಗಳ ವಿದ್ವಾಂಸರ ಮಧ್ಯೆ ಅಭಿಪ್ರಾಯ ವ್ಯತ್ಯಾಸಗಳಿವೆ ಸರಿ. ಆದರೆ ಅಹ್ಮದಿಯರು ಈ ವಿವಾದಕ್ಕೆ ಗುರಿಯಾದ ಪದಗಳಿಗೆ ನೀಡುವ ಅರ್ಥ ಅರಬಿ ಭಾಷೆಯ ನಿಘಂಟುಗಳಿಗೂ ಅರಬಿ ಭಾಷೆಯ ಪದ ಪ್ರಯೋಗಗಳಿಗೂ ಪವಿತ್ರ ಖುರ್‌ಆನಿನ ವಿವಿಧ ಅಧ್ಯಾಯಗಳಲ್ಲಿ ವ್ಯಕ್ತವಾಗಿರುವ ಪದಪ್ರಯೋಗಗಳಿಗೂ ವಿರುದ್ಧವಾಗಿವೆಯೆಂದು ತೋರಿಸಲು ಯಾರಿಂದಲೂ ಸಾಧ್ಯವಾಗಿಲ್ಲ.

ಪವಿತ್ರ ಖುರ್‌ಆನ್ ಅಗಾಧವಾದ ಜ್ಞಾನಭಂಡಾರವಾಗಿದ್ದು ಅವರವರ ಯೋಗ್ಯತೆಗನುಸಾರವಾಗಿ ವ್ಯಾಖ್ಯಾನಗಾರರು ಅದರಿಂದ ಜ್ಞಾನವನ್ನು ಪಡೆದರು. ಆದರೆ ಎಲ್ಲರೂ ಒಂದೇ ರೀತಿಯ ಜ್ಞಾನವನ್ನು ಗಳಿಸಲಿಲ್ಲ. ಈ ಕಾರಣದಿಂದಲೇ ವಿವಿಧ ವ್ಯಾಖ್ಯಾನಗಾರರು ವಿವಿಧ ವಿವರಣೆಗಳನ್ನು ನೀಡಿದರು. ಆದರೆ ಇದರಿಂದಾಗಿ ಪವಿತ್ರ ಖುರ್‌ಆನಿನ ಮಹತ್ವಕ್ಕೆ ಯಾವುದೇ ಕುಂದುಂಟಾಗುವುದಿಲ್ಲ. ಸರ್ವಶಕ್ತನಾದ ಅಲ್ಲಾಹನ ವಚನಗಳಾದ ಪವಿತ್ರ ಖುರ್‌ಆನಿನಿಂದ ವಿವಿಧ ಕಾಲಘಟ್ಟಗಳಲ್ಲಿ ವಿಭಿನ್ನ ರೀತಿಯ ಜ್ಞಾನ ಭಂಡಾರಗಳು ಗೋಚರವಾಗುವುದೆಂಬುದೊಂದು ಚಾರಿತ್ರಿಕ ಸತ್ಯವಾಗಿದೆ.

ಅಹ್ಮದಿಯರು ಪವಿತ್ರ ಖುರ್‌ಆನಿನ ಕೆಲವು ಪದಗಳಿಗೆ ನೀಡಿರುವ ಅರ್ಥಗಳ ಕುರಿತು ವಿವಾದಗಳು ಇಂದು ನಿನ್ನೆಯದಲ್ಲ. ಕಳೆದ 92 ವರ್ಷಗಳಿಂದ ಇವುಗಳ ಕುರಿತು ವಿವಾದಗಳು ನಡೆಯುತ್ತಿದ್ದು ಲಕ್ಷಾಂತರ ವಾದ ಪ್ರತಿ ವಾದಗಳು ನಡೆದಿವೆ. ಮೇಲಿನ ಭಾಷಾಂತರ ಸಹ ಇಂದು ನಿನ್ನೆಯದಲ್ಲ. ಅದು ಪ್ರಕಟವಾಗಿ ಮೂರು ದಶಕಗಳಾಗಿವೆ. ಅಹ್ಮದಿಯರಾದ ನಾವು ನಮ್ಮ ವಿಶ್ವಾಸಗಳಿಗೆ ಮೂಲಾಧಾರವಾಗಿ ಪವಿತ್ರ ಖುರ್‌ಆನನ್ನು ಹೊಂದಿಕೊಂಡಿದ್ದು ಈ ಪವಿತ್ರ ಗ್ರಂಥವನ್ನು ನಾವು ಯಾವುದೇ ದುರುದ್ದೇಶದಿಂದ ಉಪಯೋಗಿಸಿದರೆ ಖಂಡಿತವಾಗಿಯೂ ಮಹಾ ಬಲಶಾಲಿಯಾದ ಅಲ್ಲಾಹನ ಕ್ರೋಧಕ್ಕೆ ಪಾತ್ರರಾಗುವೆವೆಂದು ನಮ್ಮ ದೃಢ ವಿಶ್ವಾಸವಾಗಿದೆ. ಈ ವಿಷಯದಲ್ಲಿ ಸರಕಾರ ಯಾವುದೇ ಕಾರ್ಯಕ್ರಮ ಜಾರಿಗೊಳಿಸುವ ಅಗತ್ಯವಿಲ್ಲ. ಅಲ್ಲಾಹನ ಕೋಪದಿಂದ ರಕ್ಷಣೆ ಪಡೆಯುವವರಾರು ?

ಮೇಲಿನ ಪವಿತ್ರ ಖುರ್‌ಆನಿನ ಭಾಷಾಂತರ ಪವಿತ್ರ ಖುರ್‌ಆನಿನ ಮಹತ್ವಕ್ಕೆ ಯಾವುದೇ ನ್ಯೂನತೆ ಉಂಟು ಮಾಡುವುದಿಲ್ಲವೆಂದೂ ಅದು ಪವಿತ್ರ ಖುರ್‌ಆನಿನ ಅಗಾಧವಾದ ಜ್ಞಾನಭಂಡಾರಕ್ಕೆ ಒಂದು ಪ್ರವೇಶ ದ್ವಾರದಂತಿದೆಯೆಂದೂ ಜಗತ್ತಿನಾದ್ಯಂತ ಒಂದು ಕೋಟಿಯಷ್ಟು ಇರುವ ಅಹ್ಮದಿಯರಾದ ನಮ್ಮ ವಿಶ್ವಾಸವಾಗಿದೆ. ನಮಗೆ ಮೇಲಿನ ಆಜ್ಞೆಯಿಂದ ಅಪಾರವಾದ ದುಃಖ ಉಂಟಾಗಿದೆ. ಈ ಬಗ್ಗೆ ನಮ್ಮ ಪ್ರತಿಭಟನೆ ಸೂಚಿಸುತ್ತಾ ನಾವು ಪಂಜಾಬ್ (ಪಾಕಿಸ್ತಾನ) ಗವರ್ನರರಾದ ಲೆಫ್ಟಿನೆಂಟ್ ಜನರಲ್ ಗುಲಾಮ್ ಜೀಲಾನಿಯವರೊಂದಿಗೂ ಪಾಕಿಸ್ತಾನದ ಅಧ್ಯಕ್ಷರಾದ ಜನರಲ್ ಝಿಯಾವುಲ್ ಹಕ್ಕರೊಂದಿಗೂ ಈ ಆಜ್ಞೆಯನ್ನು ಹಿಂತೆಗೆಯಲು ವಿನಯಪೂರ್ವಕವಾಗಿ ವಿಜ್ಞಾಪಿಸುತ್ತೇವೆ ಹಾಗೂ ಈ ಸಮಸ್ಯೆಯನ್ನು ಯುಕ್ತವಾದ ರೀತಿಯಲ್ಲಿ ಪರಿಹರಿಸುವಂತೆ ಸರ್ವಶಕ್ತನಾದ ಅಲ್ಲಾಹನೊಡನೆ ಪ್ರಾರ್ಥಿಸುತ್ತೇವೆ.

ಪುಸ್ತಕ ವಿಭಾಗ

# ಇಸ್ಲಾಂ ಮತ ತತ್ತ್ವಜ್ಞಾನ

## ( 12 )

ಗ್ರಂಥಕರ್ತ: ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್

ಅನುವಾದಕ: ಮುಹಮ್ಮದ್ ಯೂಸುಫ್

## ಧರ್ಮ ನಿಯಮಾನುಸರಣೆಯ ಫಲ

ನಾಲ್ಕನೆಯ ಪ್ರಶ್ನೆ, ಧರ್ಮ ನಿಯಮಾನುಸಾರ ಜೀವಿಸುವುದರಿಂದ ಮನುಷ್ಯನಿಗೆ ಈ ಲೋಕದಲ್ಲೂ ಪರಲೋಕದಲ್ಲೂ ಉಂಟಾಗುವ ಫಲವೇನೆಂದಾಗಿದೆ. ಇದರ ಉತ್ತರ ಒಂದು ರೀತಿಯಲ್ಲಿ ಒಂದನೆಯ ಪ್ರಶ್ನೆಯನ್ನು ಪ್ರತಿಪಾದಿಸುವಾಗ ನೀಡಲಾಗಿದೆ. ಎಂದರೆ, ದೈವಿಕವಾದ ಪರಿಪೂರ್ಣ ಧರ್ಮದ ಪ್ರಯೋಜನ, ಅದು ಮೃಗತುಲ್ಯನನ್ನು ಮನುಷ್ಯನನ್ನಾಗಿ, ನಂತರ ಅವನನ್ನು ನೈತಿಕ ಗುಣವನ್ನು ಹೊಂದಿದ ಮನುಷ್ಯನನ್ನಾಗಿ, ಕೊನೆಗೆ ಆಧ್ಯಾತ್ಮಿಕ ಸಿದ್ಧಿಗಳನ್ನು ಗಳಿಸಿದ ದೈವಭಕ್ತನನ್ನಾಗಿ ಪರಿವರ್ತಿಸುತ್ತದೆ.

### ಪರಿಪೂರ್ಣ ಮನುಷ್ಯನ ಗುಣಗಳು

ವಿಶೇಷವಾಗಿ, ಧರ್ಮಶಾಸ್ತ್ರಕ್ಕೆ ಮನುಷ್ಯನ ಮೇಲಿರುವ ಸ್ವಾಧೀನ ಶಕ್ತಿಯೇನೆಂದರೆ, ಅದು ಅವನ ಜೀವಿತವನ್ನು ನಿಯಂತ್ರಿಸುತ್ತದೆ. ಈ ನಿಯಂತ್ರಣದ ಪರಿಣಾಮದಿಂದ ಅವನು ಸಮಸೃಷ್ಟಿಗಳ ಹಕ್ಕುಗಳ ಬಗ್ಗೆ ಸರಿಯಾದ ಜ್ಞಾನ ಪಡೆದಿರುತ್ತಾನೆ. ಅವರೊಡನೆ ವರ್ತಿಸುವಾಗ ನೀತಿ, ಪರೋಪಕಾರತೆ, ಸಹತಾಪ ಎಂಬೀ ಸ್ವಭಾವಗಳನ್ನು ಯಥೋಚಿತವಾಗಿ ತೋರ್ಪಡಿಸುತ್ತಾನೆ. ತನಗೆ ದೇವನಿತ್ತ ಜ್ಞಾನ, ಸುಖೈಶ್ವರ್ಯ ಮತ್ತು ಇತರ ಅನುಗ್ರಹಗಳಲ್ಲಿ ಅನ್ಯರನ್ನೂ ಯಥೋಚಿತ ಪಾಲುಗಾರರನ್ನಾಗಿ ಮಾಡುತ್ತಾನೆ. ಸೂರ್ಯನಂತೆ ಅವನು ತನ್ನ ಪ್ರಕಾಶವನ್ನು ಎಲ್ಲರ ಮೇಲೂ ಹರಡುತ್ತಾನೆ. ಚಂದ್ರನಂತೆ ಅವನು ಸರ್ವಪ್ರಕಾಶ ಕೇಂದ್ರವಾದ ದೇವನಿಂದ ಪಡೆಯುವ ಪ್ರಭಾಪೂರವನ್ನು ಅನ್ಯರಿಗೆ ತಲುಪಿಸುತ್ತಾನೆ. ಹಗಲಿನಂತೆ ಅವನು ಪ್ರಕಾಶಭರಿತನಾಗಿ ಸತ್ಯ ಮತ್ತು ಸದ್ಗತಿಯ ಮಾರ್ಗಗಳನ್ನು ಜನರಿಗೆ ತೋರಿಸಿಕೊಡುತ್ತಾನೆ. ರಾತ್ರಿಯಂತೆ ಅವನು ಬಲಹೀನರ ದೌರ್ಬಲ್ಯಗಳನ್ನೂ ಚಾಪಲ್ಯಗಳನ್ನೂ ಮರೆಮಾಡಿ ಬಳಲಿದವರಿಗೆ ವಿಶ್ರಾಂತಿ ನೀಡುತ್ತಾನೆ. ಅವನು ಆಕಾಶದಂತೆ ಅಭಯಾರ್ಥಿಗಳಿಗೆ ಆಶ್ರಯಕೊಟ್ಟು, ಸಂದರ್ಭಾನುಸಾರ ತನ್ನ ಕೃಪಾವೃಷ್ಟಿಯನ್ನು ಅವರ ಮೇಲೆ ಸುರಿಸುತ್ತಾನೆ. ಭೂಮಿಯಂತೆ ಅವನು ಅತ್ಯಂತ ವಿನಯದಿಂದ ಇತರರಿಗೆ ಸುಖ ಕ್ಷೇಮ ನೀಡಲಿಕ್ಕಾಗಿ ಸ್ವಯಂ ಕಷ್ಟವನ್ನು ಸಹಿಸಿಕೊಂಡು ಸಕಲರನ್ನೂ ತನ್ನ ಸಹಾಯವಲಯದಲ್ಲಿ ಒಟ್ಟುಗೂಡಿಸಿಕೊಂಡು ವಿವಿಧ ತರದ ಆಧ್ಯಾತ್ಮಿಕ ಫಲಗಳನ್ನು ಅವರ ಮುಂದಿರಿಸುತ್ತಾನೆ. ಪರಿಪೂರ್ಣ ಧರ್ಮನಿಯಮದಿಂದ ಈ ಬಗೆಯ ಪರಿವರ್ತನೆಯುಂಟಾಗುತ್ತದೆ. ಈ ನಿಯಮಶಾಸ್ತ್ರಕ್ಕನುಸಾರವಾಗಿ ಜೀವಿಸುವವನು ಸೃಷ್ಟಿಕರ್ತನಿಗಾಗಿ ತನ್ನ ಕರ್ತವ್ಯಗಳನ್ನು ಅನುಷ್ಠಿಸಲಿಕ್ಕೂ ಸಮಸೃಷ್ಟಿಗಳಿಗಾಗಿ ತನ್ನ ಹೊಣೆಗಳನ್ನು ಸಂಪೂರ್ಣವಾಗಿ ನಿರ್ವಹಿಸಲಿಕ್ಕೂ ಶಕ್ತನಾಗುತ್ತಾನೆ. ಇಂತಹ ಭಕ್ತನು ದೈವಪ್ರೀತಿಯಲ್ಲಿ ಲೀನನಾಗಿ ಸಮಸೃಷ್ಟಿಗಳ ಯಥಾರ್ಥ ಸೇವಕನಾಗಿ ಮಾರ್ಪಡುತ್ತಾನೆ. ಧರ್ಮಶಾಸ್ತ್ರಕ್ಕನುಗುಣವಾದ ಜೀವಿತ ಮನುಷ್ಯನಲ್ಲಿ ಇಲ್ಲಿ ಉಂಟುಮಾಡುವ ಪ್ರಭಾವ ಇದಾಗಿದೆ.

ಆದರೆ ಮರಣಾನಂತರ ಪರಲೋಕದಲ್ಲಿ ಅವನಿಗೆ ಸಿದ್ಧಿಸುವ ಫಲವಾದರೋ, ದೇವನೊಡನಿರುವ ಆತ್ಮೈಕ್ಯ ಆ ದಿನದಂದು ಪ್ರತ್ಯಕ್ಷದರ್ಶನ ರೂಪದಲ್ಲಿ ಅನುಭವ ವಾಗುತ್ತದೆ. ಸತ್ಯವಿಶ್ವಾಸ ಮತ್ತು ಸತ್ಕರ್ಮಾಸಕ್ತಿಯು ಪ್ರೇರಣೆಯಿಂದ ಅವನು ದೈವಾನುರಾಗಬದ್ಧನಾಗಿ ಮಾಡುವ ಸಮಸೃಷ್ಟಿ ಸೇವೆ ಸ್ವರ್ಗದ ವೃಕ್ಷಗಳಾಗಿಯೂ ನದಿಗಳಾಗಿಯೂ ರೂಪಾಂತರಗೊಳ್ಳುವುವು. ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಲಾಗಿದೆ:

"ವಶ್ಶಮ್ಸಿ ವ ಲುಹಾಹಾ-ವಲ್ ಕಮರಿ ಇದಾ ತಲಾಹಾ-ವನ್ನಹಾರಿ ಇದಾ ಜಲ್ಲಾಹಾ-ವಲ್ಲಯ್ಲಿ ಇದಾ ಯಗ್‌ಶಾಹಾ - ವಸ್ಸಮಾಇ ವಮಾ ಬನಾಹಾ-ವಲ್‌ಅರ್‌ಲಿ ವಮಾ ತಹಾಹಾ - ವ ನಫ್‌ಸಿನ್ ವ್ವಮಾ ಸವ್ವಾಹಾ- ಫಅಲ್‌ಹಮಹಾ ಫುಜೂರಹಾ ವ ತಕ್ವಾಹಾ-ಕದ್ ಅಫ್ಲಹ ಮನ್ ಸಕ್ಕಾಹಾ- ವ ಖದ್‌ಖಾಬ ಮನ್ ದಸ್ಸಾಹಾ- ಕದ್ದಬತ್ ಸಮೂದು ಬಿತಗ್‌ವಾಹಾ - ಇದಿಂಬ ಅಸ ಅಶ್ಕಾಹಾ- ಫಕಾಲ ಲಹುಂ ರಸೂಲುಲ್ಲಾಹಿ ನಾಕತಲ್ಲಾಹಿ ವ ಸುಕ್ಯಾಹಾ - ಫಕದ್ದಬೂಹು ಫಅಕರೂಹಾ ಫದಮ್‌ದಮ ಅಲೈಹಿಂ ರಬ್ಬು ಹುಂ ಬಿದಂಬಿಹಿಂ ಫಸವ್ವಾಹಾ-ವಲಾ ಯಖಾಫು ಉಕ್ಬಾಹಾ." (91 : 2 - 16)

ಸೂರ್ಯ ಮತ್ತು ಅದರ ಪ್ರಕಾಶದ ಸಾಕ್ಷ್ಯ, ಸೂರ್ಯನನ್ನುಹಿಂಬಾಲಿಸುವ (ಎಂದರೆ ಸೂರ್ಯ ದಿಂದ ಪ್ರಕಾಶವನ್ನು ಪಡೆದು ಅದರಂತೆ ಆ ಪ್ರಭಾ ಪೂರವನ್ನು ಅನ್ಯರಿಗೆ ವಿತರಣೆ ಮಾಡುವ) ಚಂದ್ರನ ಸಾಕ್ಷ್ಯ, ಸೂರ್ಯನ ಕಾಂತಿಯನ್ನು ಬಹಿರಂಗ ಪಡಿಸುವ ಮತ್ತು ಮಾರ್ಗಗಳನ್ನು ಸ್ಪಷ್ಟವಾಗಿ ತೋರಿಸುವ ಹಗಲಿನ ಸಾಕ್ಷ್ಯ, ಅಂಧ ಕಾರವನ್ನು ಹರಡಿಸಿ ಸರ್ವವನ್ನೂ ಕತ್ತಲೆಯ ಮರೆಯಲ್ಲಿರಿಸುವ ರಾತ್ರಿಯ ಸಾಕ್ಷ್ಯ, ಆಕಾಶದ ಸಾಕ್ಷ್ಯ ಮತ್ತು ಅದರ ಸೃಷ್ಟಿಯ ಆದಿಕಾರಣದ ಸಾಕ್ಷ್ಯ, ಭೂಮಿಯ ಸಾಕ್ಷ್ಯ ಮತ್ತು ಅದನ್ನು ಹರಡಿಸಿರುವ ಆದಿಕಾರಣದ ಸಾಕ್ಷ್ಯ, ಆತ್ಮದ ಸಾಕ್ಷ್ಯ ಮತ್ತು ಅದನ್ನು ಸರ್ವ ವಸ್ತುಗಳೊಂದಿಗೆ ತುಲ್ಯಗುಣದಲ್ಲಿರಿಸಿದ ಅದರ ಶ್ರೇಷ್ಠತೆಯ ಸಾಕ್ಷ್ಯ, (ಎಂದರೆ, ಈ ವಸ್ತುಗಳಲ್ಲೆಲ್ಲಾ ವ್ಯಷ್ಟಿಯಾಗಿ ಗೋಚರಿಸುವ ಸವಿಶೇಷತೆಗಳೆಲ್ಲಾ ಪರಿಪೂರ್ಣತೆ ಪಡೆದ ಮನುಷ್ಯನ ಆತ್ಮದಲ್ಲಿ ಸಮಷ್ಟಿಯಾಗಿ ಸಮ್ಮಿಳಿತವಾಗಿರುವುದರಿಂದ ಆ ವಸ್ತುಗಳಲ್ಲಿ ಪ್ರತಿಯೊಂದು ಪ್ರತ್ಯೇಕ ಪ್ರತ್ಯೇಕವಾಗಿ ಮಾನವ ಲೋಕಕ್ಕೆ ಗೈಯ್ಯುವ ಸೇವೆಗಳನ್ನೆಲ್ಲಾ ಮೊದಲು ಹೇಳಿದಂತೆ, ಆ ಉತ್ತಮ ಮನುಷ್ಯನು ಒಬ್ಬಂಟಿಗ ನಾಗಿ ನಿರ್ವಹಿಸುವನು). ಹೀಗೆ ಯಾರು ತನ್ನ ಆತ್ಮವನ್ನು ಸಂಸ್ಕರಿಸಿದನೋ, ಎಂದರೆ, ಸೂರ್ಯ ಚಂದ್ರಾದಿಗಳಂತೆ ದೈವೇಚ್ಛೆಗೆ ವಿಧೇಯನಾಗಿ ಮಾನವ ಸೇವೆಯಲ್ಲಿ ನಿರತನಾಗಿರುತ್ತಾನೋ, ಅವನು ಮೋಕ್ಷ ಪಡೆಯುತ್ತಾನೆ; ಮೃತ್ಯುವಿನಿಂದ ವಿಮುಕ್ತನಾಗುತ್ತಾನೆ.

ಇಲ್ಲಿ ಮರಣದಿಂದ ವಿಮುಕ್ತಿ ಅಥವಾ ಅಮರ ಜೀವಿತವೆಂಬುದರ ತಾತ್ಪರ್ಯ ಭಾವೀ ಕಾಲದಲ್ಲಿ ಪರಿ ಪೂರ್ಣ ಸಿದ್ಧಪುರುಷನಿಗೆ ಲಭಿಸುವ ನಿತ್ಯಜೀವನವೆಂದಾ ಗಿದೆ. ಇದರಿಂದ, ಧರ್ಮ ನಿಯಮಾನುಸರಣೆಯಿಂದ ಭಾವೀ ಜೀವಿತದಲ್ಲಿ ಪ್ರಾಪ್ತವಾಗುವ ಪ್ರತಿಫಲವೇನೆಂ ದರೆ, ದೈವದರ್ಶನವೆಂಬ ಅಹಾರದಿಂದ ಶಾಶ್ವತವಾಗಿರು ವಂತಹ ಚಿರಂಜೀವಿತ್ವವೆಂದು ತಿಳಿದು ಬರುತ್ತದೆ.

ಅದೇ ಅಧ್ಯಾಯ ಹೀಗೆ ಮುಂದುವರಿಯುತ್ತದೆ:

ಯಾರು ತನ್ನ ಆತ್ಮವನ್ನು ಮಣ್ಣುಗೂಡಿಸಿ ದನೋ ಅಥವಾ ಕೆಡಿಸಿದನೋ (ಎಂದರೆ, ಉತ್ಕೃಷ್ಟ ಗುಣಗಳನ್ನು ಗಳಿಸಲು ಶಕ್ತಿ ಸಾಮರ್ಥ್ಯ ನೀಡಲ್ಪಟ್ಟಿದ್ದರೂ ಯಾರು ಅದರ ಪ್ರಯೋಜನ ವನ್ನು ಪಡೆಯಲು ಪ್ರಯತ್ನಿಸದೆ ಅಶುದ್ಧ ಜೀವಿತ ನಡೆಸಿ ಈ ಲೋಕವನ್ನು ತ್ಯಜಿಸುವನೋ) ಅವನು ನಾಶ ಹೊಂದುತ್ತಾನೆ; ಜೀವಿತದ ಬಗ್ಗೆ ನಿರಾಶೆ ಪಡುತ್ತಾನೆ.

ಇನ್ನೂ ಉದಾಹರಣೆಯ ರೂಪದಲ್ಲಿ ಆ ಅಧ್ಯಾ ಯ ಮುಂದುವರಿಯುತ್ತದೆ:

ಆತ್ಮವನ್ನು ಕೆಡಿಸಿದ ನಿರ್ಭಾಗ್ಯವಂತನ ಸ್ಥಿತಿ, 'ದೇವನ ಒಂಟೆ' ಎಂದು ಕರೆಯಲ್ಪಟ್ಟ ಒಂಟೆ ಯನ್ನು ಗಾಯಗೊಳಿಸಿ ತಮ್ಮ ಊಟೆಯಿಂದ ನೀರು ಕುಡಿಯದಂತೆ ಮಾಡಿದ 'ಸಮೂದ್' ಜನಾಂಗದವರ ಸ್ಥಿತಿಯೊಡನೆ ಹೋಲುತ್ತದೆ.

ಆತ್ಮವನ್ನು ಶುದ್ಧೀಕರಿಸದ ಭಾಗ್ಯಹೀನರು ವಾಸ್ತವದಲ್ಲಿ 'ದೇವನ ಒಂಟೆ'ಯನ್ನು ಗಾಯಗೊಳಿಸಿ, ತನ್ನ ಬುಗ್ಗೆಯಿಂದ ಅದು ನೀರು ಕುಡಿಯದಂತೆ ತಡೆಯುವವನಿಗೆ ಸಮಾನ. ಇದರಿಂದ ತಿಳಿದು ಬರುವುದೇನೆಂದರೆ, ಮನುಷ್ಯನ ಆತ್ಮ ದೇವನ ಒಂಟೆ; ಅದು ಅವನು ಸವಾರಿ ಮಾಡುವ ವಾಹನ. ಬೇರೆ ಮಾತಿನಲ್ಲಿ ಹೇಳುವುದಾದರೆ, ಮನುಷ್ಯನ ಹೃದಯ ದೇವನ ಮಹಾತ್ಮೆಗಳು ಪ್ರತ್ಯಕ್ಷಗೊಳ್ಳುವ ಸ್ಥಾನವಾಗಿದೆ. ಆ ಒಂಟೆಯ ಬದುಕಿಗೋಸ್ಕರವಿರುವ ನೀರು ದೈವಾನುರಾಗ ಮತ್ತು ದೈವ ಜ್ಞಾನವಾಗಿದೆ.

ಇನ್ನೂ ಅದೇ ಅಧ್ಯಾಯ ಹೀಗೆ ಮುಂದುವರಿಯುತ್ತದೆ:

> ಸಮೂದ್ ಜನಾಂಗದವರು ಒಂಟೆಯನ್ನು ಗಾಯಗೊಳಿಸಿ ನೀರು ಕುಡಿಯದಂತೆ ಅದನ್ನು ತಡೆದಾಗ ಅವರೆಲ್ಲರೂ ನಾಶಕ್ಕೆ ಗುರಿಯಾದರು. ದೇವನು ಅವರ ಮಕ್ಕಳನ್ನೂ ವಿಧವೆಯರನ್ನೂ ಕೂಡ ಲಕ್ಷ್ಯಮಾಡಲಿಲ್ಲ.

ಹೀಗೆ ಯಾವೊಬ್ಬನು ತನ್ನ ಆತ್ಮವೆಂಬ ಒಂಟೆಯನ್ನು ಗಾಯಗೊಳಿಸಿ, ಅದರ ಪರಿಪೂರ್ಣತೆಗೆ ಶ್ರಮಿಸದೆ, ಜೀವನವೆಂಬ ನೀರನ್ನು ಕುಡಿಯುವುದರಿಂದ ಅದನ್ನು ತಡೆಯುವನೋ ಅವನು ಸಹ ನಾಶವಾಗುವನು.

### ಖುರ್‌ಆನಿನ ಪ್ರಮಾಣವಾಕ್ಯಗಳ ತತ್ತ್ವ

ಸೂರ್ಯ ಚಂದ್ರಾದಿ ಸೃಷ್ಟಿ ವಸ್ತುಗಳ ಮೇಲೆ ದೇವನು ಪ್ರಮಾಣ ಮಾಡಿದ್ದುದರಲ್ಲಿ ಗಹನವಾದೊಂದು ತತ್ತ್ವರಹಸ್ಯ ಅಡಕವಾಗಿದೆ. ಈ ರಹಸ್ಯವನ್ನು ಗ್ರಹಿಸದೆ ಇದ್ದುದರಿಂದ ಇಸ್ಲಾಮಿನ ವೈರಿಗಳಲ್ಲಿ ಹಲವರು ಈ ಬಗ್ಗೆ ದೋಷವನ್ನು ಕಾಣುತ್ತಾರೆ. ಪ್ರಮಾಣ ಮಾಡುವುದರ ಅಗತ್ಯ ದೇವನಿಗೇನಿದೆಯೆಂದೂ ಅವನು ಸೃಷ್ಟಿವಸ್ತುಗಳ ಹೆಸರಿನಲ್ಲಿ ಆಣೆ ಹಾಕಿದ್ದು ಏಕೆಂದೂ ಅವರು ಆಕ್ಷೇಪಿಸುತ್ತಾರೆ. ಆದರೆ ಅವರ ತಿಳುವಳಿಕೆ ಕೇವಲ ಭೌತಿಕವಾಗಿರುವುದರಿಂದಲೂ ಅವರಿಗೆ ಆಧ್ಯಾತ್ಮಿಕ ಜ್ಞಾನ ಪ್ರಕಾಶ ಇಲ್ಲದೆ ಇದ್ದುದರಿಂದಲೂ ಪರಮಾರ್ಥ ಜ್ಞಾನವನ್ನು ಗ್ರಹಿಸಲು ಅವರಿಗೆ ಸಾಧ್ಯವಾಗುವುದಿಲ್ಲ. ಈ ವಿಷಯವನ್ನು ಸರಿಯಾಗಿ ತಿಳಿಯಬೇಕಿದ್ದರೆ ಪ್ರಮಾಣದ ಅರ್ಥವನ್ನೂ ಉದ್ದೇಶವನ್ನೂ ಪ್ರಥಮವಾಗಿ ಅರಿತುಕೊಳ್ಳಬೇಕಾಗಿದೆ. ಸಾಮಾನ್ಯವಾಗಿ ಒಂದು ವಿಷಯದಲ್ಲಿ ಪ್ರಮಾಣ ಮಾಡುವುದರ ಉದ್ದೇಶ ಆ ಸಂಗತಿಗೆ ರುಜುವಾತಾಗಿ ಒಂದು ಸಾಕ್ಷ್ಯವನ್ನು ತೋರಿಸುವುದಷ್ಟೇ. ಒಬ್ಬನು ತನ್ನ ವಾದವನ್ನು ರುಜುಪಡಿಯಲು ಸಾಕ್ಷ್ಯವೇನೂ ಇಲ್ಲದಿದ್ದರೆ, ಸರ್ವರಹಸ್ಯಗಳನ್ನು ಅರಿತಿರುವ ಅಂತರ್ಯಾಮಿ ಹಾಗೂ ಸಕಲಕ್ಕೂ ಪ್ರಥಮ ಸಾಕ್ಷಿಯಾಗಿರುವ ದೇವನ ಪ್ರಮಾಣ ಮಾಡುತ್ತಾನೆ. ಈ ಪ್ರಮಾಣೋಚ್ಚರಣೆಯ ನಂತರ ದೇವನು ಮೌನಿಯಾದ್ದು ಮಿಥ್ಯಾ ಪ್ರಮಾಣದ ಫಲವಾಗಿ ತನ್ನ ಮೇಲೆ ದೈವ ಶಿಕ್ಷೆ ಎರಗದಿದ್ದರೆ, ತನ್ನ ವಾದದ ಸತ್ಯತೆಯನ್ನು, ಸಾಕ್ಷಿಗಳು ಅವರ ಹೇಳಿಕೆಗಳಂತೆ, ದೇವನು ಅವನ ಪ್ರವರ್ತನೆ ಮೂಲಕ ದೃಢೀಕರಿಸಿದನೆಂಬ ರೀತಿಯಲ್ಲಿ ಆ ಪ್ರಮಾಣೋಚ್ಚಾರಕನು ದೇವನ ಪ್ರಮಾಣವನ್ನು ಮುಂದಿರಿಸುತ್ತಾನೆ. ಆದರೆ ಸೃಷ್ಟಿ ವಸ್ತುಗಳಿಗೆ ಮನುಷ್ಯನ ರಹಸ್ಯಗಳನ್ನು ಅರಿಯಲಿಕ್ಕಾಗಲಿ ಮಿಥ್ಯಾ ಪ್ರಮಾಣದ ಫಲವಾಗಿ ಅವನನ್ನು ಶಿಕ್ಷಿಸಲಿಕ್ಕಾಗಲಿ ಶಕ್ತಿ ಇಲ್ಲವಾದುದರಿಂದ ಅವನು ಆ ವಸ್ತುಗಳ ಹೆಸರಿನಲ್ಲಿ ಪ್ರಮಾಣ ಮಾಡಬಾರದು. ಒಟ್ಟಾರೆ, ದೇವನು ಪ್ರಮಾಣ ಮಾಡುವುದಕ್ಕೆ ಮನುಷ್ಯರು ಪ್ರಮಾಣ ಮಾಡುವುದರ ಅರ್ಥ ಕಲ್ಪಿಸಬಾರದು. ದೈವಿಕ ಕರ್ಮ ಎರಡು ವಿಧ ಎಂಬುದಾಗಿ ನಿಸರ್ಗದಲ್ಲಿ ಗೋಚರಿಸುವ ದಿವ್ಯ ನಿಯಮ ವ್ಯವಸ್ಥೆಯಿಂದ ತಳಿದು ಬರುತ್ತದೆ. ಒಂದು, ಎಲ್ಲರೂ ತಿಳಿದುಕೊಳ್ಳುವಂತಹ, ಭಿನ್ನಾಭಿಪ್ರಾಯಕ್ಕೆ ಎಡೆಯಿಲ್ಲದ ರೀತಿಯಲ್ಲಿ ಪ್ರತ್ಯಕ್ಷವಾಗಿರುವಂಥವು. ಇನ್ನೊಂದು, ತಿಳಿದುಕೊಳ್ಳುವಾಗ ತಪ್ಪು ಸಂಭವಿಸುವಂಥವು ಹಾಗೂ ಭಿನ್ನಾಭಿಪ್ರಾಯಕ್ಕೆ ಎಡೆಗೊಡುವ ರೀತಿಯಲ್ಲಿ ಅನುಮಾನಾಸ್ಪದವಾಗಿರುವಂಥವು. ಆದುದರಿಂದ, ತನ್ನ ಪ್ರತ್ಯಕ್ಷಕರ್ಮದ ಸಾಕ್ಷ್ಯ ಮೂಲಕ, ಊಹಿಸಿ ತಿಳಿಯಬಹುದಾದ ಅದೃಶ್ಯಕರ್ಮದೆಡೆಗೆ ಮನುಷ್ಯರ ಗಮನವನ್ನು ಸೆಳೆಯುವುದೇ ಸರ್ವಜ್ಞನಾದ ದೇವನು ಪ್ರಮಾಣ ಮಾಡುವುದರ ಉದ್ದೇಶ.

ಮೇಲೆ ಉದ್ಧರಿಸಲಾದ ಪ್ರಮಾಣ ವಾಕ್ಯದಲ್ಲಿ ಪ್ರಸ್ತಾವಿಸಲಾದಂತೆ ಸೂರ್ಯ, ಚಂದ್ರ, ಹಗಲು, ರಾತ್ರಿ, ಆಕಾಶ, ಭೂಮಿ ಇತ್ಯಾದಿಗಳಲ್ಲಿ ಮುಂಚೆ ಹೇಳಿದಂತಹ ಗುಣಗಳಿವೆಯೆಂಬುದು ಸರ್ವವಿದಿತ. ಆದರೆ ಸದೃಶ್ಯ ಗುಣಗಳು ಮನುಷ್ಯನ ಆತ್ಮದಲ್ಲೂ ಸ್ಥಿತಿಗೊಂಡಿವೆಯೆಂಬುದು ಎಲ್ಲರಿಗೂ ತಿಳಿಯುವಷ್ಟು

ಪ್ರಸ್ಫುಟವಲ್ಲ. ಒಟ್ಟಿನಲ್ಲಿ, ದೇವನು ತನ್ನ ವ್ಯಕ್ತಿಕರ್ಮಗಳನ್ನು ಅವ್ಯಕ್ತ ಕಾರ್ಯಗಳ ಪುರಾವೆಗೆ ಸಾಕ್ಷ್ಯವಾಗಿ ತೋರಿಸುತ್ತಾನೆ. ಎಂದರೆ, ಮನುಷ್ಯನ ಜೀವದಲ್ಲಿ ಸ್ಥಿತಿಗೊಂಡಿರುವ ಗುಣಗಳನ್ನು ತಿಳಿಯಲಿಕ್ಕಾಗಿ ಸೂರ್ಯಚಂದ್ರಾದಿಗಳ ಸ್ಪಷ್ಟ ಗುಣಗಳ ಕುರಿತು ಚಿಂತನ ಮಾಡಬೇಕೆಂದೂ ಆಗ ಪ್ರತ್ಯಕ್ಷ ರೂಪದಲ್ಲಿ ಗೋಚರವಾಗುವ ಗುಣಗಳಿಂದ ಆತ್ಮದ ಗುಣಗಳನ್ನು ಅಂದಾಜು ಮಾಡಬಹುದೆಂದೂ ಪ್ರಸ್ತುತ ಪ್ರಮಾಣ ವಾಕ್ಯಗಳು ನಮಗೆ ಕಲಿಸುತ್ತವೆ. ವಾಸ್ತವದಲ್ಲಿ, ಮನುಷ್ಯನನ್ನು ಒಂದು ಚಿಕ್ಕ ಲೋಕವೆಂದು ಹೇಳಬಹುದು. ಅವನ ಆತ್ಮದಲ್ಲಿ ಸಮಸ್ತ ಪ್ರಪಂಚದ ಹ್ರಸ್ವರೂಪ ಅಡಕವಾಗಿದೆ. ಬ್ರಹ್ಮಾಂಡದ ಗ್ರಹಾದಿ ಮಹಾಗೋಳಗಳು ಅವುಗಳ ಶಕ್ತಿವಿಶೇಷಗಳನ್ನು ಜೀವಜಾಲಗಳ ಸೇವೆಗಾಗಿ ವಿನಿಯೋಗಿಸುತ್ತವೆಯಷ್ಟೆ. ಒಟ್ಟಿನಲ್ಲಿ ಅತ್ಯುತ್ಕೃಷ್ಟ ಜೀವಿಯಾದ ಅತ್ಯುನ್ನತ ಸೃಷ್ಟಿಯಾದ ಮನುಷ್ಯನು ಸಮಸೃಷ್ಟಿಗಳಿಗೆ ಒಳಿತು ಮಾಡಲು ಅಸಮರ್ಥನೆಂದು ಭಾವಿಸುವುದು ವಿವೇಕರಹಿತವಾಗಿದೆ,

ಸೂರ್ಯನಲ್ಲಿರುವಂತೆ ಮನುಷ್ಯಾತ್ಮದಲ್ಲೂ ಒಂದು ತೇಜಸ್ಸು, ಅಥವಾ ವಿವೇಕ ಮತ್ತು ಜ್ಞಾನದ ಪ್ರಕಾಶ ಅಡಕಗೊಂಡಿದೆ. ಅದರ ಮೂಲಕ ಲೋಕವನ್ನಿಡೀ ಪ್ರಕಾಶಮಯಗೊಳಿಸಲು ಅವನಿಗೆ ಸಾಧ್ಯವಿದೆ. ಚಂದ್ರನಂತೆ ಅವನು ಸರ್ವ ತೇಜಸ್ಸಿನ ಮೂಲವಾದ ದೇವನಿಂದ ಆತ್ಮದರ್ಶನ, ದಿವ್ಯ ಪ್ರಕಟನೆ, ದಿವ್ಯಜ್ಞಾನ ಇತ್ಯಾದಿಗಳನ್ನು ಪಡೆದು ಮಾನವೀಯ ಪರಿಪೂರ್ಣತೆ ಸಿದ್ಧಿಸದೆ ಅಂಧಕಾರದಲ್ಲಿರುವವರಿಗೆ ಆ ಪ್ರಭಾಪೂರವನ್ನು ವಿತರಣೆ ಮಾಡುತ್ತಾನೆ. ಒಟ್ಟಿನಲ್ಲಿ, ಪ್ರವಾದಿತ್ವ ಪದವಿ ನಿರರ್ಥಕವೆಂದೂ ಸರ್ವೋನ್ನತನಾದ ದೇವನ ಕಡೆಯಿಂದಿರುವ ದೌತ್ಯ, ಧರ್ಮನಿಯಮ ಮತ್ತು ತತ್ತ್ವಗ್ರಂಥಗಳೆಲ್ಲಾ ಸ್ವಾರ್ಥತೆಯಿಂದ ಕೂಡಿದವುಗಳೆಂದೂ ಹೇಳುವುದು ಅವಿವೇಕವಾಗಿದೆ,

ಹಗಲು ಪ್ರಕಾಶಪೂರ್ಣವಾಗಿರುವುದರಿಂದ ಸಕಲ ಮಾರ್ಗಗಳೂ, ಅವುಗಳ ಏರುತಗ್ಗುಗಳೂ ಸ್ಪಷ್ಟವಾಗಿ ಕಾಣಿಸುವ ಪ್ರಕಾರ, ಆಧ್ಯಾತ್ಮಿಕ ಪ್ರಭೆಯು ಹಗಲಿನಂತಿರುವ ಪರಿಪೂರ್ಣ ಮನುಷ್ಯನ ಆವಿರ್ಭಾವದಿಂದ ಎಲ್ಲಾ ಮಾರ್ಗಗಳೂ ಅಡೆತಡೆಗಳೂ ದೃಗ್ಗೋಚರವಾಗುತ್ತವೆ. ಆ ಸತ್ಪುರುಷನು ಸತ್ಯ ಮತ್ತು ಸದ್ಗತಿಯ ಉಜ್ವಲ ಪ್ರಕಾಶ ನೀಡುವ ಹಗಲಾಗಿದ್ದಾನೆ. ಆತನು ಸತ್ಯಾಸತ್ಯಗಳನ್ನು ಗುರುತಿಸಿ ಸನ್ಮಾರ್ಗವನ್ನು ತೋರಿಸಿಕೊಡುತ್ತಾನೆ. ಇದೇ ಪ್ರಕಾರ, ರಾತ್ರಿಯು ಬಳಲಿದವರಿಗೆ ಹೇಗೆ ಆರಾಮ ನೀಡುತ್ತದೆಂದು ನಾವು ಬಲ್ಲೆವು. ಹಗಲು ವೇಳೆ ದುಡಿದು ಆಯಾಸಗೊಂಡ ಶ್ರಮಿಕರು ರಾತ್ರಿ ಕಾಲದಲ್ಲಿ ವಿಶ್ರಾಂತಿಯಿಂದ ಸುಖವಾಗಿ ನಿದ್ರಿಸುತ್ತಾರೆ. ರಾತ್ರಿಯು ಎಲ್ಲರ ಕುಂದು ಕೊರತೆಗಳನ್ನು ಮರೆಮಾಚುವ ಆವರಣ ಸಹ ಆಗಿದೆ. ಈ ರೀತಿಯಲ್ಲಿ ಪರಿಪೂರ್ಣ ಗುಣಗಳಿಂದ ಕೂಡಿದ ದೇವದಾಸನು ಲೋಕಕ್ಕೆ ಸುಖ ಶಾಂತಿ ನೀಡಲು ಆವಿರ್ಭವಿಸುತ್ತಾನೆ. ದೇವನ ಪ್ರೀತಿಪುರಸ್ಸರವಾದ ದಿವ್ಯವಾಣಿ ಮತ್ತು ದಿವ್ಯ ಪ್ರಕಟನೆ ಸಿದ್ಧಿಸಿದ ಆ ಮಹಾಪುರುಷ ವಿವೇಕ ಜ್ಞಾನಿಗಳ ಆಧ್ಯಾತ್ಮಿಕ ಆತಂಕಗಳನ್ನು ನಿವಾರಿಸಿ ಅವರಿಗೆ ಆರಾಮವನ್ನೂ ಮನಶ್ಶಾಂತಿಯನ್ನೂ ನೀಡುತ್ತಾನೆ. ಮಹಾಬುದ್ಧಿಶಾಲಿಗಳಿಗೆ ಸಹ ತಿಳಿದುಕೊಳ್ಳಲು ಸಾಧ್ಯವಾಗದ ಆಧ್ಯಾತ್ಮಿಕ ತತ್ತ್ವಗಳೂ ಜ್ಞಾನರಹಸ್ಯಗಳೂ ಆ ದೇವದಾಸನ ಮುಖಾಂತರ ಬಹಿರಂಗಗೊಂಡು ಗ್ರಾಹ್ಯವಾಗಿ ತೀರುತ್ತವೆ. ದೈವವಚನದ ಪ್ರಕಟನೆ ಮನುಷ್ಯನ ವಿವೇಕ ಶಕ್ತಿಯನ್ನು ತೀಕ್ಷ್ಣಗೊಳಿಸಿ ಅದರ ನ್ಯೂನತೆಗಳನ್ನು ಮರೆಮಾಚಿ ಅದರ ಕುಂದುಕೊರತೆಗಳು ಲೋಕಕ್ಕೆ ಬಹಿರಂಗವಾಗದಂತೆ ತಡೆಯುತ್ತದೆ. ವಿವೇಕಿಗಳು ದೈವವಚನದ ಪ್ರಕಾಶ ಪಡೆದು ಆಂತರಿಕವಾದ ತಮ್ಮ ತಪ್ಪುಗಳನ್ನು ತಿದ್ದಿ ದೈವಪ್ರಕಟನೆಯ ಸಹಾಯ ಗಳಿಸಿ ಲೋಕಾಪವಾದದಿಂದ ಸ್ವಯಂ ರಕ್ಷಿಸಲ್ಪಡುತ್ತಾರೆ. ಆದ್ದರಿಂದಲೇ ಯಾವ ಮುಸ್ಲಿಂ ತತ್ತ್ವಜ್ಞಾನಿಯೂ ಗ್ರೀಕ್ ದಾರ್ಶನಿಕನಾದ ಪ್ಲೇಟೋ (ಅಫ್‌ಲಾತೂನ್) ನಂತೆ ವಿಗ್ರಹಕ್ಕೆ ಬಲಿಯರ್ಪಿಸಲಿಲ್ಲ. ದೈವವಚನದ ಪ್ರಕಾಶಸಿದ್ಧಿಯ ಭಾಗ್ಯ ಗಳಿಸದ ಕಾರಣ ಪ್ಲೇಟೋ ತಪ್ಪು ಗ್ರಹಿಕೆಗೆ ಬಲಿಯಾದನು. ಮಹಾ ತತ್ತ್ವಜ್ಞಾನಿಯಾಗಿದ್ದು ಸಹ ಆತನು ಇಂತಹ ಮೌಢ್ಯವನ್ನು ತೋರಿಸಿದನು. ಆದರೆ ಮುಸ್ಲಿಂ ತತ್ತ್ವಜ್ಞಾನಿಗಳನ್ನು ಈ ರೀತಿಯ ವಿವೇಕರಹಿತ ಕ್ರಿಯೆಗಳಿಂದ ನಿರೋಧಿಸಿದ್ದು ಪ್ರವಾದಿ ಶ್ರೇಷ್ಠ ಮುಹಮ್ಮದ್ ಮುಸ್ತಫಾ(ಸ)ರ ಮಾರ್ಗದರ್ಶನವೆಂಬುದು ನಿಸ್ಸಂದೇಹ. ಹೀಗೆ ದೈವವಚನ ರಾತ್ರಿಯ ಹಾಗೆ ವಿವೇಕಿಗಳಿಗೆ ಒಂದು ಆವರಣವಾಗುತ್ತದೆ,

ಪರಿಪೂರ್ಣತೆ ಸಿದ್ಧಿಸಿದ ದೇವದಾಸನು ಆಕಾಶ ಮಂಡಲದಂತೆ ದುಃಖಿತರಿಗೂ ಕ್ಲೇಶಕ್ಕೆ ಗುರಿಯಾದವ

ರಿಗೂ ತನ್ನ ರಕ್ಷಾಚ್ಛಾಯೆಯಲ್ಲಿ ಆಶ್ರಯ ಕೊಡುತ್ತಾನೆ. ದೈವಿಕವಾಣಿ ಗಳಿಸಿದ ಭಕ್ತಜನರು ಸಾಮಾನ್ಯವಾಗಿಯೂ ದೇವನ ವರಿಷ್ಠದಾಸರಾದ ಪ್ರವಾದಿಗಳು ವಿಶೇಷವಾಗಿಯೂ ತಮ್ಮ ಅನುಗ್ರಹವೃಷ್ಟಿಯನ್ನು, ಆಕಾಶವು ಮಳೆಯನ್ನು ಸುರಿಸುವಂತೆ, ಲೋಕಕ್ಕೆ ಪ್ರದಾನ ಮಾಡುತ್ತಾರೆ. ಮಾತ್ರವಲ್ಲ, ಆ ಮಹಾತ್ಮರಲ್ಲಿ ಭೂಮಿಯ ಗುಣವಿಶೇಷಗಳೂ ಒಳಗೊಂಡಿರುವುದರಿಂದ ಅವರ ಪರಿಶುದ್ಧತೆ ಪಡೆದ ಆತ್ಮಗಳಿಂದ ಉತ್ಕೃಷ್ಟ ಜ್ಞಾನಗಳ ಹಾಗೂ ತತ್ತ್ವ ರಹಸ್ಯಗಳ ವೃಕ್ಷಗಳು ಸಮೃದ್ಧವಾಗಿ ಬೆಳೆದು, ಅವುಗಳ ಶೀತಲಚ್ಛಾಯೆ ಮತ್ತು ಫಲಪುಷ್ಪಾದಿಗಳ ಮುಖಾಂತರ ಲೋಕಕ್ಕೆ ಅನುಗ್ರಹವುಂಟಾಗುತ್ತದೆ. ಹೀಗೆ ನಿಸರ್ಗದಲ್ಲಿ ದೃಗ್ಗೋಚರವಾಗುವ ನಿಯಮಗಳು ಊಹೆಯಿಂದ ಮಾತ್ರ ತಿಳಿಯಬಹುದಾದ ರಹಸ್ಯ ನಿಯಮಗಳಿಗೆ ಸಾಕ್ಷಿ. ಈ ಸಾಕ್ಷ್ಯವನ್ನೇ ಅಗಾಧಜ್ಞ ದೇವನು ಪ್ರಸ್ತುತ ಪ್ರಮಾಣ ವಾಕ್ಯದಲ್ಲಿ ಎತ್ತಿಹೇಳಿದ್ದು. ನೋಡಿರಿ! ಪವಿತ್ರ ಖುರ್‌ಆನಿನಲ್ಲಿ ಒಳಗೊಂಡಿರುವ ವಚನಗಳು ಎಷ್ಟು ಮಾತ್ರ ಅರ್ಥಗರ್ಭಿತವೂ ವಿವೇಕಯುತವೂ ಆಗಿವೆ! ಅವು ಆ ನಿರಕ್ಷರಕುಕ್ಷಿ, ಮರುಭೂಮಿ ನಿವಾಸಿಯ ಮುಖದಿಂದ ಹೊರಟವು. ಅದು ದೇವನ ಸತ್ಯವಾಣಿ ಅಲ್ಲವಾಗಿದ್ದರೆ ಅದರ ತತ್ತ್ವರಹಸ್ಯವನ್ನು ಗ್ರಹಿಸಲಾಗದೆ ವಿವೇಕಿಗಳೂ ವಿದ್ಯಾಸಂಪನ್ನರೆಂದೂ ಹೇಳಲ್ಪಡುವವರು ಅದನ್ನು ಆಕ್ಷೇಪಾರ್ಹವಾಗಿ ಗಣಿಸುತ್ತಿರಲಿಲ್ಲ. ತಮ್ಮ ಪರಿಮಿತ ಬುದ್ಧಿಶಕ್ತಿಯಿಂದ ಮನದಟ್ಟು ಮಾಡಿಕೊಳ್ಳಲು ಅಸಾಧ್ಯವಾದ ಯಾವುದೇ ಸಾರವತ್ತಾದ ವಿಚಾರವನ್ನಾಗಲಿ ಜನರು ಆಕ್ಷೇಪಾರ್ಹವಾಗಿ ಗಣಿಸುವುದು ಸಾಮಾನ್ಯ. ಜ್ಞಾನದಿಂದ ತುಂಬಿದ ಆ ತತ್ತ್ವ ಸಾಮಾನ್ಯ ಬುದ್ಧಿಶಕ್ತಿಗೆ ಅತೀತವೆಂಬುದಕ್ಕೆ ಆ ಆಕ್ಷೇಪಣೆಯೇ ಒಂದು ಸಾಕ್ಷ್ಯವಾಗಿದೆ. ಆದ್ದರಿಂದಲೇ ಸ್ವಂತ ಸಾಮರ್ಥ್ಯದಲ್ಲಿ ಹೆಗ್ಗಳಿಕೆಯನ್ನು ತೋರ್ಪಡಿಸುವ ಬುದ್ಧಿಶಾಲಿಗಳಿಗೆ ಸಹ ಪವಿತ್ರ ಖುರ್‌ಆನಿನ ಪ್ರಮಾಣವಾಕ್ಯದ ಬಗ್ಗೆ ಆಕ್ಷೇಪವುಂಟಾಯಿತು. ಆದರೆ, ಈಗ ಅದರ ರಹಸ್ಯ ಬಹಿರಂಗವಾಗಿ ವಾಸ್ತವಿಕತೆ ಪ್ರತ್ಯಕ್ಷಗೊಂಡುದುದರಿಂದ ವಿವೇಕಶಾಲಿಗಳಿಗೆ ಇನ್ನು ಆಕ್ಷೇಪಿಸಲಿಕ್ಕೆ ಎಡೆಯಿಲ್ಲ; ಬದಲಾಗಿ ಈ ವಾಕ್ಯದ ಬಗ್ಗೆ ಚಿಂತಿಸುವಾಗಲೆಲ್ಲಾ ಅವರು ಆನಂದ ತುಂದಿಲರಾಗುವರು.

ದೈವಿಕ ಸಂಬೋಧನೆ ಮತ್ತು ದೈವಿಕ ಪ್ರಕಟನೆಯ ಆವಶ್ಯಕತೆಯನ್ನೂ ಸತ್ಯತೆಯನ್ನೂ ಸ್ಪಷ್ಟಪಡಿಸಲಿಕ್ಕಾಗಿ ಪವಿತ್ರ ಖುರ್‌ಆನ್ ಇನ್ನೊಂದೆಡೆಯಲ್ಲಿ ಪ್ರಮಾಣ ವಾಕ್ಯದ ರೂಪದಲ್ಲಿ ಪ್ರಾಕೃತಿಕ ನಿಯಮದ ಒಂದು ಸಾಕ್ಷ್ಯವನ್ನು ಉದ್ಧರಿಸುವುದನ್ನು ನೋಡಿರಿ :

"ವಸ್ಸಮಾಇ ದಾತಿರ್ರಜ್‌ಇ – ವಲ್ಅರ್‌ಲ್ದಿ ದಾತಿಸ್ಸದ್‌ಇ–ಇನ್ನಹೂ ಲಕೌಲುನ್ ಫಸ್ಲುನ್‌ವ್ವಮಾ ಹುವ ಬಿಲ್‌ಹಜ್‌ಲಿ" (86 : 12–15)

ಮಳೆಯನ್ನು ಸುರಿಸುವ ಆಕಾಶದ ಸಾಕ್ಷ್ಯ, ಮಳೆ ನೀರಿನ ಸಹಾಯದಿಂದ ಸಸ್ಯಾದಿಗಳನ್ನು ಮೊಳೆಯಿಸುವ ಭೂಮಿಯ ಸಾಕ್ಷ್ಯ; ಖಂಡಿತವಾಗಿಯೂ ಈ ಖುರ್‌ಆನ್ ಸತ್ಯಾಸತ್ಯಗಳನ್ನು ಬೇರ್ಪಡಿಸಿ ತೋರಿಸುವ ದೈವವಚನವಾಗಿದೆ. ಇದು ನಿರರ್ಥಕವೋ ವ್ಯರ್ಥವೋ ಅಲ್ಲ.

ಎಂದರೆ, ದೈವವಚನ ವ್ಯರ್ಥವಾಗಿ ಯಾ ಅಕಾಲದಲ್ಲಿ ಪ್ರಕಟಗೊಳ್ಳಲಿಲ್ಲ. ಅದು ಸೂಕ್ತ ಕಾಲದಲ್ಲಿ ಬರುವ ಮಳೆಯಂತೆ ಯಥಾ ಕಾಲದಲ್ಲಿ ಪ್ರಕಟಗೊಳ್ಳುತ್ತದೆ. ಇಲ್ಲಿ ದೇವನು ತನ್ನ ವಚನವಾದ ಖುರ್‌ಆನಿನ ಸತ್ಯತೆಗೆ ಮೇಲಿನ ಪ್ರಮಾಣವಾಕ್ಯ ರೂಪದಲ್ಲಿ, ಸ್ಪಷ್ಟವಾಗಿ ಗೋಚರಿಸುವ ನಿಸರ್ಗದ ಒಂದು ನಿಯಮವನ್ನು ಸಾಕ್ಷ್ಯವಾಗಿ ಮುಂದಿಟ್ಟಿರುವನು. ಕಾಲೋಚಿತವಾಗಿಯೂ ಹಿತಾನುಸಾರವಾಗಿಯೂ ಆಕಾಶದಿಂದ ಮಳೆ ಸುರಿಯುತ್ತದೆಂಬುದು ಪ್ರಕೃತಿಯಲ್ಲಿ ನಾವು ಕಾಣುವ ಒಂದು ನಿಯಮವ್ಯವಸ್ಥೆಯಷ್ಟೆ. ಭೂಮಿಯಲ್ಲಿ ಕಾಣುವ ಸಸ್ಯಾದಿಗಳಿಗೆಲ್ಲ ಆಶ್ರಯ ಮಳೆನೀರಾಗಿದೆ. ಆಕಾಶದಿಂದ ಮಳೆ ಸುರಿಯದಿದ್ದರೆ ಕ್ರಮೇಣ ಬಾವಿಗಳಲ್ಲಿ ನೀರು ಬತ್ತಿ ಹೋಗುತ್ತದೆ. ಹೀಗೆ, ಭೂಮಿಯ ನೀರಿಗೂ ಮಳೆ ನೀರಿಗೂ ಪರಸ್ಪರ ಬಂಧವಿದೆ. ಆದ್ದರಿಂದಲೇ ಮಳೆ ಬಂದರೆ ಬಾವಿಗಳಲ್ಲಿ ನೀರು ಉಕ್ಕಿ ಬರುತ್ತದೆ. ಏಕೆಂದರೆ, ಆಕಾಶದಿಂದ ಸುರಿಯುವ ಮಳೆ ಭೂಮಿಯ ಅಡಿಯಲ್ಲಿರುವ ನೀರನ್ನು ಮೇಲಕ್ಕೆ ಆಕರ್ಷಿಸುತ್ತದೆ. ಇದೇ ರೀತಿಯ ಒಂದು ಪರಸ್ಪರ ಬಂಧ ದೈವಿಕ ವಾಣಿಗೂ ವಿವೇಕ ಜ್ಞಾನಕ್ಕೂ ಇದೆ. ದಿವ್ಯವಾಣಿ ಆಕಾಶಜಲ ಮತ್ತು ವಿವೇಕ ಜ್ಞಾನ ಭೌಮಿಕಜಲ ಎಂದು ಹೇಳಬಹುದು. ಭೂಮಿಯ ನೀರು ಯಾವಾಗಲೂ ಮಳೆಯ ನೀರಿನಿಂದಾಗಿ ನಿರ್ಮಲ

ವಾಗುತ್ತದೆ. ಹಾಗೆಯೇ ಆಕಾಶ ಜಲವೆಂಬ ದೈವಿಕ ವಚನದ ಪ್ರಕಟನೆ ನಿಲ್ಲಿಸಲ್ಪಟ್ಟರೆ ಭೌಮಿಕ ಜಲವೆಂಬ ವಿವೇಕ ಜ್ಞಾನ ಶುಷ್ಕಗೊಳ್ಳುವುದು ಒಟ್ಟಿನಲ್ಲಿ, ದೈವಿಕ ವಚನ ಸಂಬೋಧಿತನಾದ ಓರ್ವ ಧರ್ಮಾತ್ಮನ ಆಗಮನದಿಂದ ಅನುಗ್ರಹಿಸಲ್ಪಡದೆ ಒಂದು ದೀರ್ಘಕಾಲ ಕಳೆದು ಹೋಗುವುದಾದರೆ, ಮಳೆನೀರಿನ ಅಭಾವದಿಂದ ಭೂಮಿಯ ನೀರು ಬತ್ತಿ ಮಲಿನವಾಗುವ ತರದಲ್ಲಿ, ಮನುಷ್ಯನ ಬುದ್ಧಿಯೂ ಜ್ಞಾನವೂ ಕೆಟ್ಟುಹೋಗುತ್ತವೆ.

ಪ್ರಸ್ತುತ ವಿಚಾರ ಸುಗ್ರಾಹ್ಯವಾಗುವುದಕ್ಕೆ ಪ್ರವಾದಿ ಶ್ರೇಷ್ಠರಾದ ಮುಹಮ್ಮದ್ ಪೈಗಂಬರ್(ಸ) ಅವರ ಆಗಮನಕ್ಕೆ ಮುಂಚೆ ಅಜ್ಞಾನ ಮತ್ತು ಅಧರ್ಮದಿಂದ ಅಂಧಕಾರಮಯವಾಗಿದ್ದ ಲೋಕದೆಡೆ ದೃಷ್ಟಿ ಹಾಯಿಸಿದರೆ ಸಾಕು. ಈಸಾನಬಿಯ (ಯೇಸುಕ್ರಿಸ್ತರ) ಆಗಮನದ ಬಳಿಕ ಅಂದಿಗೆ ಆರುನೂರು ವರ್ಷಗಳು ಕಳೆದಿದ್ದರೂ ಆ ದೀರ್ಘಕಾಲದ ಅವಧಿಯಲ್ಲಿ ದೈವಿಕ ಪ್ರಬೋಧನೆ ಸಿದ್ಧಿಸಿದ ಯಾವ ಸುಧಾರಕನಾಗಲಿ ಆವಿರ್ಭವಿಸಲಿಲ್ಲ. ತನ್ನಿಮಿತ್ತ ಲೋಕದಲ್ಲಿಡೀ ಅಂಧಶ್ರದ್ಧೆಯೂ ಅನಾಚಾರವೂ ಬಲಗೊಂಡಿದ್ದುವು. ಮುಹಮ್ಮದ್ ಪೈಗಂಬರರ ಆಗಮನ ಕಾಲದಲ್ಲಿ ಸಾಮಾನ್ಯವಾಗಿ ಲೋಕದ ಸ್ಥಿತಿ ಈ ರೀತಿ ಅತಿ ದಯನೀಯವಾಗಿತ್ತೆಂದು ಸಕಲ ರಾಜ್ಯಗಳ ಚರಿತ್ರೆಗಳು ಸಾಕ್ಷ್ಯ ವಹಿಸುತ್ತವೆ. ಒಂದು ದೀರ್ಘಕಾಲದ ವರೆಗೆ ದೈವಿಕ ಸಂಬೋಧನಾ ಪರಂಪರೆ ನಿಲ್ಲಿಸಲ್ಪಟ್ಟದ್ದೇ ಈ ಶೋಚನೀಯಾವಸ್ಥೆಗೆ ಕಾರಣವಾಗಿತ್ತು. ಅಂದು ಬುದ್ಧಿಶಕ್ತಿ ಮಾತ್ರದಿಂದ ಸ್ವರ್ಗರಾಜ್ಯದ ಆಡಳಿತೆಯಾಗಿತ್ತು. ದೈವಿಕ ಪ್ರಬೋಧನೆಯ ಪ್ರಕಾಶವನ್ನು ಪಡೆಯದ ಅಪೂರ್ಣ ಬುದ್ಧಿಶಕ್ತಿ ಜನರನ್ನು ಹಲವು ಬಗೆಯ ದುರ್ಮಾರ್ಗಗಳಲ್ಲಿ ಚಲಿಸುವಂತೆ ಮಾಡಿತು. ಹೀಗೆ ದೈವಿಕ ಪ್ರಬೋಧನೆಯೆಂಬ ಮಳೆ ಒಂದು ದೀರ್ಘಕಾಲದವರೆಗೆ ಸುರಿಯದಿದ್ದಾಗ ಬುದ್ಧಿಶಕ್ತಿಯೆಂಬ ನೀರು ಬತ್ತಿಹೋಯಿತು.

ಹೀಗೆ, ದೇವನು ಪ್ರಮಾಣ ವಾಕ್ಯದ ರೂಪದಲ್ಲಿ ಈ ಪ್ರಕೃತಿ ನಿಯಮದ ಕುರಿತು ನಮಗೆ ತಿಳುವಳಿಕೆಯಿತ್ತು ಭೂಮಿಯಲ್ಲಿ ಗೋಚರಿಸುವ ಸಸ್ಯ ಫಲಾದಿಗಳೆಲ್ಲಾ ಆಕಾಶದಿಂದ ಸುರಿಯುವ ಮಳೆ ನೀರನ್ನು ಆಶ್ರಯಿಸಿಕೊಂಡಿವೆ ಎಂಬ ಶಾಶ್ವತ ಹಾಗೂ ಸ್ಪಷ್ಟವಾದ ನಿಸರ್ಗ ನಿಯಮದೆಡೆಗೆ ನಮ್ಮ ಗಮನವನ್ನು ಸೆಳೆಯುತ್ತಾನೆ. ಪ್ರಕೃತಿಯ ಈ ಪ್ರತ್ಯಕ್ಷ ನಿಯಮವು ಪರೋಕ್ಷ ಹಾಗೂ ಅನುಮಾನಸಿದ್ಧ ದೈವಿಕ ವಚನಾಗಮನದ ಸಂಬಂಧಿಸಿದ ನಿಯಮಕ್ಕೆ ಒಂದು ಸಾಕ್ಷ್ಯವಾಗಿದೆ. ಇದರಿಂದ, ನಾವು ಬುದ್ಧಿಶಕ್ತಿಯನ್ನು ಮಾತ್ರ ಏಕ ಮಾರ್ಗದರ್ಶಕವೆಂದು ಭಾವಿಸಬಾರದೆಂದು ತಿಳಿದುಕೊಳ್ಳಬಹುದು. ಏಕೆಂದರೆ ಅದು ದೈವಿಕ ಬೋಧನೆಯೆಂಬ ದಿವ್ಯಜಲದ ಸಂಪರ್ಕವಿಲ್ಲದೆ ನಿರ್ಮಲ ಹಾಗೂ ಪವಿತ್ರಗೊಳ್ಳಲು ಪರ್ಯಾಪ್ತವಾದ ನೀರಲ್ಲ. ಆಕಾಶದಿಂದ ಮಳೆನೀರು ಬಾವಿಗಳಲ್ಲಿ ಬಿದ್ದರೂ ಬೀಳದಿದ್ದರೂ ಕೆಳಗಡೆ ಇರುವ ನೀರನ್ನು ಅದು ಮೇಲಕ್ಕೆ ಉಕ್ಕಿ ಬರುವಂತೆ ಮಾಡುವುದು ಅದರ ಒಂದು ಗುಣವಿಶೇಷವಾಗಿದೆ. ಇದೇ ಪ್ರಕಾರ ದೈವಿಕ ವಚನ ಸಂಬೋಧಿತನಾದ ಧರ್ಮಾತ್ಮನೊಬ್ಬನ ಆಗಮನದ ಕಾರಣದಿಂದ, ಬುದ್ಧಿಶಾಲಿಗಳು ಆತನನು ಅನುಸರಿಸಿದರೂ ಇಲ್ಲವಾದರೂ, ಜನರ ಬುದ್ಧಿಶಕ್ತಿ ಅಭೂತಪೂರ್ವವಾಗಿ ತೀಕ್ಷ್ಣವೂ ನಿರ್ಮಲವೂ ಆಗುತ್ತದೆ. ಅವರು ಸ್ವಯಂ ಸತ್ಯಾನ್ವೇಷಣೆಗೆ ತೊಡಗುತ್ತಾರೆ. ಅವರ ಚಿಂತಾಶಕ್ತಿಗೆ ವಿಶೇಷವಾದೊಂದು ಚಾಲನೆಯುಂಟಾಗುತ್ತದೆ. ಈ ತರದ ಬುದ್ಧಿವಿಕಾಸವೂ ಚೈತನ್ಯವೂ ಉತ್ಸುಕತೆಯೂ ದೈವಿಕ ಸಂದೇಶಗಳಿಸಿದ ಆ ಶ್ರೇಷ್ಠ ಪುರುಷನ ಆಗಮನದ ಅನುಗ್ರಹೀತ ಫಲಗಳಾಗಿವೆ. ಒಟ್ಟಾರೆ, ಜನರು ಸಾಮಾನ್ಯವಾಗಿ ಧರ್ಮತತ್ತ್ವ ಅನ್ವೇಷಣೆಯಲ್ಲೂ ಚಿಂತನೆಯಲ್ಲೂ ಮಗ್ನರಾಗಿ ಕಂಡು ಬರುವುದಾದರೆ–ಬೇರೆ ಮಾತಿನಲ್ಲಿ ಹೇಳುವುದಾದರೆ, ಭೌಮಿಕಜಲಕ್ಕೆ ಚಲನವೂ ಪ್ರವಾಹವೂ ಉಂಟಾದಂತೆ ಗೋಚರಿಸುವುದಾದರೆ–ಆಕಾಶದಿಂದ ಬಿರುಸಾದ ವರ್ಷಧಾರೆ ಉಂಟಾಗಿರಬೇಕೆಂದೂ ದೈವಿಕ ಪ್ರಬೋಧನೆಯೆಂಬ ದೀಪ್ತಿ ಯಾವನೋ ಸತ್ಯಪುರುಷನೊಬ್ಬನ ಹೃದಯದಲ್ಲಿ ಬೆಳಗುತ್ತಿದೆಯೆಂದೂ ತಿಳಿದುಕೊಳ್ಳಬೇಕಾಗಿದೆ. ●

(ಮುಂದುವರಿಯುವುದು)

# ★ ಪ್ರತಿಕ್ರಿಯೆ ★

[ 'ಸನ್ಮಾರ್ಗ' ಪತ್ರಿಕೆಯಲ್ಲಿ ಪ್ರಕಟವಾದ ಒಂದು ಪ್ರಶ್ನೋತ್ತರವನ್ನು ನಮ್ಮ ಪ್ರತಿಕ್ರಿಯೆ ಸಹಿತ ಇಲ್ಲಿ ಕೊಡಲಾಗಿದೆ. –ಸಂ.]

**ಪ್ರಶ್ನೆ:** "ಜಮಾಅತೆ ಇಸ್ಲಾಮಿಯವರು ನಮಾಝ್ ನಿರ್ವಹಿಸದವರನ್ನು 'ಕಾಫಿರ್' ಎಂದು ಹೇಳುತ್ತಾರೆ. ಆದರೆ ನಾವು ಪ್ರವಾದಿವರ್ಯ (ಸ)ರವರ ಮೇಲೆ ಸಲಾತ್ ಹೇಳದವರನ್ನು ಮಾತ್ರ ಆ ರೀತಿಯಾಗಿ ಪರಿಗಣಿಸುತ್ತೇವೆ. ಆದ ಕಾರಣ ನೀವೆಲ್ಲರೂ ಸಲಾತನ್ನು ಊರ್ಜಿತಗೊಳಿಸಬೇಕು." 'ಸೀರತ್' ಸಾರ್ವಜನಿಕ ಸಭೆಯಲ್ಲಿ ಮೌಲವಿಯೋರ್ವರ ಮತಪ್ರಸಂಗ. ನಿಮ್ಮ ಪ್ರತಿಕ್ರಿಯೆ ಏನು ?

**ಉತ್ತರ:** 'ಲಾಇಲಾಹ ಇಲ್ಲಲ್ಲಾಹ್ ಮುಹಮ್ಮದರ್ರಸೂಲುಲ್ಲಾಃ' ಎಂಬ ಪವಿತ್ರ ವಚನದಲ್ಲಿ ವಿಶ್ವಾಸವಿಡುವ ಯಾವನನ್ನೂ ಜಮಾಅತೆ ಇಸ್ಲಾಮಿ ಕಾಫಿರ್ ಎಂದು ಹೇಳುವುದಿಲ್ಲ. ಕಾಫಿರರಿಗೂ ಇಸ್ಲಾಮಿನ ಸಂದೇಶ ಮುಟ್ಟಿಸುವ ಕಾರ್ಯವಲ್ಲದೆ ಮುಸ್ಲಿಮರನ್ನು ಕಾಫಿರ್ ಮಾಡುವ ದುಷ್ಟ ಸಂಪ್ರದಾಯದಲ್ಲಿ ಜಮಾಅತೆ ಇಸ್ಲಾಮಿಗೆ ವಿಶ್ವಾಸವಿಲ್ಲ." ('ಸನ್ಮಾರ್ಗ 6–2–81).

ಇಸ್ಲಾಮಿನ ಪವಿತ್ರ ಕಲಿಮದಲ್ಲಿ ವಿಶ್ವಾಸವಿಡುವವರನ್ನು ತಾವು ಕಾಫಿರ್ ಎನ್ನುವುದಿಲ್ಲವೆಂದು ಒಂದೆಡೆ ಹೇಳುತ್ತಾ ಅದೇ ಸಂಚಿಕೆಯ ಅದೇ ವಿಭಾಗದಲ್ಲಿ, ಕಲಿಮದಲ್ಲಿ ದೃಢವಿಶ್ವಾಸವಿಡುವ ಅಹ್ಮದಿಯರನ್ನು 'ಕಾಫಿರ್' ಎಂದು ಸಾರುವ ಈ 'ಸನ್ಮಾರ್ಗೀ'ಯರ ನ್ಯಾಯನಿಷ್ಠೆಗೆ ಏನೆನ್ನಬೇಕು? ಕಲಿಮದಲ್ಲಿ ವಿಶ್ವಾಸವಿಡುವವರನ್ನು ಕಾಫಿರ್ ಎಂದು ಕರೆಯುವುದು ದುಷ್ಟ ಸಂಪ್ರದಾಯವೆಂದು ಒಪ್ಪಿಕೊಳ್ಳುವ ಇವರು ಅಹ್ಮದಿಯರಿಗೆ ಸಂಬಂಧಪಟ್ಟಂತೆ ತಮ್ಮ ಈ ದುಷ್ಟ ಸಂಪ್ರದಾಯವನ್ನು ತಾವೇ ಬಹಿರಂಗವಾಗಿ ಒಪ್ಪಿಕೊಂಡಂತಾಗಲಿಲ್ಲವೇ? ಇಲ್ಲದಿದ್ದರೆ ಇವರ ಈ ದ್ವಿಮುಖ ನೀತಿಗೆ ಬೇರಾವ ಸಮರ್ಥನೆಯಿದೆ?

ತಮಗೆ ಪದೇ ಪದೇ "ಕುಫ್ರ್" ಫತ್ವ ಕೊಡಲ್ಪಟ್ಟಾಗ, ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್(ಅ)ರವರು ತೋರಿದ ಈ ಕೆಳಗಿನ ಪ್ರತಿಕ್ರಿಯೆಯನ್ನು 'ಸನ್ಮಾರ್ಗೀ'ಯರು ಗಮನವಿಟ್ಟು ಓದಬೇಕಾಗಿ ಅಪೇಕ್ಷಿಸುತ್ತೇನೆ. ಹಝ್ರತ್ ಮಿರ್ಝಾ ಸಾಹೇಬರು ತಮ್ಮ "ಕರಾಮತುಸ್ಸಾದಿಖೀನ್" ಎಂಬ ಗ್ರಂಥದಲ್ಲಿ ಈ ರೀತಿ ಬರೆದಿದ್ದಾರೆ:

"ನಾನೊಬ್ಬ ಯಥಾರ್ಥ ಮುಸ್ಲಿಂ ಆಗಿದ್ದೇನೆ. ಪರಿಶುದ್ಧ ಖುರ್ಆನ್ ಗ್ರಂಥವನ್ನು ಖಾತಮುಲ್ ಕುತುಬ್ ಎಂದೂ ಪ್ರವಾದಿ ಮುಹಮ್ಮದ್ ಪೈಗಂಬರರನ್ನು ಖಾತಮುಲ್ ಅಂಬಿಯಾ ಎಂದೂ ನಾನು ದೃಢವಾಗಿ ನಂಬುತ್ತೇನೆ. ಮಾತ್ರವಲ್ಲ ಇಸ್ಲಾಂ ಮೋಕ್ಷಪ್ರಾಪ್ತಿಗಾಗಿರುವ ಒಂದು ಜೀವಂತ ಮತವೆಂಬುದೂ ನನ್ನ ನಂಬಿಕೆಯಾಗಿದೆ. ದೈವ ವಿಶ್ವಾಸವೂ ಅಂತ್ಯ ದಿನದ ಕುರಿತು ಇರುವ ನಂಬಿಕೆಯೂ ನನ್ನ ಧರ್ಮದ ಒಂದು ಭಾಗವಾಗಿದೆ. ಕಿಬ್ಲಾಕ್ಕೆ ಅಭಿಮುಖವಾಗಿ, ನಿರ್ದಿಷ್ಟಪಡಿಸಲಾದ ದೈನಂದಿನ ಪ್ರಾರ್ಥನೆಗಳನ್ನು ನಾನು ಸಲ್ಲಿಸುತ್ತೇನೆ. ಮಾತ್ರವಲ್ಲ ರಮಝಾನ್ ತಿಂಗಳಲ್ಲಿ ಉಪವಾಸ ವ್ರತವನ್ನು ಆಚರಿಸುತ್ತೇನೆ. ನಿಮ್ಮ ದೃಷ್ಟಿಯಲ್ಲಿ ಇದು 'ಕುಫ್ರ್' ಎಂದಾದರೆ 'ಕಾಫಿರ್' ಎಂದು ಕರೆಸಿಕೊಳ್ಳುವುದಕ್ಕೆ ನನ್ನ ಅಭ್ಯಂತರವಿಲ್ಲ.


ಸರ್ವಶಕ್ತನೂ ಮಹಾಮಹಿಮನೂ ಆದ ಅಲ್ಲಾಹುವಿನ ಹೆಸರಿನಲ್ಲಿ ನಾನಿದೋ ಸತ್ಯ ಪ್ರಮಾಣ ಮಾಡಿ ಹೇಳುತ್ತೇನೆ – ನಾನು ಕಾಫಿರಲ್ಲ. 'ಲಾಇಲಾಹ ಇಲ್ಲಲ್ಲಾಹ್ ಮುಹಮ್ಮದರ್ರಸೂಲುಲ್ಲಾಃ' ಎಂಬುದೇ ನನ್ನ ವಿಶ್ವಾಸ. 'ಲಾಕಿನ್ ರಸೂಲುಲ್ಲಾಹಿ ವ ಖಾತಮುನ್ನಬಿಯ್ಯೀನ್' ಎಂಬುದೇ ಆ ದಿವ್ಯಾತ್ಮನ ಕುರಿತಿರುವ ನನ್ನ ನಂಬಿಕೆ. ನನ್ನ ಈ ಪ್ರಮಾಣ ಸತ್ಯವೆಂಬುದಕ್ಕೆ ಅಲ್ಲಾಹುವಿಗೆ ಎಷ್ಟು ಹೆಸರುಗಳಿವೆಯೋ ಅಷ್ಟು ಸಾರಿ, ಪರಿಶುದ್ಧ ಖುರ್ಆನಿನಲ್ಲಿ ಎಷ್ಟು ಅಕ್ಷರಗಳಿವೆಯೋ ಅಷ್ಟು ಸಲ, ನಬಿ ಶ್ರೇಷ್ಠರ ಉತ್ಕೃಷ್ಟತೆ ಎಷ್ಟಿದೆಯೋ ಅಷ್ಟು ಬಾರಿ ಅಲ್ಲಾಹುವಿನ ಹೆಸರಿನಲ್ಲಿ ನಾನು ಸತ್ಯ ಪ್ರಮಾಣ ಮಾಡುತ್ತೇನೆ. ಅಲ್ಲಾಹುವಿನ ಮತ್ತು ಅವನ ರಸೂಲ್ ಆದ ಮುಹಮ್ಮದ್ ಮುಸ್ತಫಾ (ಸ. ಅ.)ರ ನಿರ್ದೇಶಗಳಿಗೆ ವಿರುದ್ಧವಾಗಿ ನಾನು ಯಾವ ವಿಶ್ವಾಸವನ್ನೂ ಕೈಗೊಂಡಿಲ್ಲ. ಹಾಗೆ ಯಾರಾದರೂ ಹೇಳುವುದಿದ್ದರೆ ಅದು ಅವರ ತಪ್ಪು ಭಾವನೆ ಮಾತ್ರವಾಗಿದೆ. ಇಷ್ಟು ಹೇಳಿದ ಮೇಲೆಯೂ ಇನ್ನೂ ಯಾರಾದರೂ ನನ್ನನ್ನು ಕಾಫಿರ್ ಎನ್ನುವುದಾದರೆ ಮರಣದ ನಂತರ ಅವರು ತಮ್ಮ ಈ ಕೃತ್ಯಕ್ಕಾಗಿ ಹೊಣೆಯಾಗಬೇಕಾದೀತೆಂಬ ಕಟು ಸತ್ಯವನ್ನು ಸದಾ ನೆನಪಿನಲ್ಲಿಟ್ಟಿರಲಿ."

(ಕರಾಮತುಸ್ಸಾದಿಖೀನ್–ಪುಟ 25)

—ಕೆ. ಕೆ. ಬದ್ರುದ್ದೀನ್

Regd. with the Registrar of Newspapers for India. Regd. No. R. N. 27354/75
YUGARASHMI Kannada Quarterly, Aug. 1981 / Zuhoor 1360

English Translation of the HOLY QUARAN
with Arabic Text & Extensive Index




Price :
Rs. 15-00

Postal Charge
Extra

AHMADIYYA ENGLISH LITERATURE

1 INTRODUCTION TO THE STUDY OF HOLY QUARAN 15-00
by Hazrat Mirza Bashiruddin Mahamud Ahmad
2 THE TEACHINGS OF ISLAM 6-00
by Hazrat Mirza Ghulam Ahmad
3 JESUS IN INDIA 2-25
by Hazrat Mirza Ghulam Ahmad
4 CHARACTERISTICS OF THE QUARANIC TEACHINGS 1-00
by Hazrat Mirza Bashiruddin Mahamud Ahmad
5 WHERE DID JESUS DIE ? 2-25
by J. D. Shams, Ex-Imam, London Mosque

Write to: NAZIR DAWAT-O-TABLIGH, Qadian, [Punjab]–143516

Edited and Published by Muhammad Yusuf on behalf of Jamath Ahmadiyya
at 10-23/1008, Ansari Road, Bunder, Mangalore-575 001.
Printed at Karavali Printers, Azizuddin Road, Bunder, Mangalore-575 001.